24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 135 | ನವದೆಹಲಿ | ಬೆಲೆ ₹ 10 | ನವೆಂಬರ್ 12, 2026, ಗುರುವಾರ

ಒಳಪುಟಗಳಲ್ಲಿ

ನಾಳೆ ನಗರಕ್ಕೆ ಪ್ರಧಾನಿ ಮೋದಿ: ಬೆಂಗಳೂರು ಮೆಟ್ರೋ ಗುಲಾಬಿಮಾರ್ಗ, ವಂದೇಭಾರತ್ ರೈಲು ಉದ್ಘಾಟನೆ- ಪು.3

ಇರಾನ್ ತನ್ನ ಸಂವರ್ಧಿತ ಪರಮಾಣುವಿನ ಒಂದೇ ಒಂದು ಕಣವನ್ನೂ ಹೊರಗೆ ಬಿಟ್ಟುಕೊಡದು: ಭದ್ರತಾ ಮುಖ್ಯಸ್ಥ ಮೊಹ್ಸೆನ್ ರೆಝಾಯಿ ಎಚ್ಚರಿಕೆ- ಪು.8

ರೈತರು ಆತಂಕ ಪಡಬೇಕಿಲ್ಲ, ಬರಪರಿಹಾರ ತಲುಪಲಿದೆ: ಸಿಎಂ ಡಿ.ಕೆ.ಶಿವಕುಮಾರ್

2 ಕಂತಿನಲ್ಲಿ 5000 ರೂ. ಖಚಿತ, ಮೊದಲ ಕಂತಿನ 2500 ರೂ. ಬಿಡುಗಡೆ

ಬೆಂಗಳೂರು/ಮೈಸೂರು, ನ.11: ರಾಜ್ಯದ ರೈತ ಬಾಂಧವರಿಗೆ ಬರ ಪರಿಹಾರದ ಕುರಿತು ಯಾವುದೇ ಗೊಂದಲ ಬೇಡ. ಪ್ರತಿಯೊಬ್ಬ ಅರ್ಹ ರೈತನಿಗೂ ಎರಡು ಕಂತಿನಲ್ಲಿ 5,000 ರೂ. ಬಿಡುಗಡೆ ಮಾಡಲಾಗುತ್ತದೆ. ಈಗಾಗಲೇ ಮೊದಲನೇ ಕಂತಿನ ಹಣ ಅನೇಕ ರೈತರನ್ನು ತಲುಪಿದೆ. ಪ್ರತಿ ರೈತರಿಗೆ ಹಣ ತಲುಪಿಸಲು ಸರ್ಕಾರ ಸೂತ್ರ ರಚಿಸಿದೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ಅಭಯ ನೀಡಿದರು.

ಸದಾಶಿವನಗರದ ನಿವಾಸದ ಬಳಿ ಹಾಗೂ ಮೈಸೂರು ವಿಮಾನ ನಿಲ್ದಾಣದ ಬಳಿ ಶಿವಕುಮಾರ್ ಅವರು ಮಾಧ್ಯಮಗಳಿಗೆ ಬುಧವಾರ ಪ್ರತಿಕ್ರಿಯೆ ನೀಡಿದರು. 'ಪ್ರತಿ ರೈತರಿಗೂ ಒಂದು ನಿರ್ದಿಷ್ಟ ಮೊತ್ತವನ್ನು ನಿಗದಿಪಡಿಸಲಾಗಿದೆ. ಸರಿಯಾದ ಖಾತೆಗಳಿಗೆ ಹಣ ತಲುಪಿದೆ. ಆದರೆ ಹಣ ತಲುಪದ ರೈತರ ಖಾತೆಯಲ್ಲಿ ಇರುವ ಅಡತಡೆ ನಿವಾರಿಸಿ ಪಾವತಿಸಲಾಗುವುದು. ಹೀಗಾಗಿ ರೈತರು ಆತಂಕ ಪಡುವ ಅಗತ್ಯವಿಲ್ಲ' ಎಂದು ಸ್ಪಷ್ಟನೆ ನೀಡಿದರು.

ಕೇಂದ್ರ ಕೊಡದಿದ್ದರೂ ರಾಜ್ಯವೇ ಕೊಡುತ್ತದೆ: ಒಂದು ವೇಳೆ ರೈತರಿಗೆ ತಲುಪಬೇಕಾದ ಮೊತ್ತದಲ್ಲಿ ಹೆಚ್ಚು-ಕಮ್ಮಿಯಾಗಿದ್ದರೆ ಅದನ್ನು ಸರಿಪಡಿಸಲಾಗುವುದು. ಕೇಂದ್ರ ಸರ್ಕಾರ ಪರಿಹಾರ ಬಿಡುಗಡೆ ಮಾಡದೇ ಇದ್ದರೂ ನಮ್ಮ ಸರ್ಕಾರ ರೈತರಿಗೆ ನುಡಿದಂತೆ ಎರಡು ಕಂತುಗಳಲ್ಲಿ 5 ಸಾವಿರ ರೂ. ಪರಿಹಾರ ಪಾವತಿ ಮಾಡುತ್ತದೆ' ಎಂದು ಭರವಸೆ ನೀಡಿದರು.



ತಾಂತ್ರಿಕ ಸಮಸ್ಯೆ ಇದ್ದರೆ ಸರಿಪಡಿಸುತ್ತೇವೆ: 'ಒಂದೇ ಬಟನ್ ಮೂಲಕ ಎಲ್ಲಾ ರೈತರ ಖಾತೆಗೂ ಹಣ ವರ್ಗಾವಣೆಯಾಗುತ್ತಿದೆ. ಆದರೆ ಕೆಲವು ಬ್ಯಾಂಕ್ ಖಾತೆಗಳು ಸರಿಯಯಾಗಿಲ್ಲ ಹಾಗೂ ಸಾಲದ ಬಾಬತ್ತಿಗೆ ಲಿಂಕ್ ಆಗಿದೆ. ಎಲ್ಲದರ ದಾಖಲೆಗಳನ್ನು ಪರಿಶೀಲಿಸಿ ಪರಿಹಾರ ಮೊತ್ತ ಶೀಘ್ರ ಪಾವತಿಸಲಾಗುವುದು' ಎಂದರು.

ಎಥೆನಾಲ್ ಕಲಬೆರಕೆ ಬಗ್ಗೆ ಉತ್ತರಿಸಿ, ಬಿಜೆಪಿ ನಾಯಕರು ಪ್ರತಿಭಟನೆ ಮಾಡಲಿ: ಬೆಲೆ ಏರಿಕೆ ವಿರುದ್ಧ ಬಿಜೆಪಿ ನಾಯಕರು ಬೆಂಗಳೂರಲ್ಲಿ ಪ್ರತಿಭಟನೆ ಮಾಡುತ್ತಿರುವ ಬಗ್ಗೆ ಕೇಳಿದಾಗ, 'ಮಾಡಲಿ, ಅವರು ಮಾಡುತ್ತಿರುವುದು ಪ್ರತಿಭಟನೆಯಲ್ಲ ರಾಜಕಾರಣ. ಕೇಂದ್ರ ಸರ್ಕಾರ ತೈಲಬೆಲೆ ಏರಿಸಿದಾಗ ಏಕೆ ಪ್ರತಿಭಟನೆ ಮಾಡಲಿಲ್ಲ? ಎಥೆನಾಲ್ ಶೇ.20ರಷ್ಟು ಬೆರೆಸುವ ಬದಲು ಶೇ.30ರಷ್ಟು ಬೆರೆಸಿದ್ದಾರೆ.

ಇದರಿಂದ ರಾಜ್ಯದ ಕೋಟ್ಯಂತರ ವಾಹನಗಳಿಗೆ ತೊಂದರೆಯಾಗಿದೆ. ಎಂಜಿನ್‌ಗಳು ಕೆಟ್ಟುಹೋಗಿ ನಷ್ಟವಾಗಿದೆ. ಇವೆಲ್ಲ ಬಿಜೆಪಿ ಅವರಿಗೆ ಕಾಣುವುದಿಲ್ಲವೇ? ಈ ಅವಾಂತರ ಅವರಿಗೆ ತಿಳಿದಿಲ್ಲವೇ' ಎಂದು ಪ್ರಶ್ನಿಸಿದರು.

'ಎಥೆನಾಲ್ ಅವೈಜ್ಞಾನಿಕ ಬೆರೆಕೆಗೆ ಸಂಬಂಧಿಸಿದಂತೆ ನಮ್ಮ ಆಹಾರ ಮಂತ್ರಿಗಳು ರಾಜ್ಯದ 67ಕಡೆ ಪರೀಕ್ಷೆ ನಡೆಸಿ ಸತ್ಯಾಸತ್ಯತೆ ಅರಿತಿದ್ದಾರೆ. ಈ ಕೃತ್ಯದ ಬಗ್ಗೆ ಸಾಕ್ಷೀ ಸಮೇತ ಕೇಂದ್ರ ಸರ್ಕಾರದ ಗಮನಕ್ಕೂ ತಂದಿದ್ದಾರೆ. ಕಲಬೆರೆಕೆ ತೈಲ ಸರಬರಾಜು ಮಾಡಿ ರಾಜ್ಯದ ಜನರಿಗೆ ಹೊಡೆತ ನೀಡಿರುವುದಕ್ಕೆ ಯಾರು ಜವಾಬ್ದಾರಿ? ಕೇಂದ್ರದ ಸಚಿವರು ಇಲ್ಲ, ಇಲ್ಲ ಎನ್ನುತ್ತಿದ್ದಾರೆ. ಆದರೆ, ನಮ್ಮ ಸ್ಯಾಂಪಲ್‌ಗಳು ಸಾಕ್ಷಿಗೆ ಇವೆ. ಮೊದಲು ಇದಕ್ಕೆ ಬಿಜೆಪಿಯವರು ಉತ್ತರ ಕೊಡಲಿ ಎಂದು ಸವಾಲು ಹಾಕಿದರು.

ಬಿಜೆಪಿ ನಾಯಕರು ಕಾಂಗ್ರೆಸ್ ವಿರುದ್ಧ ಅವಾಚ್ಯ ಶಬ್ದ ಬಳಕೆ ಮಾಡಿರುವ ಬಗ್ಗೆ ಕೇಳಿದಾಗ, ಅವರ ಖುಷಿಗೆ ಮಾತನಾಡುತ್ತಿದ್ದಾರೆ. ಛಲವಾದಿ ನಾರಾಯಣಸ್ವಾಮಿ ಅವರು ತುಂಡುತುಂಡಾಗಿ ಕತ್ತರಿಸಿ ಸಮುದ್ರಕ್ಕೆ ಹಾಕುತ್ತೇನೆ ಅಂದರು, ಇನ್ನೊಬ್ಬರು ಪಕ್ಷದ ಅಧ್ಯಕ್ಷರು ನನ್ನಕ್ಕಳು ಅಂತ ಜರಿದರು. ಹಾಗಾದರೆ, ನಾವೆಲ್ಲಾ ವಿಜಯೇಂದ್ರರ ಮಕ್ಕಳಾ ಬಿಜೆಪಿ ಅವರು ಆತ್ಮಸಂತೋಷಕ್ಕೆ ಬೇರೆಯವರನ್ನು ಬೈಯುತ್ತಿದ್ದಾರೆಂದು ಸಿಎಂ ಕಿಡಿಕಾರಿದರು.

ಮೂರು ಹಂತಗಳಲ್ಲಿ ನಿಗಮ ಮಂಡಳಿಗಳಿಗೆ ನೇಮಕ

ಮೂರು ಹಂತದಲ್ಲಿ ನಿಗಮ ಮಂಡಳಿಗೆ ನೇಮಕಾತಿ ಆಗುತ್ತದೆ. ಮೊದಲ ಹಂತದ ಮಂಡಳಿ ನಿರ್ದೇಶಕರ 500 ಜನರ ಪಟ್ಟಿ ಬಿಡುಗಡೆ ಆಗಲಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.
ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಬುಧವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಮೂರು ಹಂತದಲ್ಲಿ ನಿಗಮ ಮಂಡಳಿಗೆ ನೇಮಕಾತಿ ಆಗುತ್ತದೆ. ಈ ಪೈಕಿ ಇದೀಗ ಕೇವಲ 500 ಜನರ ಬೋರ್ಡ್ ಆಫ್ ಡೈರೆಕ್ಟರ್‌ಗಳ ಪಟ್ಟಿ ಮಾತ್ರ ಬಿಡುಗಡೆ ಆಗಲಿದ್ದು, ಮುಂದಿನ ದಿನಗಳಲ್ಲಿ ನಿಗಮ ಮಂಡಳಿಗಳಿಗೆ ಹಿರಿಯ ಶಾಸಕರನ್ನು ಸಹ ಪರಿಗಣನೆ ಮಾಡಲಾಗುವುದು ಎಂದು ತಿಳಿಸಿದರು.

ವಿವಿಧ ಯೋಜನೆಗಳಿಗೆ 77,101 ಕೋಟಿ ರೂ. ಅನುದಾನ

ನವದೆಹಲಿ, ನ.11: ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಐದು ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಲಾಗಿದ್ದು, ಒಟ್ಟು 77,101 ಕೋಟಿ ರೂ. ಅನುದಾನಕ್ಕೆ ಅನುಮೋದನೆ ನೀಡಲಾಗಿದೆ. ದೇಶದ ಸಾಂಸ್ಕೃತಿಕ ಪರಂಪರೆ ಸಂರಕ್ಷಣೆ, ನಗರ ಸಾರಿಗೆ ವ್ಯವಸ್ಥೆ ಸುಧಾರಣೆ, ರೈತರಿಗೆ ರಸಗೊಬ್ಬರ ಸಬ್ಸಿಡಿ ಹಾಗೂ ಸಣ್ಣ ಉದ್ಯಮಿಗಳಿಗೆ ಸಾಲಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಈ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ.

ದೆಹಲಿಯ ಐತಿಹಾಸಿಕ ನಾರ್ತ್ ಬ್ಲಾಕ್ ಮತ್ತು ಸೌತ್ ಬ್ಲಾಕ್ ಕಟ್ಟಡಗಳನ್ನು ಮರುಬಳಕೆ ಮಾಡಿಕೊಂಡು 'ಯುಗೆ ಯುಗೀನ್ ಭಾರತ' ವಸ್ತುಸಂಗ್ರಹಾಲಯ ನಿರ್ಮಿಸಲು ಸಂಪುಟ ಒಪ್ಪಿಗೆ ನೀಡಿದೆ. ಇದಕ್ಕಾಗಿ 3,230 ಕೋಟಿ ರೂ. ವೆಚ್ಚ ನಿಗದಿಪಡಿಸಲಾಗಿದೆ. ಒಂದು ಲಕ್ಷ ಚದರ ಮೀಟರ್‌ಗಿಂತಲೂ ಹೆಚ್ಚು ಪ್ರದರ್ಶನ ಸ್ಥಳ ಹೊಂದಲಿರುವ ಈ ವಸ್ತುಸಂಗ್ರಹಾಲಯವು ವಿಶ್ವದ ಅತಿದೊಡ್ಡ ವಸ್ತುಸಂಗ್ರಹಾಲಯವಾಗುವ ಉದ್ದೇಶ ಹೊಂದಿದೆ. ಭಾರತದ ನಾಗರಿಕತೆಯ ನಿರಂತರತೆ, ವೈವಿಧ್ಯತೆ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಇಲ್ಲಿ ಪ್ರದರ್ಶಿಸಲಾಗುತ್ತದೆ. ದಿನಕ್ಕೆ 30 ಸಾವಿರ ಹಾಗೂ ವರ್ಷಕ್ಕೆ ಒಂದು ಕೋಟಿ ಪ್ರವಾಸಿಗರಿಗೆ ಭೇಟಿ ನೀಡುವ ವ್ಯವಸ್ಥೆ ಕಲ್ಪಿಸುವ ಯೋಜನೆಯಿದೆ. ಆಧುನಿಕ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಮತ್ತು ವರ್ಚುವಲ್ ರಿಯಾಲಿಟಿ ಅನುಭವಗಳೂ ಇರಲಿವೆ.

ಇನ್ನು ಉತ್ತರ ಪ್ರದೇಶದ ನೋಯ್ಡಾ ಮತ್ತು ಗ್ರೇಟರ್ ನೋಯ್ಡಾ ನಡುವಿನ ಮೆಟ್ರೋ ಸಂಪರ್ಕ ವಿಸ್ತರಣೆಗೆ 2,390 ಕೋಟಿ ರೂ. ಅನುಮೋದನೆ ನೀಡಲಾಗಿದೆ.

ಕೇಂದ್ರ ಸಚಿವ ಸಂಪುಟದಿಂದ ಐದು ಮಹತ್ವದ ನಿರ್ಧಾರ

ಯುಗೇ ಯುಗೀನ್ ಭಾರತ ವಸ್ತುಸಂಗ್ರಹಾಲಯ ನಿರ್ಮಾಣಕ್ಕೆ 3,230 ಕೋಟಿ ರೂ.

ನೋಯ್ಡಾ-ಗ್ರೇಟರ್ ನೋಯ್ಡಾ ಮೆಟ್ರೋ ವಿಸ್ತರಣೆಗೆ 2,390 ಕೋಟಿ ರೂ.

ಹಿಂಗಾರು ಹಂಗಾಮಿನ ರಸಗೊಬ್ಬರ ಸಬ್ಸಿಡಿಗೆ 62,370 ಕೋಟಿ ರೂ.

ನೋಯ್ಡಾ ಸೆಕ್ಟರ್ 51ರಿಂದ ಗ್ರೇಟರ್ ನೋಯ್ಡಾ ಸೆಕ್ಟರ್ 4ರವರೆಗೆ 8.5 ಕಿ.ಮೀ. ಉದ್ದದ ಎತ್ತರಿಸಿದ ಮೆಟ್ರೋ ಮಾರ್ಗ ನಿರ್ಮಾಣವಾಗಲಿದೆ. ಈ ಮಾರ್ಗದಲ್ಲಿ ಐದು ಹೊಸ ನಿಲ್ದಾಣಗಳು ಬರಲಿದ್ದು, ನಾಲ್ಕು ವರ್ಷಗಳಲ್ಲಿ ಕಾಮಗಾರಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ನೋಯ್ಡಾ ಮತ್ತು ಗ್ರೇಟರ್ ನೋಯ್ಡಾ ಪಶ್ಚಿಮ ಭಾಗದ ಜನರಿಗೆ ದೆಹಲಿ ಮೆಟ್ರೋ ಸಂಪರ್ಕ ಸುಲಭವಾಗಲಿದೆ.

ಹಿಂಗಾರು ಹಂಗಾಮು 2026-27ಕ್ಕೆ ರಸಗೊಬ್ಬರ ಸಬ್ಸಿಡಿ ನೀಡಲು 62,370 ಕೋಟಿ ರೂ. ಅನುದಾನಕ್ಕೆ ಸಂಪುಟ ಅನುಮೋದನೆ ನೀಡಿದೆ. ಹಿಂದಿನ ರಬಿ ಹಂಗಾಮಿನಲ್ಲಿ 37,952 ಕೋಟಿ ರೂ. ಅನುದಾನ ನೀಡಲಾಗಿತ್ತು. ಈ ಬಾರಿ ಶೇ.64ರಷ್ಟು ಹೆಚ್ಚಳವಾಗಿದೆ. ಡಿಎಪಿ ರಸಗೊಬ್ಬರದ 50 ಕೆ.ಜಿ. ಚೀಲಕ್ಕೆ 1,350 ರೂ. ನಿಗದಿತ ಬೆಲೆಯಲ್ಲಿ ಲಭ್ಯತೆ ಮುಂದುವರಿಸಲು ವಿಶೇಷ ವ್ಯವಸ್ಥೆ ಮಾಡಲಾಗಿದೆ. ರೈತರಿಗೆ ಅಗತ್ಯ ರಸಗೊಬ್ಬರ ಸಕಾಲದಲ್ಲಿ ಲಭ್ಯವಾಗುವಂತೆ ಮಾಡುವುದರ ಜೊತೆಗೆ ದೇಶೀಯ ಉತ್ಪಾದನೆ ಹೆಚ್ಚಿಸುವ ಉದ್ದೇಶವನ್ನೂ ಈ ಪ್ಯಾಕೇಜ್ ಹೊಂದಿದೆ.

ಪ್ರಧಾನಮಂತ್ರಿ ಮುದ್ರಾ ಯೋಜನೆಯಡಿ ಸಣ್ಣ ಉದ್ಯಮಿಗಳಿಗೆ ಸಾಲ ಖಾತರಿ ನಿಧಿಯನ್ನು ಮುಂದಿನ ಐದು ವರ್ಷಗಳವರೆಗೆ ಮುಂದುವರಿಸಲು 5,000 ಕೋಟಿ ರೂ. ಅನುಮೋದಿಸಲಾಗಿದೆ. ಈ ಯೋಜನೆಯಡಿ 20 ಲಕ್ಷ ರೂ.ವರೆಗಿನ ಸಾಲಗಳಿಗೆ ಖಾತರಿ ಒದಗಿಸಲಾಗುತ್ತದೆ. ಇದರಿಂದ ಸುಮಾರು 12.60 ಲಕ್ಷ ಕೋಟಿ ರೂ. ಮೌಲ್ಯದ ಮುದ್ರಾ ಸಾಲಗಳಿಗೆ ಬೆಂಬಲ ದೊರೆಯುವ ನಿರೀಕ್ಷೆಯಿದೆ. ಸಾಲ ಖಾತರಿ ಶುಲ್ಕವನ್ನು ಶೇ.1ರಿಂದ ಶೇ.0.75ಕ್ಕೆ ಇಳಿಸಲಾಗಿದೆ.

ಇದೇ ವೇಳೆ ಮಹಿಳೆಯರು ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ಉದ್ಯಮಿಗಳಿಗೆ ನೆರವಾಗುವ ಸ್ಟ್ಯಾಂಡ್ ಅಪ್ ಇಂಡಿಯಾ ಯೋಜನೆಯ ಸಾಲ ಖಾತರಿ ನಿಧಿಯನ್ನು ಐದು ವರ್ಷಗಳವರೆಗೆ ಮುಂದುವರಿಸಲು 4,111 ಕೋಟಿ ರೂ. ಅನುದಾನಕ್ಕೆ ಅನುಮೋದನೆ ನೀಡಲಾಗಿದೆ. ಈ ಯೋಜನೆಯಡಿ ಹೊಸ ಉದ್ಯಮ ಆರಂಭಿಸುವವರಿಗೆ 10 ಲಕ್ಷದಿಂದ ಒಂದು ಕೋಟಿ ರೂ.ವರೆಗಿನ ಸಾಲಗಳಿಗೆ ಖಾತರಿ ಒದಗಿಸಲಾಗುತ್ತದೆ.

ಕುಲ್ಗಾಮ್‌ನಲ್ಲಿ ಸಿಆರ್‌ಪಿಎಫ್ ಯೋಧರ ಮೇಲೆ ಉಗ್ರರ ಗುಂಡಿನ ದಾಳಿ: ಮೂವರಿಗೆ ಗಾಯ, ಇಬ್ಬರ ಸ್ಥಿತಿ ಗಂಭೀರ

ಶ್ರೀನಗರ, ನ.11: ಜಮ್ಮು ಮತ್ತು ಕಾಶ್ಮೀರದ ಕುಲ್ಗಾಮ್ ಜಿಲ್ಲೆಯಲ್ಲಿ ಸಿಆರ್‌ಪಿಎಫ್ ಯೋಧರನ್ನು ಗುರಿಯಾಗಿಸಿಕೊಂಡು ಉಗ್ರರು ಗುಂಡಿನ ದಾಳಿ ನಡೆಸಿದ್ದಾರೆ. ಬುಧವಾರ ಮಧ್ಯಾಹ್ನ ನಡೆದ ಈ ದಾಳಿಯಲ್ಲಿ ಸಿಆರ್‌ಪಿಎಫ್‌ನ 46ನೇ ಬೆಟಾಲಿಯನ್ನ ಮೂವರು ಸಿಬ್ಬಂದಿ ಗಾಯಗೊಂಡಿದ್ದಾರೆ. ಗಾಯಾಳುಗಳಲ್ಲಿ ಇಬ್ಬರ ಆರೋಗ್ಯ ಸ್ಥಿತಿ ಗಂಭೀರವಾಗಿದೆ.



ಕುಲ್ಗಾಮ್ ಜಿಲ್ಲೆಯ ಮಿರ್ ಬಜಾರ್ ಸಮೀಪದ ನೌಪೋರಾ ಅಖ್ರಾನ್ ಪ್ರದೇಶದಲ್ಲಿ ಮಧ್ಯಾಹ್ನ ಸುಮಾರು 2.15ರ ವೇಳೆಗೆ ಈ ಘಟನೆ ನಡೆದಿದೆ. ಚೆಕ್‌ಪೋಸ್ಟ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಿಆರ್ಪಿಎಫ್ ಸಿಬ್ಬಂದಿಯ ಮೇಲೆ ಮೋಟಾರ್ಸೈಕಲ್ನಲ್ಲಿ ಬಂದ ಅಪರಿಚಿತ ದಾಳಿಕೋರರು ಏಕಾಏಕಿ ಗುಂಡಿನ ದಾಳಿ ನಡೆಸಿದ್ದಾರೆ. ದಾಳಿ ನಡೆಸಿದ ಬಳಿಕ ದುಷ್ಕರ್ಮಿಗಳು ಸ್ಥಳದಿಂದ ಪರಾರಿಯಾಗಿದ್ದಾರೆ.

ವರದಿಗಳ ಪ್ರಕಾರ, ದಾಳಿಯಲ್ಲಿ ಗಾಯಗೊಂಡ ಸಿಆರ್‌ಪಿಎಫ್ ಸಿಬ್ಬಂದಿಯನ್ನು ಹೆಡ್‌ಕಾನ್ಸ್‌ಟೇಬಲ್ (ಜಿಡಿ) ಸೋಮವೀರ್, ಕಾನ್ಸ್‌ಟೇಬಲ್(ಜಿಡಿ) ಸಂತಾನೋ, ಕಾನ್ಸ್‌ಟೇಬಲ್(ಜಿಡಿ) ರಾಕೇಶ್ ದಾಸ್ ಎಂದು ಗುರುತಿಸಲಾಗಿದೆ. ಮೂವರಿಗೂ ಗುಂಡೇಟಿನಿಂದ ಗಾಯಗಳಾಗಿವೆ. ಒಬ್ಬ ಯೋಧನ ಕಾಲಿಗೆ, ಮತ್ತೊಬ್ಬರ ತೋಳಿಗೆ ಹಾಗೂ ಮೂರನೇ ಯೋಧನ ಬೆನ್ನಿನ ಭಾಗಕ್ಕೆ ಗುಂಡು ತಗುಲಿದೆ.

ಗಾಯಗೊಂಡ ಯೋಧರನ್ನು ಹೆಚ್ಚಿನ ಚಿಕಿತ್ಸೆಗಾಗಿ ಅನಂತ್‌ನಾಗ್ ಜಿಲ್ಲೆಯ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಮೂವರ ಆರೋಗ್ಯ ಪರಿಸ್ಥಿತಿಗೆ ಸಂಬಂಧಿಸಿದಂತೆ ಲಭ್ಯವಿರುವ ವರದಿಗಳಲ್ಲಿ ಗಾಯಗಳ ಸ್ವರೂಪವನ್ನು ಉಲ್ಲೇಖಿಸಲಾಗಿದೆಯಾದರೂ, ಪ್ರತ್ಯೇಕವಾಗಿ ಪ್ರತಿಯೊಬ್ಬರ ಸ್ಥಿತಿಯ ಕುರಿತು ಅಧಿಕೃತ ವೈದ್ಯಕೀಯ ಮಾಹಿತಿ ಬಿಡುಗಡೆಯಾಗಿಲ್ಲ.

ಉಗ್ರರಿಗಾಗಿ ಶೋಧ

ಘಟನೆ ಬೆನ್ನಲ್ಲೇ ಭದ್ರತಾ ಪಡೆಗಳು ಅಖ್ರಾನ್ ಪ್ರದೇಶವನ್ನು ಸುತ್ತುವರಿದಿವೆ. ಕ್ಷಿಪ್ರ ಪ್ರತಿಕ್ರಿಯಾ ತಂಡಗಳು ಸ್ಥಳಕ್ಕೆ ಧಾವಿಸಿದ್ದು, ಉಗ್ರರ ಪತ್ತೆಗಾಗಿ ಶೋಧ ಕಾರ್ಯಾಚರಣೆ ಆರಂಭಿಸಿವೆ. ದಾಳಿ ನಡೆಸಿದವರ ಗುರುತು ಹಾಗೂ ಅವರು ಯಾವ ಉಗ್ರ ಸಂಘಟನೆಗೆ ಸೇರಿದವರು ಎಂಬುದು ಇನ್ನೂ ಬಹಿರಂಗವಾಗಿಲ್ಲ.


ದೆಹಲಿ-ಎನ್‌ಸಿಆರ್‌ನಲ್ಲಿ ವಿಷಗಾಳಿ: 500 ಗಡಿ ದಾಟಿದ ಎಕ್ಯುಐ

ದೀಪಾವಳಿಗೂ ಮುನ್ನವೇ ಮೂರು ವರ್ಷಗಳಲ್ಲೇ ಗರಿಷ್ಠ ಮಾಲಿನ್ಯ ದಾಖಲು

ನವದೆಹಲಿ, ನ.11: ರಾಷ್ಟ್ರ ರಾಜಧಾನಿ ದೆಹಲಿ ಸೇರಿ ದೆಹಲಿ-ಎನ್‌ಸಿಆರ್ ಪ್ರದೇಶದಲ್ಲಿ ವಾಯುಮಾಲಿನ್ಯ ತೀವ್ರ ಸ್ವರೂಪ ಪಡೆದುಕೊಂಡಿದೆ. ದೀಪಾವಳಿ ಹಬ್ಬಕ್ಕೂ ಮುನ್ನವೇ ವಾಯುಮಾಲಿನ್ಯದ ಪ್ರಮಾಣ ಕಳೆದ 3ವರ್ಷಗಳಲ್ಲೇ ಗರಿಷ್ಠ ಮಟ್ಟಕ್ಕೆ ತಲುಪಿತ್ತು ಎಂದು ವಿಜ್ಞಾನ ಮತ್ತು ಪರಿಸರ ಕೇಂದ್ರ (ಸಿಎಸ್‌ಇ) ಬಿಡುಗಡೆ ಮಾಡಿರುವ ವರದಿ ತಿಳಿಸಿದೆ. ಇದರ ನಡುವೆ ದೆಹಲಿ ಹಾಗೂ ಸುತ್ತಮುತ್ತಲಿನ ಹಲವು ಪ್ರದೇಶಗಳಲ್ಲಿ ವಾಯು ಗುಣಮಟ್ಟ ಸೂಚ್ಯಂಕ 500ರ ಗಡಿ ದಾಟಿದೆ.

ಸಿಎಸ್‌ಇ ವರದಿ ಪ್ರಕಾರ, ದೀಪಾವಳಿಗೂ ಮುನ್ನದ ವಾರದಲ್ಲಿ ದೆಹಲಿಯ ಸರಾಸರಿ ಪಿಎಂ2.5 ಪ್ರಮಾಣ ಪ್ರತಿ ಘನ ಮೀಟರ್‌ಗೆ 236 ಮೈಕ್ರೋಗ್ರಾಂ ದಾಖಲಾಗಿದೆ. ಇದು 2025ರಲ್ಲಿ ದಾಖಲಾಗಿದ್ದ 120 ಮೈಕ್ರೋಗ್ರಾಂಗಿಂತ ಶೇ.97ರಷ್ಟು ಹೆಚ್ಚಾಗಿದೆ. 2024ರಲ್ಲಿ ದಾಖಲಾಗಿದ್ದ 179 ಮೈಕ್ರೋಗ್ರಾಂಗಿಂತಲೂ ಶೇ.32ರಷ್ಟು ಏರಿಕೆಯಾಗಿದೆ. ಕಳೆದ ಮೂರು ವರ್ಷಗಳಿಗೆ ಹೋಲಿಸಿದರೆ ಈ ಬಾರಿಯ ದೀಪಾವಳಿ ಪೂರ್ವ ಮಾಲಿನ್ಯ ಅತ್ಯಧಿಕವಾಗಿದೆ ಎಂದು ವರದಿ ಹೇಳಿದೆ.

ಬುಧವಾರ ಬೆಳಗ್ಗೆಯೂ ದೆಹಲಿ-ಎನ್‌ಸಿಆರ್‌ನ ಹಲವು ಪ್ರದೇಶಗಳಲ್ಲಿ ಪರಿಸ್ಥಿತಿ ಗಂಭೀರವಾಗಿತ್ತು. ಗಾಜಿಯಾಬಾದ್‌ನಲ್ಲಿ



590 ಎಕ್ಯುಐ, ದೆಹಲಿಯ ಆನಂದ್ ವಿಹಾರ್‌ನಲ್ಲಿ 558 ಎಕ್ಯುಐ ದಾಖಲಾಗಿದೆ. ಪಂಜಾಬಿ ಬಾಗ್‌ನಲ್ಲಿ 508, ಫರಿದಾಬಾದ್ ಸೆಕ್ಟರ್ 11ರಲ್ಲಿ 509 ಹಾಗೂ ನೋಯ್ಡಾದಲ್ಲಿ 495, ಜನಪಥ್‌ನಲ್ಲಿ 451, ಗುರುಗ್ರಾಮದಲ್ಲಿ 400 ಎಕ್ಯುಐ ದಾಖಲಾಗಿದೆ.

ದೆಹಲಿ ನಗರದ ಸರಾಸರಿ ಎಕ್ಯುಐ ಹಿಂದಿನ 344ರಿಂದ 299ಕ್ಕೆ ಇಳಿಕೆಯಾಗಿದ್ದರೂ, ಹಲವು ಪ್ರದೇಶಗಳಲ್ಲಿ ಮಾಲಿನ್ಯದ ಪ್ರಮಾಣ ಆತಂಕಕಾರಿ ಮಟ್ಟದಲ್ಲಿಯೇ ಮುಂದುವರಿದಿದೆ. ಐಐಟಿ ದೆಹಲಿಯಲ್ಲಿ 380, ಚಾಂದನಿ ಚೌಕ್‌ನಲ್ಲಿ 372, ಐಟಿಒದಲ್ಲಿ 366 ಹಾಗೂ ಬುರಾರಿ ಕ್ರಾಸಿಂಗ್‌ನಲ್ಲಿ 355 ಎಕುಕ್ಯೂಐ ದಾಖಲಾಗಿದೆ.

ಸಿಎಸ್‌ಇ ವಿಶ್ಲೇಷಣೆ ಪ್ರಕಾರ, ದೆಹಲಿಯ ಸ್ಥಳೀಯ ಮಾಲಿನ್ಯ ಮೂಲಗಳ ಪೈಕಿ ವಾಹನ ಸಂಚಾರದ ಪಾಲು ಶೇ.52ರಷ್ಟಿದೆ. ನಿರ್ಮಾಣ ಚಟುವಟಿಕೆಗಳ ಪಾಲು ಶೇ.7ರಷ್ಟಿದೆ. ವಾಹನ ದಟ್ಟಣೆಯಿಂದ ಹೊರಸೂಸುವ ನೈಟ್ರೋಜನ್ ಡೈಆಕ್ಸೈಡ್ ಪ್ರಮಾಣ ಸಂಜೆ ಹೆಚ್ಚಾಗಿ ಮಧ್ಯರಾತ್ರಿಯವರೆಗೂ ವಾತಾವರಣದಲ್ಲಿ ಉಳಿಯುತ್ತಿದೆ ಎಂದು ವರದಿ ತಿಳಿಸಿದೆ.

ಮಾಲಿನ್ಯ ನಿಯಂತ್ರಣಕ್ಕಾಗಿ ದೆಹಲಿ-ಎನ್‌ಸಿಆರ್‌ನಲ್ಲಿ ಗ್ರೇಡೆಡ್ ರೆಸ್ಪಾನ್ಸ್ ಆಕ್ಷನ್ ಪ್ಲಾನ್ 3ನೇ ಹಂತದ ನಿರ್ಬಂಧಗಳನ್ನು ಜಾರಿಗೊಳಿಸಲಾಗಿದೆ. ಧೂಳು ಸೃಷ್ಟಿಸುವ ನಿರ್ಮಾಣ ಕಾಮಗಾರಿಗಳಿಗೆ ನಿರ್ಬಂಧ ವಿಧಿಸಲಾಗಿದ್ದು, ಬಿಎಸ್-3 ಪೆಟ್ರೋಲ್ ಹಾಗೂ ಬಿಎಸ್-4 ಡೀಸೆಲ್ ವಾಹನಗಳ ಸಂಚಾರಕ್ಕೂ ಕಡಿವಾಣ ಹಾಕಲಾಗಿದೆ. 5ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಆನ್ಲೈನ್ ತರಗತಿಗಳ ವ್ಯವಸ್ಥೆ ಸೇರಿದಂತೆ ಹಲವು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ.

ನಿರ್ಬಂಧ ಹೇರಿದರೂ ಇಳಿಕೆಯಾಗದ ವಾಹನದಟ್ಟಣೆ

ನಿರ್ಬಂಧಗಳ ನಡುವೆಯೂ ವಾಹನ ದಟ್ಟಣೆ ಮತ್ತು ಮಾಲಿನ್ಯದಲ್ಲಿ ನಿರೀಕ್ಷಿತ ಇಳಿಕೆ ಕಂಡುಬಂದಿಲ್ಲ ಎಂದು ಸಿಎಸ್‌ಇ ವರದಿ ಆತಂಕ ವ್ಯಕ್ತಪಡಿಸಿದೆ. ಮಕ್ಕಳು, ವೃದ್ಧರು ಹಾಗೂ ಉಸಿರಾಟದ ಸಮಸ್ಯೆ ಇರುವವರು ವಿಶೇಷ ಮುನ್ನೆಚ್ಚರಿಕೆ ವಹಿಸುವಂತೆ ಆರೋಗ್ಯ ತಜ್ಞರು ಸಲಹೆ ನೀಡಿದ್ದಾರೆ. ಮಾಸ್ಕ್ ಧರಿಸುವುದು, ಅನಗತ್ಯವಾಗಿ ಹೊರಗೆ ಓಡಾಡುವುದನ್ನು ತಪ್ಪಿಸುವುದು ಹಾಗೂ ಮಾಲಿನ್ಯ ಹೆಚ್ಚಿರುವ ಸಮಯದಲ್ಲಿ ಹೊರಾಂಗಣ ಚಟುವಟಿಕೆಗಳನ್ನು ಕಡಿಮೆ ಮಾಡುವುದು ಅಗತ್ಯವಾಗಿದೆ.

ಮದರ್ ಡೈರಿ ಹಾಲಿನ ದರ ಲೀಟರ್‌ಗೆ 4 ರೂ. ಏರಿಕೆ; ಇಂದಿನಿಂದ ಪರಿಷ್ಕೃತ ದರ ಜಾರಿ

ನವದೆಹಲಿ, ನ.11: ದೆಹಲಿ-ಎನ್‌ಸಿಆರ್ ಪ್ರದೇಶದ ಗ್ರಾಹಕರಿಗೆ ಬೆಲೆ ಏರಿಕೆಯ ಮತ್ತೊಂದು ಹೊರೆ ಎದುರಾಗಿದೆ. ಮದರ್ ಡೈರಿ ಸಂಸ್ಥೆಯು ವಿವಿಧ ಮಾದರಿ ಹಾಲಿನ ದರವನ್ನು ಪ್ರತಿ ಲೀಟರ್‌ಗೆ 2ರಿಂದ 4 ರೂಪಾಯಿವರೆಗೆ ಹೆಚ್ಚಿಸಿದೆ. ಪರಿಷ್ಕೃತ ದರಗಳು ನ.12ರಿಂದ ಜಾರಿಗೆ ಬರಲಿವೆ. ಹಾಲಿನ ದರ ಏರಿಕೆಯಿಂದ ಪ್ರತಿನಿತ್ಯ ಹಾಲು ಖರೀದಿಸುವ ಕುಟುಂಬಗಳ ಮಾಸಿಕ ವೆಚ್ಚ ಹೆಚ್ಚಾಗುವ ಸಾಧ್ಯತೆಯಿದೆ.



ಮದರ್ ಡೈರಿಯ ಹೊಸ ದರದ ಪ್ರಕಾರ, ಫುಲ್‌ಕ್ರೀಮ್ ಹಾಲಿನ ಬೆಲೆ ಲೀಟರ್‌ಗೆ 72 ರಿಂದ 76 ರೂ.ಗಳಿಗೆ ' ಏರಿಕೆಯಾಗಿದೆ. ಅಂದರೆ ನಾಲ್ಕು ರೂಪಾಯಿ ಹೆಚ್ಚಳವಾಗಿದೆ. ಪಾಕೆಟ್ ಟೋನ್ಡ್ ಹಾಲಿನ ದರ 60 ರಿಂದ 62 ರೂಪಾಯಿಗೆ ಹೆಚ್ಚಿಸಲಾಗಿದೆ. ಡಬಲ್ ಟೋನ್ಡ್ ಹಾಲಿನ ಬೆಲೆ 54 ರೂಪಾಯಿಯಿಂದ 56 ರೂಪಾಯಿಗೆ ಏರಿಕೆಯಾಗಿದೆ. ಹಸುವಿನ ಹಾಲಿನ ದರ 62 ರೂಪಾಯಿಯಿಂದ 65 ರೂಪಾಯಿಗೆ ಹೆಚ್ಚಳವಾಗಿದೆ. ಇನ್ನು ಮುಕ್ತ ವಿತರಣೆಯ ಟೋನ್ಡ್ ಹಾಲಿನ ಬೆಲೆ ಲೀಟರ್‌ಗೆ 58 ರೂಪಾಯಿಯಿಂದ 60 ರೂಪಾಯಿಗೆ ಏರಿಕೆಯಾಗಿದೆ.

ರೈತರಿಂದ ಹಾಲು ಖರೀದಿಸುವ ವೆಚ್ಚ ಹೆಚ್ಚಳವಾಗಿರುವ ಹಿನ್ನೆಲೆಯಲ್ಲಿ ದರ ಪರಿಷ್ಕರಣೆ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ. ಹಾಲಿನ ಖರೀದಿ ವೆಚ್ಚ ಹೆಚ್ಚಾದ ಕಾರಣ ಹೆಚ್ಚುವರಿ ವೆಚ್ಚದ ಒಂದು ಭಾಗವನ್ನು ಗ್ರಾಹಕರಿಗೆ ವರ್ಗಾಯಿಸಲು ಸಂಸ್ಥೆ ನಿರ್ಧರಿಸಿದೆ. ಮದರ್ ಡೈರಿ ತನ್ನ ಹಾಲಿನ ಮಾರಾಟದಿಂದ ಬರುವ ಒಟ್ಟು ಆದಾಯದ ಶೇ.75ರಿಂದ 80ರಷ್ಟು ಪಾಲನ್ನು ರೈತರಿಗೆ ಪಾವತಿಸುತ್ತದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ದಿನಕ್ಕೆ 35 ಲಕ್ಷ ಲೀಟರ್ ಮಾರಾಟ

ಮದರ್ ಡೈರಿ ಸಂಸ್ಥೆಯು ದೆಹಲಿ-ಎನ್‌ಸಿಆರ್ ಪ್ರದೇಶದಲ್ಲಿ ಪ್ರತಿದಿನ ಸರಿಸುಮಾರು 35 ಲಕ್ಷ ಲೀಟರ್ ಹಾಲು ಮಾರಾಟ ಮಾಡುತ್ತದೆ. ತನ್ನ ಮಾರಾಟ ಮಳಿಗೆಗಳು, ಸಾಮಾನ್ಯ ಚಿಲ್ಲರೆ ಅಂಗಡಿಗಳು ಹಾಗೂ ಆನ್‌ಲೈನ್ ಮೂಲಕ ಗ್ರಾಹಕರಿಗೆ ಹಾಲು ಪೂರೈಸುತ್ತಿದೆ. ದೇಶಾದ್ಯಂತ ಸಂಸ್ಥೆಯ ಒಟ್ಟು ದೈನಂದಿನ ಹಾಲಿನ ಮಾರಾಟ 50 ಲಕ್ಷ ಲೀಟರ್‌ಗಿಂತ ಹೆಚ್ಚಿದೆ.

ಪರಿಶಿಷ್ಟರ ಮೀಸಲಾತಿ ರಕ್ಷಣೆಗೆ ಸುಪ್ರೀಂಕೋರ್ಟ್ ಮೆಟ್ಟಿಲೇರಿದ ಕರ್ನಾಟಕ ಸರ್ಕಾರ

ಬೆಂಗಳೂರು, ನ.11: ಪರಿಶಿಷ್ಟ ಜಾತಿಗಳ ಮೀಸಲಾತಿಯನ್ನು ಶೇಕಡಾ 15ರಿಂದ 17ಕ್ಕೆ, ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಶೇಕಡಾ 3ರಿಂದ 7ಕ್ಕೆ ಹೆಚ್ಚಿಸಿರುವುದನ್ನು ರದ್ದುಗೊಳಿಸಿರುವ ಕರ್ನಾಟಕ ಹೈಕೋರ್ಟ್‌ನ ತೀರ್ಪಿನ ವಿರುದ್ಧ ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ವಿಶೇಷ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿದೆ.

2026ರ ಅಕ್ಟೋಬರ್ 27ರಂದು ಸರ್ಕಾರಿ ಆದೇಶಾನುಸಾರ ಅಕ್ಟೋಬರ್ 28ರಂದು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಮಂಜೂರಾತಿ ನೀಡಲಾಗಿತ್ತು.

ನ್ಯಾ. ಎಚ್.ಎನ್. ನಾಗಮೋಹನ್ ದಾಸ್ ಆಯೋಗವು ಜುಲೈ 2020 ರಲ್ಲಿ ಮೀಸಲಾತಿ ಹೆಚ್ಚಳವನ್ನು ಶಿಫಾರಸು ಮಾಡಿ, ಈ ಹೆಚ್ಚಳವನ್ನು ಕಾನೂನು ಸವಾಲುಗಳಿಂದ ರಕ್ಷಿಸಲು ಸಂವಿಧಾನದ ಒಂಬತ್ತನೇ ಅನುಸೂಚಿಯಲ್ಲಿ ಸೇರಿಸಬೇಕೆಂದು ಸಲಹೆ ನೀಡಿತ್ತು. ಆದರೆ 2022 ರ ಅಕ್ಟೋಬರ್ 7 ರಂದು, ಅಂದಿನ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಈ ಮೀಸಲಾತಿ ಹೆಚ್ಚಳಕ್ಕೆ ನ್ಯಾಯಾಂಗ ವಿನಾಯಿತಿ ಇರುವ ಸಂವಿಧಾನದ ಒಂಬತ್ತನೇ ಅನುಸೂಚಿಯಲ್ಲಿ ಸೇರಿಸಲಾಗುವುದು ಎಂದು ಬಹಿರಂಗವಾಗಿ ಹೇಳಿದ್ದರು.

ಆದರೆ, ಬಿಜೆಪಿ ಸರ್ಕಾರವು ಒಂಬತ್ತನೇ ಅನುಸೂಚಿಯಲ್ಲಿ ಸೇರಿಸುವ ಬದಲಿಗೆ ಸುಗ್ರೀವಾಜ್ಞೆ ಹೊರಡಿಸಿ, 2023ರ ವಿಧಾನಸಭಾ ಚುನಾವಣೆಗೆ ಮುಂಚಿತವಾಗಿ ಕಾಯ್ದೆ ಅಂಗೀಕರಿಸಿತು.

ಕರ್ನಾಟಕ ಹೈಕೋರ್ಟ್ ತೀರ್ಪಿನ ವಿರುದ್ಧ ವಿಶೇಷ ಮೇಲ್ಮನವಿ

ಮೀಸಲಾತಿ ಹಕ್ಕುಗಳ ರಕ್ಷಣೆಗೆ ಕಾಂಗ್ರೆಸ್ ಸರ್ಕಾರದ ದಿಟ್ಟ ಕ್ರಮಗಳು

ಮತ್ತೊಂದೆಡೆ 2023 ರ ಮಾರ್ಚ್ 21 ರಂದು, ಅಂದಿನ ಚಿತ್ರದುರ್ಗದ ಬಿಜೆಪಿ ಸಂಸದ ಹಾಗೂ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ಎ. ನಾರಾಯಣಸ್ವಾಮಿ ಕರ್ನಾಟಕದಿಂದ ಯಾವುದೇ ಪ್ರಸ್ತಾಪ ಕೇಂದ್ರಕ್ಕೆ ತಲುಪಿಲ್ಲ ಎಂದು ಸಂಸತ್ತಿಗೆ ತಿಳಿಸಿದರು.

ಇದಾದ ಎರಡು ದಿನಗಳ ನಂತರ ಅಂದರೆ ಮತದಾನಕ್ಕೆ ಕೇವಲ ಏಳು ವಾರಗಳು ಬಾಕಿ ಇರುವಾಗ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿತ್ತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗಗಳೊಂದಿಗೆ ಸಮಾಲೋಚನೆ ನಡೆಸುವುದು ಕಡ್ಡಾಯವಾಗಿತ್ತು ಮತ್ತು ಕಾನೂನು ಜಾರಿಯಾದ ನಂತರ ಕಳುಹಿಸಲಾದ ಪತ್ರಗಳು ಆ ಅಗತ್ಯವನ್ನು ಪೂರೈಸುವುದಿಲ್ಲ ಎಂದು ಹೈಕೋರ್ಟ್ ತನ್ನ ತೀರ್ಪು ನೀಡಿದೆ. ಡಬಲ್ ಇಂಜಿನ್ ಬಿಜೆಪಿ ಸರ್ಕಾರವೇ ಅಧಿಕಾರದಲ್ಲಿದ್ದಾಗ, ಒಂದೇ ಒಂದು ಸಂವಿಧಾನ ತಿದ್ದುಪಡಿಯು ಈ ಹೆಚ್ಚಳಕ್ಕೆ ರಕ್ಷಣೆ ನೀಡುತ್ತಿತ್ತು. ಆದರೆ ಬಿಜೆಪಿ ಸರ್ಕಾರ ಅದನ್ನು ಮಾಡಲಿಲ್ಲ.

ಕೇಂದ್ರ ಸರ್ಕಾರದ ಮುಂದುವರಿದ ನಿಷ್ಕ್ರಿಯತೆ

2025ರ ಡಿಸೆಂಬರ್ 18 ರಂದು, ಮೀಸಲಾತಿ ಹೆಚ್ಚಳದ ಶೇಕಡಾ 56 ರಷ್ಟು ಮೀಸಲಾತಿಯನ್ನು ಸಂವಿಧಾನದ ಒಂಬತ್ತನೇ ಅನುಸೂಚಿಯಲ್ಲಿ ಸೇರಿಸುವ ಬಗ್ಗೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಕರ್ನಾಟಕ ವಿಧಾನಸಭೆಯು ನಿರ್ಣಯವನ್ನು ಅಂಗೀಕರಿಸಿತು. 2026ರ ಜುಲೈ 25 ರಂದು, ಪ್ರಕರಣವು ಹೈಕೋರ್ಟ್‌ನಲ್ಲಿ ಬಾಕಿ ಇರುವ ಕಾರಣ ಈ ವಿನಂತಿಯನ್ನು ಮುಂದೂಡುವುದಾಗಿ ಕೇಂದ್ರ ಸರ್ಕಾರ ಸಂಸತ್ತಿಗೆ ತಿಳಿಸಿತು. ಲೋಕಸಭೆಯಲ್ಲಿ ಕರ್ನಾಟಕದಿಂದ ಐವರು ಕೇಂದ್ರ ಸಚಿವರು ಮತ್ತು 19 ಮಂದಿ ಬಿಜೆಪಿ ಹಾಗೂ ಜೆಡಿಎಸ್ ಸಂಸದರಿದ್ದರೂ, ತಿದ್ದುಪಡಿಯನ್ನು ಇನ್ನೂ ಮಂಡಿಸಲಾಗಿಲ್ಲ. ಮೊದಲಿಗೆ 2023 ರಲ್ಲಿ ಮತ್ತು ನಂತರವೂ ಮುಂದುವರಿದ ಈ ವೈಫಲ್ಯವೇ ರಾಜ್ಯ ಸರ್ಕಾರವನ್ನು ಮೇಲ್ಮನವಿ ಸಲ್ಲಿಸುವಂತೆ ಮಾಡಿದೆ.

ಮೀಸಲಾತಿ ಹಕ್ಕುಗಳ ರಕ್ಷಣೆಗೆ ಕಾಂಗ್ರೆಸ್ ಸರ್ಕಾರದ ಕ್ರಮಗಳು

- ಮೀಸಲಾತಿ ಹೆಚ್ಚಳವನ್ನು 9ನೇ ಅನುಸೂಚಿಯಲ್ಲಿ ರಕ್ಷಣೆ ಕೋರಿ 2025ರ ಡಿ.18ರಂದು ವಿಧಾನಸಭೆಯಲ್ಲಿ ನಿರ್ಣಯ ಅಂಗೀಕಾರ
- 2026ರ ಫೆಬ್ರವರಿಯಲ್ಲಿ 56,432 ಹುದ್ದೆಗಳನ್ನು ಭರ್ತಿ ಮಾಡಲು ಮಂಜೂರಾತಿ. ಕೋರ್ಟ್ ತೀರ್ಪು ಬರುವವರೆಗೆ ಎಸ್.ಸಿ ಮತ್ತು ಎಸ್.ಟಿ ಅಭ್ಯರ್ಥಿಗಳಿಗೆ ಹೆಚ್ಚುವರಿ ಶೇಕಡಾ 6 ರಷ್ಟು ಹುದ್ದೆಗಳನ್ನು ಬ್ಯಾಕ್‌ಲಾಗ್‌ನಲ್ಲಿ ಕಾಯ್ದಿರಿಸಲಾಗಿದೆ, ಇದರಿಂದ ಈ ಪಾಲು ನಷ್ಟವಾಗದೆ ಸುರಕ್ಷಿತವಾಗಿರಲಿದೆ.
- ಪರಿಶಿಷ್ಟ ಜಾತಿಗಳ ಒಳಗೆ ಅತ್ಯಂತ ಹಿಂದುಳಿದ ಸಮುದಾಯಗಳಿಗೆ ಮೀಸಲಾತಿ ತಲುಪುವಂತೆ ಮಾಡಲು ಒಳಮೀಸಲಾತಿ ಜಾರಿ
- 2026ರ ಅ.15ರಂದು ಸುಪ್ರೀಂನಲ್ಲಿ ಮೇಲ್ಮನವಿ ಸಲ್ಲಿಸಲು ಸಂಪುಟ ಸಭೆಯಲ್ಲಿ ನಿರ್ಧಾರ
- ಏಕೈಕ ಶಾಶ್ವತ ರಕ್ಷಣೆಯಾಗಿರುವ 9ನೇ ವೇಳಾಪಟ್ಟಿಯ ರಕ್ಷಣೆಗಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವುದು

ನಿತ್ಯ ಪಂಚಾಂಗ 12.11.2026 ಗುರುವಾರ



ಶ್ರೀ ಪರಾಭವ ನಾಮ ಸಂವತ್ಸರ,
ದಕ್ಷಿಣಾಯನ ಶರದ್‌ಋತು/ಚಾಂದ್ರಮಾನ
ಆಶ್ವಯುಜ-ಕಾರ್ತಿಕ ಮಾಸ

ಅಕ್ಕನ ತದಿಗೆ, ತ್ರಿಲೋಚನಗೌರೀ ವ್ರತ, ಶಂಕರಪುರ ರಥ, ಸೂಡಿಹಳ್ಳಿ ಜಾತ್ರೆ, ಕಾರ್ಯಗ್ರಾಮ ರಥ

ದಿನ	ರಾಹುಕಾಲ	ಯಮಗಂಡ	ಗುಳಿಕಕಾಲ
ಭಾನು	ಸ. 5.04– 6.33	12.00– 1.30	3.00– 4.00
ಸೋಮ	ಬೆ. 7.20– 9.04	10.30–12.00	1.30– 3.00
ಮಂಗಳ	ಮ. 3.25– 4.59	9.00–10.30	12.00– 1.30
ಬುಧ	ಮ.12.16– 1.50	7.30– 9.00	10.30– 12.00
ಗುರು	ಮ. 1.50– 3.29	6.00– 7.30	9.00– 10.30
ಶುಕ್ರ	ಬೆ.10.42–12.16	3.00– 4.30	7.30– 9.00
ಶನಿ	ಬೆ. 9.07–10.41	1.30– 3.00	6.00– 7.30

2027ರಲ್ಲಿ ಮೂರು ದಿನ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ

ಎಂ.ವೀರಪ್ಪ ಮೊಯ್ಲಿ ನೇತೃತ್ವದಲ್ಲಿ ಆಯೋಜನೆ: ಸಿಎಂ ಡಿ.ಕೆ.ಶಿವಕುಮಾರ್ ಘೋಷಣೆ | ವಿಶ್ವಸಂಸ್ಕೃತಿಯ ಮಹಾಯಾನ (ಸಂಪುಟ 4)- ಗದ್ಯ ಮಹಾಕಾವ್ಯ ಲೋಕಾರ್ಪಣೆ

ಮೈಸೂರು, ನ.11: ಮಾಜಿ ಮುಖ್ಯಮಂತ್ರಿ ಹಾಗೂ ಹಿರಿಯ ಸಾಹಿತಿ ವೀರಪ್ಪ ಮೊಯಿಲಿ ನೇತೃತ್ವದಲ್ಲಿ 2027ರಲ್ಲಿ ಮೂರು ದಿನಗಳ ಕಾಲ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗುವುದು. ಈ ಕುರಿತು ಮುಂದಿನ ಬಜೆಟ್‌ನಲ್ಲಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ಘೋಷಿಸಿದರು.

ಮಾಜಿ ಮುಖ್ಯಮಂತ್ರಿ ಡಾ. ಎಂ. ವೀರಪ್ಪ ಮೊಯಿಲಿಯವರ "ವಿಶ್ವಸಂಸ್ಕೃತಿಯ ಮಹಾಯಾನ (ಸಂಪುಟ 4)– ಗದ್ಯ ಮಹಾಕಾವ್ಯವನ್ನು ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ವಿದ್ಯಾಸಂಸ್ಥೆಯಲ್ಲಿ ಬುಧವಾರ ಲೋಕಾರ್ಪಣೆ ಮಾಡಿ ಮಾತನಾಡಿ, ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ವಿದೇಶಗಳಲ್ಲಿಯೂ ಕನ್ನಡಕ್ಕೆ ಅಪಾರ ಗೌರವ ನೀಡುತ್ತಿರುವ ಕನ್ನಡಿಗರನ್ನು ಒಂದೆಡೆ ಸೇರಿಸಿ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸುವ ಉದ್ದೇಶವಿದೆ" ಎಂದರು. ನೈಜ ಮನುಷ್ಯನನ್ನು ರೂಪಿಸುವುದೇ ಧರ್ಮ ಮತ್ತು ಸಂಸ್ಕೃತಿ ಜಗತ್ತು ಒಂದಾಗಬೇಕಾದರೆ ಮೊದಲು ಮನುಷ್ಯರು ಒಂದಾಗಬೇಕು. ಮನುಷ್ಯನನ್ನು ನಿಜವಾದ ಮನುಷ್ಯನನ್ನಾಗಿ ರೂಪಿಸುವುದೇ ಧರ್ಮ ಮತ್ತು ಸಂಸ್ಕೃತಿ. ರಾಜಕೀಯದಲ್ಲಿರುವ ನಮ್ಮ ಹೆಸರುಗಳು ಭವಿಷ್ಯದಲ್ಲಿ ಮರೆಯಾಗಬಹುದು. ಆದರೆ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದವರ ಹೆಸರು ಮತ್ತು ಅವರ ಚಿಂತನೆಗಳು ಶಾಶ್ವತವಾಗಿ ಉಳಿಯುತ್ತವೆ. ಶಿಕ್ಷಣ ಮತ್ತು ಸಾಹಿತ್ಯ ಜಗತ್ತಿನ ಅತ್ಯಂತ ಶಕ್ತಿಶಾಲಿ ಸಾಧನಗಳಾಗಿವೆ. ಸಾಹಿತ್ಯ ಮತ್ತು ರಾಜಕಾರಣದ ನಂಟು ಹೊಸದೇನಲ್ಲ. ಅಧಿಕಾರವನ್ನು ಬಳಸಿಕೊಂಡು ಜನರ ಬದುಕಿನಲ್ಲಿ ಬದಲಾವಣೆ ತರಬಹುದು. ಆದರೆ ಸಾಹಿತ್ಯದ ಮೂಲಕ ಜನರ ಆಲೋಚನೆಗಳನ್ನೇ ಬದಲಾಯಿಸಬಹುದು. ಅಧಿಕಾರದ ಅವಧಿ ಸೀಮಿತವಾದರೂ ಸಾಹಿತ್ಯದ ಪ್ರಭಾವ ಶಾಶ್ವತ. ಒಬ್ಬ ವ್ಯಕ್ತಿಯ ಬದುಕು ಮುಗಿದರೂ ಆತ ಬರೆದ ಚಿಂತನೆಗಳಿಗೆ ಸಾವಿಲ್ಲ ಎಂದು ಡಿ.ಕೆ. ಶಿವಕುಮಾರ್ ಅಭಿಪ್ರಾಯಪಟ್ಟರು.



ಮೈಸೂರಿನ ಜೆಎಸ್ ಎಸ್ ವಿದ್ಯಾಸಂಸ್ಥೆಯಲ್ಲಿ ಬುಧವಾರ ಸಿಎಂ ಡಿ ಕೆ ಶಿವಕುಮಾರ್ ಮಾಜಿ ಮುಖ್ಯಮಂತ್ರಿ ಡಾ.ಎಂ.ವೀರಪ್ಪ ಮೊಯಿಲಿಯವರ "ವಿಶ್ವಸಂಸ್ಕೃತಿಯ ಮಹಾಯಾನ (ಸಂಪುಟ 4)–ಗದ್ಯ ಮಹಾಕಾವ್ಯವನ್ನು ಲೋಕಾರ್ಪಣೆ ಮಾಡಿದರು.

ಮೊಯಿಲಿಯವರ ಸಾಹಿತ್ಯ, ರಾಜಕೀಯ ಕೊಡುಗೆ ಅಪಾರ

ವೀರಪ್ಪ ಮೊಯಿಲಿ ಅವರ ಸಾಹಿತ್ಯಿಕ ಹಾಗೂ ರಾಜಕೀಯ ಕೊಡುಗೆಗಳು ಅಪಾರ. 1985ರಲ್ಲಿ ತಮಗೆ, ಎಚ್.ಎಂ. ರೇವಣ್ಣ, ರಾಮಲಿಂಗಾರೆಡ್ಡಿ ಸೇರಿದಂತೆ ಹಲವು ಯುವ ನಾಯಕರಿಗೆ ರಾಜೀವ್ ಗಾಂಧಿ ಅವರೊಂದಿಗೆ ಮಾತನಾಡಿ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ದೊರಕಿಸಿಕೊಡುವಲ್ಲಿ ವೀರಪ್ಪ ಮೊಯಿಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು. ರಾಜಕೀಯ ಜೀವನದಲ್ಲಿ ಹಲವು ಯುವ ನಾಯಕರಿಗೆ ಅವಕಾಶ ಕಲ್ಪಿಸಿದ ಅವರು, ಇಂದು ಸಾಹಿತ್ಯ ಲೋಕದಲ್ಲಿಯೂ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿದ್ದಾರೆ ಎಂದು ಡಿ.ಕೆ. ಶಿವಕುಮಾರ್ ಸ್ಮರಿಸಿದರು. ಅವರಿಗೆ ಜ್ಞಾನಪೀಠ ಸೇರಿದಂತೆ ಇನ್ನಷ್ಟು ಪ್ರತಿಷ್ಠಿತ ಸಾಹಿತ್ಯ ಪ್ರಶಸ್ತಿಗಳು ಲಭಿಸಲಿ ಎಂಬುದು ನಮ್ಮೆಲ್ಲರ ಆಶಯವಾಗಿದೆ ಎಂದರು.

ರಾಜಕೀಯ ಸಿದ್ಧಾಂತ ಬೇರೆ, ವೈಯಕ್ತಿಕವಾಗಿ ಮನಸ್ತಾಪವಿಲ್ಲ

ಸಿದ್ದರಾಮಯ್ಯ ಜತೆಗಿನ ಸಂಬಂಧದ ಬಗ್ಗೆ ಎಚ್.ಸಿ.ಮಹದೇವಪ್ಪ ಸ್ಪಷ್ಟನೆ

ಮೈಸೂರು, ನ.11: ತಮ್ಮ ಹಾಗೂ ಮಾಜಿ ಸಿಎಂ ಸಿದ್ದರಾಮಯ್ಯ ನಡುವೆ ಭಿನ್ನಮತ ಮೂಡಿದೆ ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಡಾ. ಎಚ್.ಸಿ. ಮಹದೇವಪ್ಪ ಸ್ಪಷ್ಟನೆ ನೀಡಿದ್ದು, ನಮ್ಮಿಬ್ಬರ ನಡುವೆ ಯಾವುದೇ ವೈಯಕ್ತಿಕ ಭಿನ್ನಾಭಿಪ್ರಾಯಗಳಿಲ್ಲ. ನಮ್ಮಿಬ್ಬರ ಸ್ನೇಹ ಮತ್ತು ಒಡನಾಟ ದೀರ್ಘಕಾಲದ್ದಾಗಿದ್ದು, ರಾಜಕೀಯವಾಗಿ ಬೇರೆ ಸಿದ್ಧಾಂತಗಳ ಹಿನ್ನೆಲೆಯಿಂದ ಬಂದಿದ್ದರೂ ವೈಯಕ್ತಿಕವಾಗಿ ನಮ್ಮ ನಡುವೆ ಯಾವುದೇ ಮನಸ್ತಾಪವಿಲ್ಲ. ನಮ್ಮ ಸ್ನೇಹವೇನಿದ್ದರೂ ಬದಲಾಗದ ಒಂದು ಬಾಂಧವ್ಯ ಎಂದಿದ್ದಾರೆ.

ಸಿದ್ದರಾಮಯ್ಯನವರನ್ನು ಒಬ್ಬ ಪ್ರಾಮಾಣಿಕ ರಾಜಕಾರಣಿ. ತಾವು ಸಮಾಜ ಕಲ್ಯಾಣ ಸಚಿವರಾಗಿದ್ದಾಗ ಸರ್ಕಾರಿ ಮಟ್ಟದಲ್ಲಿ ಸಂವಿಧಾನ ದಿನಾಚರಣೆಯನ್ನು ಜಾರಿಗೆ ತಂದಿದ್ದನ್ನು ಮತ್ತು ಶಾಲೆಗಳಲ್ಲಿ ಸಂವಿಧಾನ ಪೀಠಿಕೆ ಓದುವ ಕಾರ್ಯಕ್ರಮವನ್ನು ರೂಪಿಸಿದ್ದನ್ನು ವಿವರಿಸಿದರು.

ಎಲ್ಲವೂ ಬಗೆಹರಿದಿದೆ: ಯತೀಂದ್ರ

ಮೈಸೂರಿನಲ್ಲಿ ದಲಿತ ಸಂಘಟನೆಗಳ ನೇತೃತ್ವದಲ್ಲಿ ಬೃಹತ್ 'ಸಂವಿಧಾನ ದಿನಾಚರಣೆ' ಕಾರ್ಯಕ್ರಮ ನಡೆಸಲು ಎಚ್.ಸಿ. ಮಹದೇವಪ್ಪ ಸಿದ್ಧತೆ ನಡೆಸಿದ್ದರು. ಆದರೆ, ಈ ಕಾರ್ಯಕ್ರಮದ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪೂರ್ವಭಾವಿಯಾಗಿ ಸಂಪೂರ್ಣ ಮಾಹಿತಿ ತಲುಪದ ಕಾರಣ ಉಭಯ ನಾಯಕರ ನಡುವೆ ಅಸಮಾಧಾನ ಮೂಡಲು ಕಾರಣವಾಗಿತ್ತು. ಇದೀಗ ಎಲ್ಲವೂ ಬಗೆಹರಿದಿದೆ ಎಂದು ಸಚಿವ ಯತೀಂದ್ರ ಸಿದ್ದರಾಮಯ್ಯ ಹೇಳಿದ್ದಾರೆ.

ಆರ್‌ಎಸ್‌ಎಸ್ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿರಲಿಲ್ಲ: ಪ್ರಿಯಾಂಕ್ ಖರ್ಗೆ

ಬೆಂಗಳೂರು, ನ.11: ಟಿಪ್ಪು ಸುಲ್ತಾನ್ ನಾಲ್ಕು ಆಂಗ್ಲೋ–ಮೈಸೂರು ಯುದ್ಧಗಳಲ್ಲಿ ಹೋರಾಡಿದ್ದರೆ, ಆರ್‌ಎಸ್‌ಎಸ್ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿರಲಿಲ್ಲ. ಬಿಜೆಪಿಯವರು ಮೊದಲು ತಮ್ಮ ಇತಿಹಾಸವನ್ನು ಸ್ಪಷ್ಟಪಡಿಸಿಕೊಳ್ಳಬೇಕು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.ಬೆಂಗಳೂರಿನಲ್ಲಿ ಸುದ್ದಿಗಾರರ ಜತೆ ಮಾತನಾಡಿ, ಬಿಜೆಪಿಯವರು ಅಸಹಕಾರ ಚಳವಳಿ, ನಾಗರಿಕ ಅಸಹಕಾರ ಚಳವಳಿ, ಕ್ವಿಟ್ ಇಂಡಿಯಾ ಚಳವಳಿ ಅಥವಾ ದಂಡಿಯಾತ್ರೆಯಲ್ಲಿ ಭಾಗವಹಿಸಿರಲಿಲ್ಲ. ಯಾವುದೇ ದುಂಡುಮೇಜಿನ ಸಮ್ಮೇಳನಗಳಲ್ಲೂ ಪಾಲ್ಗೊಂಡಿರಲಿಲ್ಲ ಎಂದಿದ್ದಾರೆ.

ಟಿಪ್ಪು ಜಯಂತಿಗೆ ಬಿಜೆಪಿ ವಿರೋಧ ವ್ಯಕ್ತಪಡಿಸುತ್ತಿರುವುದನ್ನು ಉಲ್ಲೇಖಿಸಿದ ಪ್ರಿಯಾಂಕ್ ಖರ್ಗೆ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಪುಸ್ತಕವೊಂದರಲ್ಲಿ ಟಿಪ್ಪು ಸುಲ್ತಾನ್ ಅವರನ್ನು ಹೊಗಳಿದ್ದರು. ರಾಜ್ಯಕ್ಕೆ ಟಿಪ್ಪು ಸುಲ್ತಾನ್ ನೀಡಿರುವ ಕೊಡುಗೆಗಳನ್ನು ಅಳಿಸಿಹಾಕಲು ಸಾಧ್ಯವಿಲ್ಲ. ಇದೆಲ್ಲವೂ ರಾಜಕೀಯವಷ್ಟೇ. ಮತಗಳು ಬೇಕಾದಾಗ ಅವರು ಅಲ್ಪಸಂಖ್ಯಾತರ ಪರವಾಗಿರುತ್ತಾರೆ. ಮತಗಳು ಬೇಡವಾದಾಗ ಇಂತಹ ವರ್ತನೆ ತೋರುತ್ತಾರೆ ಎಂದು ಹೇಳಿದ್ದಾರೆ.

ರಾಹುಲ್ ಮೆಚ್ಚಿಸಲು ರಿಜ್ವಾನ್ ಎಥೆನಾಲ್ ವಿಚಾರ ಪ್ರಸ್ತಾಪ: ಪ್ರಲ್ಹಾದ ಜೋಶಿ ಟೀಕೆ

ಬೆಂಗಳೂರು, ನ.11: ಪೆಟ್ರೋಲ್‌ನಲ್ಲಿ ಎಥೆನಾಲ್ ಮಿಶ್ರಣವನ್ನು ಹೆಚ್ಚಿಸುವ ವಿಷಯವನ್ನು ಕಾಂಗ್ರೆಸ್ ಪಕ್ಷವು ಕೇವಲ ತಮ್ಮ ನಾಯಕ ರಾಹುಲ್ ಗಾಂಧಿ ಅವರನ್ನು ಸಂತೋಷಪಡಿಸಲು ಬಳಸಿಕೊಳ್ಳುತ್ತಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಆರೋಪಿಸಿದ್ದಾರೆ.



ರಾಜ್ಯದಲ್ಲಿ ಇಂಧನ ಪರೀಕ್ಷಾ ಪ್ರಕ್ರಿಯೆಯಲ್ಲಿ ದೋಷಗಳಿವೆ ಎಂದು ಆರೋಪಿಸಿರುವ ಅವರು, ಈ ವಿಷಯದ ಬಗ್ಗೆ ಕೇಂದ್ರ ಸರ್ಕಾರ ಈಗಾಗಲೇ ಸ್ಪಷ್ಟನೆ ನೀಡಿದ್ದರೂ, ಕಾಂಗ್ರೆಸ್ ಸರ್ಕಾರವು ಆಧಾರರಹಿತ ಹೇಳಿಕೆಗಳನ್ನು ನೀಡುತ್ತಿದೆ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷವು ರಾಹುಲ್ ಗಾಂಧಿ ಅವರನ್ನು ಮೆಚ್ಚಿಸಲು ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದರೆ, ಅದು ಒಂದು ರೀತಿಯ ತುಷ್ಟೀಕರಣ ರಾಜಕೀಯವೇ ಆಗಿದೆ. ಒಂದು ಕಡೆ ಅವರು ಅಲ್ಪಸಂಖ್ಯಾತರನ್ನು, ವಿಶೇಷವಾಗಿ ಮುಸ್ಲಿಮರನ್ನು ಓಲೈಸುವ ರಾಜಕೀಯ ಮಾಡುತ್ತಾರೆ; ಇನ್ನೊಂದು ಕಡೆ ರಾಹುಲ್ ಗಾಂಧಿ ಅವರನ್ನು ಓಲೈಸುತ್ತಾರೆ. ಅವರು ಗಾಂಧಿಯವರ ಬೆಂಬಲಕ್ಕೆ ನಿಂತು ಏನೇನೋ ಮಾತನಾಡುತ್ತಾರೆ. ಜನರಿಗೆ ಇದೆಲ್ಲವೂ ಅರ್ಥವಾಗುತ್ತದೆ, ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು. ಎಥೆನಾಲ್ ಮಿಶ್ರಣದ ಹಿಂದಿರುವ ಆರ್ಥಿಕ ಅಂಶಗಳನ್ನು ವಿವರಿಸಿದ ಕೇಂದ್ರ ಸಚಿವರು, ರೈತರಿಗೆ ಅನುಕೂಲ ಮಾಡಿಕೊಡುವುದು ಮತ್ತು ಕಚ್ಚಾತೈಲ ಆಮದಿನ ಮೇಲಿನ ಭಾರತದ ಅವಲಂಬನೆ ಯನ್ನು ಕಡಿಮೆ ಮಾಡುವುದು ಈ ಕ್ರಮದ ಉದ್ದೇಶವಾಗಿದೆ ಎಂದು ಹೇಳಿದರು.

ರೈತರ ಹಿತದೃಷ್ಟಿಯಿಂದ ಎಥೆನಾಲ್ ಮಿಶ್ರಣಕ್ಕೆ ಉತ್ತೇಜನ

ಇಂದು ಕಚ್ಚಾತೈಲದ ಬೆಲೆ ಬಹಳ ಹೆಚ್ಚಿದೆ. ನಮ್ಮ ಪೆಟ್ರೋಲ್‌ನ ಮೂಲ ಬೆಲೆ 53 ರೂಪಾಯಿಗಳಷ್ಟಿದ್ದರೆ, ಮೆಕ್ಕೆಜೋಳ ಆಧಾರಿತ ಎಥೆನಾಲ್‌ನ ಬೆಲೆ 57ರಿಂದ 71 ರೂಪಾಯಿಗಳ ನಡುವೆ ಇದೆ. ಇದರಲ್ಲಿ ಯಾವುದೇ ವಾಣಿಜ್ಯಿಕ ತರ್ಕವೂ ಇಲ್ಲ, ಎಂದು ಹೇಳಿದ ಅವರು, ರೈತರ ಹಿತದೃಷ್ಟಿಯಿಂದ ಮತ್ತು ದೇಶವನ್ನು ಸ್ವಾವಲಂಬಿಯನ್ನಾಗಿ ಮಾಡುವ ನಿಟ್ಟಿನಲ್ಲಿ ಸರ್ಕಾರವು ಎಥೆನಾಲ್ ಮಿಶ್ರಣವನ್ನು ಉತ್ತೇಜಿಸಿದೆ ಎಂದು ಪ್ರಲ್ಹಾದ ಜೋಶಿ ತಿಳಿಸಿದರು.

ಚುನಾವಣಾ ಪಟ್ಟಿಗಳ ವಿಶೇಷ ಪರಿಷ್ಕರಣೆ (ಎಸ್‌ಐಆರ್), ಎಲೆಕ್ಟ್ರಾನಿಕ್ ಮತಯಂತ್ರಗಳು (ಇವಿಎಂ) ಮತ್ತು ಇತರ ವಿಷಯಗಳ ಕುರಿತು ಕಾಂಗ್ರೆಸ್ ನಡೆಸುತ್ತಿರುವ ಪ್ರತಿಭಟನೆಗಳನ್ನು ಪ್ರಸ್ತಾಪಿಸಿದ ಜೋಶಿ, ಆ ವಿಷಯಗಳಲ್ಲಿ ಸಾರ್ವಜನಿಕರ ಬೆಂಬಲ ಸಿಗದ ಕಾರಣ, ಈಗ ಎಥೆನಾಲ್ ವಿಷಯವನ್ನು ಕಾಂಗ್ರೆಸ್ ಮುನ್ನೆಲೆಗೆ ತರುತ್ತಿದೆ ಎಂದು ಆರೋಪಿಸಿದರು.

ಇಂಧನ ಪರೀಕ್ಷಾ ವಿಧಾನದ ಬಗ್ಗೆ ಮಾತನಾಡಿದ ಜೋಶಿ, ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಪರೀಕ್ಷಿಸಲು ಸಾಮಾನ್ಯ ಪ್ರಯೋಗಾಲಯ ಸಾಕು. ಆದರೆ ಕ್ಯಾನ್ಸರ್ ಗುರುತುಗಳನ್ನು ಅಥವಾ ಕ್ಯಾನ್ಸರ್ ಮಟ್ಟವನ್ನು ಪರೀಕ್ಷಿಸಲು ಅತ್ಯಾಧುನಿಕ ಉಪಕರಣಗಳು ಬೇಕಾಗುತ್ತವೆ. ಅದೇ ರೀತಿ, ಪೆಟ್ರೋಲ್ ಮತ್ತು ಡೀಸೆಲ್ ಪರೀಕ್ಷೆಗೂ ವಿಶೇಷ ಉಪಕರಣಗಳ ಅಗತ್ಯವಿರುತ್ತದೆ, ಎಂದು ಜೋಶಿ ವಿವರಿಸಿದರು.



ಮೈಸೂರಿನ ಕಾವೇರಿ ಎಂಪೋರಿಯಂನಲ್ಲಿ ಬುಧವಾರ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ವತಿಯಿಂದ ಆಯೋಜಿಸಿದ್ದ ನಮ್ಮ ನಾಡಿನ ಹೆಮ್ಮೆಯ ಕರ್ನಾಟಕ ಕಂಚಿನ ವಸ್ತುಗಳ ಪ್ರದರ್ಶನಕ್ಕೆ ಸಿಎಂ ಡಿ.ಕೆ.ಶಿವಕುಮಾರ್ ಭೇಟಿನೀಡಿ, ಕಲಾವಿದರ ಅದ್ಭುತ ಕೈಚಳಕ ಹಾಗೂ ಕಲಾಕೃತಿಗಳ ಸೌಂದರ್ಯವನ್ನು ವೀಕ್ಷಿಸಿದರು.

ಕೆಲ ರೈತರಿಗೆ ಘೋಷಿಸಿದ್ದಕಿಂತ ಹೆಚ್ಚು ಕಡಿಮೆ ಹಣ ಜಮಾ

ಒಂದೂವರೆ, ಎರಡು ಸಾವಿರ ಮಾತ್ರ ಸೇರಿದ್ದೇಕೆ: ಅಶೋಕ್ ಪ್ರಶ್ನೆ

ಬೆಂಗಳೂರು,ನ.11: ಬರದ ಸಂಕಷ್ಟದಲ್ಲಿರುವ ರೈತರಿಗೆ 5,000 ಪರಿಹಾರ ನೀಡುವುದಾಗಿ ಘೋಷಿಸಿ, ಮೊದಲ ಕಂತಿನಲ್ಲಿ 2,500 ಜಮೆ ಮಾಡುವುದಾಗಿ ಹೇಳಿದ್ದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೇ, ಕೆಲ ರೈತರ ಬ್ಯಾಂಕ್ ಖಾತೆಗಳಿಗೆ 1,500, 2,000 ಮಾತ್ರ ಜಮೆಯಾಗಿದೆ ಏಕೆ ಎಂದು ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್ ಪ್ರಶ್ನಿಸಿದ್ದಾರೆ.

ಸಂಕಷ್ಟದ ಸಮಯದಲ್ಲೂ ಪರಿಹಾರದ ಹಣದಲ್ಲಿ ಇಂಥ ತಾರತಮ್ಯ ಏಕೆ ನಡೆಯುತ್ತಿದೆ? ಸರ್ಕಾರ ಘೋಷಿಸಿದ ಮೊತ್ತವನ್ನೇ ಅನ್ನದಾತರ ಬ್ಯಾಂಕ್ ಖಾತೆಗೆ ತಲುಪಿಸಲು ಸಾಧ್ಯವಾಗದಿರುವುದು ಆಡಳಿತ ವೈಫಲ್ಯವಲ್ಲವೇ ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

ರೈತರಿಗೆ ಪರಿಹಾರ ಬೇಕೇ ಹೊರತು ಪ್ರಚಾರದ ಭಾಷಣಗಳಲ್ಲ. ಸರ್ಕಾರ ಘೋಷಿಸಿರುವ 5,000 ಪರಿಹಾರದಲ್ಲಿ ಕಡಿಮೆ ಮೊತ್ತ ಜಮೆಯಾಗಿರುವ ಬಗ್ಗೆ ಮುಖ್ಯಮಂತ್ರಿಗಳು ರಾಜ್ಯದ ರೈತರಿಗೆ ಸ್ಪಷ್ಟ ಉತ್ತರ ನೀಡಬೇಕು ಎಂದು ಆಗ್ರಹಿಸಿದ್ದಾರೆ. ಅಲ್ಲದೆ ರೈತರಿಗೆ ಬಾಕಿ ಉಳಿದಿರುವ ಪರಿಹಾರದ ಮೊತ್ತವನ್ನು ಕೂಡಲೇ ಬಿಡುಗಡೆ ಮಾಡಬೇಕು. ಅನ್ನದಾತರನ್ನು ಕೇವಲ ಘೋಷಣೆಗಳ ಮೂಲಕ ವಂಚಿಸುವುದನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದ್ದಾರೆ.

ರೈತರ ಖಾತೆಗೆ ಘೋಷಿಸಿದ ಸಂಪೂರ್ಣ ಪರಿಹಾರ ತಲುಪಿಸುವಲ್ಲಿ ಸರ್ಕಾರ ವಿಫಲವಾದರೆ, ಕಾಂಗ್ರೆಸ್ ಸರ್ಕಾರದ ಈ ಬೇಜವಾಬ್ದಾರಿತನಕ್ಕೆ ರಾಜ್ಯದ ಜನತೆ ತಕ್ಕ ಉತ್ತರ ನೀಡಲಿದ್ದಾರೆ ಎಂದು ಆರ್.ಅಶೋಕ್ ಎಚ್ಚರಿಕೆ ನೀಡಿದ್ದಾರೆ.

ಶಕ್ತಿ ಯೋಜನೆ: ಮಹಿಳಾ ಸಬಲೀಕರಣ, ಧಾರ್ಮಿಕ ಪ್ರವಾಸಕ್ಕೆ ಸಿಕ್ಕ ದೊಡ್ಡಬಲ: ದಿನೇಶ್ ಗೂಳಿಗೌಡ



ಬೆಂಗಳೂರು, ನ.11: ಕರ್ನಾಟಕದ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಉಚಿತ ಪ್ರಯಾಣದ ಶಕ್ತಿ ಯೋಜನೆ ಇಂದು ಹಲವು ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳಿಗೆ ಕಾರಣವಾಗಿದೆ ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಹಾಗೂ ಶಾಸಕ ದಿನೇಶ್ ಗೂಳಿಗೌಡ ಹೇಳಿದ್ದಾರೆ.

ಮಾಧ್ಯಮ ಪ್ರಕಟಣೆ ನೀಡಿರುವ ಅವರು, ಕಾಂಗ್ರೆಸ್ ಪಕ್ಷ ನೀಡಿದ್ದ ಭರವಸೆಯನ್ನು ಈಡೇರಿಸುವ ಮೂಲಕ ಮಹಿಳೆಯರ ಸಂಚಾರ ಸ್ವಾತಂತ್ರ್ಯ ಮತ್ತು ಸಬಲೀಕರಣಕ್ಕೆ ತಮ್ಮ ಸರ್ಕಾರ ಆದ್ಯತೆ ನೀಡಿದೆ. ಇದಕ್ಕೆ ಹಾಸನಾಂಬೆ ಜಾತ್ರಾ ಮಹೋತ್ಸವದಲ್ಲಿ ಕಂಡುಬಂದಿರುವ ಭಕ್ತರ ಸಂಖ್ಯೆಯಲ್ಲಿನ ಗಣನೀಯ ಏರಿಕೆಯೂ ಒಂದು ಪ್ರಮುಖ ಉದಾಹರಣೆಯಾಗಿದೆ ಎಂದಿದ್ದಾರೆ.

ಹಾಸನದ ಅಧಿದೇವತೆ ಹಾಸನಾಂಬೆಯ ದರ್ಶನ ಪಡೆಯುವ ಭಕ್ತರ ಸಂಖ್ಯೆ ಕಳೆದ ನಾಲ್ಕು ವರ್ಷಗಳಲ್ಲಿ ಸುಮಾರು ಐದು ಪಟ್ಟು ಹೆಚ್ಚಾಗಿದೆ. 2022ರಲ್ಲಿ ಕೇವಲ 6 ಲಕ್ಷದಷ್ಟಿದ್ದ ಭಕ್ತರ ಸಂಖ್ಯೆ 2026ರಲ್ಲಿ 30 ಲಕ್ಷದ ಗಡಿ ದಾಟಿದೆ. ಕೇವಲ 11 ದಿನಗಳ ಜಾತ್ರಾ ಮಹೋತ್ಸವದ ಅವಧಿಯಲ್ಲಿ 30 ಲಕ್ಷಕ್ಕೂ ಅಧಿಕ ಭಕ್ತರು ದೇವಿಯ ದರ್ಶನ ಪಡೆದಿರುವುದು ಗಮನಾರ್ಹ ಸಂಗತಿಯಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ಭಕ್ತರು ಆಗಮಿಸಿದ್ದು, ಅದರಲ್ಲೂ ಮಹಿಳೆಯರ ಹೆಚ್ಚಿನ ಭಾಗವಹಿಸುವಿಕೆ ಕಂಡುಬಂದಿದೆ. ಇದು ಹಾಸನಾಂಬೆಯ ಮೇಲಿನ ಜನರ ಭಕ್ತಿ, ನಂಬಿಕೆ ಹಾಗೂ ಕ್ಷೇತ್ರದ ಜನಪ್ರಿಯತೆಯ ಹೆಚ್ಚಳವನ್ನೂ ಪ್ರತಿಬಿಂಬಿಸುತ್ತದೆ.

2022ರಲ್ಲಿ ಸುಮಾರು 6 ಲಕ್ಷದಷ್ಟಿದ್ದ ಭಕ್ತರ ಸಂಖ್ಯೆ 2023ರಲ್ಲಿ 14.40 ಲಕ್ಷಕ್ಕೆ ಏರಿಕೆಯಾಗಿತ್ತು. 2024ರಲ್ಲಿ 17.47 ಲಕ್ಷ ಹಾಗೂ 2025ರಲ್ಲಿ 26.13 ಲಕ್ಷ ಭಕ್ತರು ದೇವಿಯ ದರ್ಶನ ಪಡೆದಿದ್ದರು. ಇದೀಗ 2026ರಲ್ಲಿ 30 ಲಕ್ಷದ ಗಡಿ ದಾಟಿರುವುದು ವಿಶೇಷವಾಗಿದೆ. ಅಲ್ಪಾವಧಿಯಲ್ಲೇ ಭಕ್ತರ ಸಂಖ್ಯೆಯಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದ ಏರಿಕೆ ಕಂಡುಬಂದಿರುವುದು ಹಾಸನಾಂಬೆ ಕ್ಷೇತ್ರದ ಮಹತ್ವವನ್ನು ಮತ್ತಷ್ಟು ಹೆಚ್ಚಿಸಿದೆ.

ಮಹಿಳೆಯರ ಧಾರ್ಮಿಕ ಪ್ರವಾಸಕ್ಕೆ ಶಕ್ತಿ ತುಂಬಿದ ಯೋಜನೆ: ರಾಜ್ಯ ಸರ್ಕಾರ ಜಾರಿಗೊಳಿಸಿರುವ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಶಕ್ತಿ ಯೋಜನೆಯು ಮಹಿಳೆಯರ ಬದುಕಿನಲ್ಲಿ ಮಹತ್ವದ ಬದಲಾವಣೆ ತಂದಿದೆ. ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಸೌಲಭ್ಯ ಕಲ್ಪಿಸಿರುವುದರಿಂದ ಧಾರ್ಮಿಕ ಕ್ಷೇತ್ರಗಳ ಭೇಟಿಗೆ ಹೆಚ್ಚಿನ ಅನುಕೂಲವಾಗಿದೆ. ಹಿಂದೆ ಪ್ರಯಾಣದ ವೆಚ್ಚದ ಹೊರೆಯಿಂದ ಪ್ರವಾಸ ಹಾಗೂ ಪುಣ್ಯಕ್ಷೇತ್ರಗಳ ಭೇಟಿಯನ್ನು ಮುಂದೂಡುತ್ತಿದ್ದ ಅನೇಕ ಮಹಿಳೆಯರು ಇಂದು ಯಾವುದೇ ಸಾರಿಗೆ ವೆಚ್ಚದ ಆತಂಕವಿಲ್ಲದೆ ದೇವಾಲಯಗಳಿಗೆ ಭೇಟಿ ನೀಡಲು ಸಾಧ್ಯವಾಗಿದೆ.

ವಿಶೇಷವಾಗಿ ಗ್ರಾಮೀಣ ಪ್ರದೇಶದ ಮಹಿಳೆಯರು, ಹಿರಿಯ ನಾಗರಿಕರು ಹಾಗೂ ಕುಟುಂಬದ ಸದಸ್ಯರು ಒಟ್ಟಾಗಿ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡಲು ಈ ಯೋಜನೆ ನೆರವಾಗಿದೆ. ರಾಜ್ಯದ ವಿವಿಧ ಭಾಗಗಳಿಂದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಹಾಸನಾಂಬೆ ದರ್ಶನಕ್ಕೆ ಆಗಮಿಸಿರುವುದರ ಹಿಂದೆ ಶಕ್ತಿ ಯೋಜನೆಯ ಕೊಡುಗೆಯೂ ಇದೆ. ಮಹಿಳೆಯರ ಸಂಚಾರ ಸ್ವಾತಂತ್ರ್ಯವನ್ನು ಹೆಚ್ಚಿಸುವುದರ ಜತೆಗೆ ಅವರ ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೂ ಈ ಯೋಜನೆ ಪೂರಕವಾಗಿದೆ.

ಗ್ಯಾರಂಟಿ ಯೋಜನೆಗಳ ಸಾಮಾಜಿಕ ಪರಿಣಾಮ: ಸರ್ಕಾರದ ಗ್ಯಾರಂಟಿ ಯೋಜನೆಗಳು ಕೇವಲ ಆರ್ಥಿಕ ನೆರವಿಗೆ ಸೀಮಿತವಾಗಿಲ್ಲ. ಜನಸಾಮಾನ್ಯರ ಬದುಕಿನಲ್ಲಿ ಹೊಸ ಅವಕಾಶಗಳನ್ನು ಸೃಷ್ಟಿಸುವುದರ ಜತೆಗೆ ಸಾಮಾಜಿಕ ಬದಲಾವಣೆಗೂ ಕಾರಣವಾಗುತ್ತಿವೆ. ಅದರಲ್ಲೂ ಶಕ್ತಿ ಯೋಜನೆಯಿಂದ ಮಹಿಳೆಯರು ಸ್ವತಂತ್ರವಾಗಿ ಪ್ರಯಾಣಿಸಲು, ಕುಟುಂಬದೊಂದಿಗೆ ಪ್ರವಾಸ ಕೈಗೊಳ್ಳಲು ಹಾಗೂ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡಲು ಸಾಧ್ಯವಾಗಿದೆ.

ಹಾಸನಾಂಬೆ ಜಾತ್ರೆಯಲ್ಲಿ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ಭಕ್ತರ ಸಂಖ್ಯೆ ಹಾಗೂ ಮಹಿಳಾ ಭಕ್ತರ ದೊಡ್ಡ ಪ್ರಮಾಣದ ಭಾಗವಹಿಸುವಿಕೆ ಶಕ್ತಿ ಯೋಜನೆಯ ಸಕಾರಾತ್ಮಕ ಪರಿಣಾಮಕ್ಕೆ ಒಂದು ಉದಾಹರಣೆಯಾಗಿದೆ. ಮಹಿಳೆಯರ ಅನುಕೂಲ ಮತ್ತು ಸಬಲೀಕರಣಕ್ಕೆ ಆದ್ಯತೆ ನೀಡಿರುವ ರಾಜ್ಯ ಸರ್ಕಾರದ ಈ ಯೋಜನೆಯು ಜನರ ಬದುಕಿನಲ್ಲಿ ಬದಲಾವಣೆ ತರುತ್ತಿರುವುದು ಸಂತಸದ ಸಂಗತಿಯಾಗಿದೆ.

ಹಾಸನಾಂಬೆ ದರ್ಶನ ಪಡೆದ ಭಕ್ತರ ವರ್ಷವಾರು ವಿವರ

- **2022: ಸುಮಾರು 6 ಲಕ್ಷ ಭಕ್ತರು**
- **2023: ಸುಮಾರು 14.40 ಲಕ್ಷ ಭಕ್ತರು**
- **2024: ಸುಮಾರು 17.47 ಲಕ್ಷ ಭಕ್ತರು**
- **2025: ಸುಮಾರು 26.13 ಲಕ್ಷ ಭಕ್ತರು**
- **2026: 30 ಲಕ್ಷಕ್ಕೂ ಅಧಿಕ ಭಕ್ತರು**

875.89 ಕೋಟಿ ಉಚಿತ ಪ್ರಯಾಣ, 23,202.22 ಕೋಟಿ ರೂ. ವೆಚ್ಚ: ರಾಜ್ಯ ಸರ್ಕಾರದ ಶಕ್ತಿ ಯೋಜನೆ ಆರಂಭವಾದಾಗಿನಿಂದ 2026ರ ನವೆಂಬರ್ 10ರವರೆಗೆ ಒಟ್ಟು 875.89 ಕೋಟಿ ಮಹಿಳಾ ಪ್ರಯಾಣಿಕರು ಈ ಯೋಜನೆಯಡಿ ಉಚಿತ ಬಸ್ ಪ್ರಯಾಣದ ಸೌಲಭ್ಯ ಪಡೆದಿದ್ದಾರೆ. ಇದಕ್ಕಾಗಿ ರಾಜ್ಯ ಸರ್ಕಾರ ಈವರೆಗೆ 23,202.22 ಕೋಟಿ ರೂ. ವೆಚ್ಚ ಭರಿಸಿದೆ. ಕೋಟ್ಯಂತರ ಮಹಿಳೆಯರಿಗೆ ಪ್ರಯಾಣದ ವೆಚ್ಚದ ಹೊರೆಯಿಂದ ಮುಕ್ತಿ ನೀಡಿರುವ ಈ ಯೋಜನೆಯು ಮಹಿಳೆಯರ ಸಂಚಾರ ಸ್ವಾತಂತ್ರ್ಯ ಹಾಗೂ ಆರ್ಥಿಕ ಸಬಲೀಕರಣಕ್ಕೆ ನೀಡಿರುವ ಕೊಡುಗೆಗೆ ಈ ಅಂಕಿಅಂಶಗಳೇ ಸಾಕ್ಷಿಯಾಗಿವೆ.

ಹೀಗೆ, ಮಹಿಳೆಯರ ಬದುಕಿನಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆ ತರುವುದರ ಜತೆಗೆ, ಅವರ ಧಾರ್ಮಿಕ ಪ್ರವಾಸಕ್ಕೂ ಅಪಾರ ಶಕ್ತಿ ತುಂಬಿರುವ ಶಕ್ತಿ ಯೋಜನೆಯ ಯಶಸ್ಸು ಶ್ಲಾಘನೀಯ. ಕೊಟ್ಟಮಾತಿನಂತೆ ನಡೆದು ಮಹಿಳೆಯರ ಆಶೋತ್ತರಗಳಿಗೆ ಸ್ಪಂದಿಸಿರುವ ತಮಗೆ ಹಾಗೂ ನಮ್ಮ ಕಾಂಗ್ರೆಸ್ ಸರ್ಕಾರಕ್ಕೆ ರಾಜ್ಯದ ಮಹಿಳೆಯರ ಪರವಾಗಿ ಧನ್ಯವಾದ ಸಲ್ಲಿಸುತ್ತೇನೆ.

ಕಾಂಗ್ರೆಸ್ ಸರ್ಕಾರದಿಂದ ಜನವಿರೋಧಿ ಆಡಳಿತ ಪದೇಪದೇ ಬೆಲೆ ಏರಿಕೆಗೆ ಬಿಜೆಪಿ ವಿರೋಧ



ಬೆಂಗಳೂರು, ನ.11: ಹಾಲು, ಬಸ್ ದರ ಮತ್ತು ಇತರ ಅಗತ್ಯ ವಸ್ತುಗಳ ಬೆಲೆಗಳನ್ನು ಏರಿಕೆ ಮಾಡಿರುವುದನ್ನು ವಿರೋಧಿಸಿ, ರಾಜ್ಯ ಬಿಜೆಪಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬುಧವಾರ ಪ್ರತಿಭಟನೆ ನಡೆಸಿತು. ಹಾಗೂ ಸಾಮಾನ್ಯ ಜನರ ಮೇಲೆ ಹೆಚ್ಚುವರಿ ಆರ್ಥಿಕ ಹೊರೆಯನ್ನು ಹೇರಿದ್ದಕ್ಕಾಗಿ ಕಾಂಗ್ರೆಸ್ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮತ್ತು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಚಲವಾದಿ ನಾರಾಯಣಸ್ವಾಮಿ ನೇತೃತ್ವದಲ್ಲಿ ಈ ಪ್ರತಿಭಟನೆ ನಡೆಯಿತು. ಪಕ್ಷದ ಕೋರ್ ಸಮಿತಿ ಸದಸ್ಯರು, ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ರಾಜ್ಯ ಪದಾಧಿಕಾರಿಗಳು ಮತ್ತು ಜಿಲ್ಲಾ ಅಧ್ಯಕ್ಷರು ಸೇರಿದಂತೆ ಹಲವು ನಾಯಕರು ಈ ಪ್ರತಿಭಟನೆಯಲ್ಲಿ ಪಾಲ್ಗೊಂಡು, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಡಿ.ಕೆ.ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರವು, ಪದೇ ಪದೇ ಬೆಲೆಗಳನ್ನು ಏರಿಸುವ ಮೂಲಕ ಜನವಿರೋಧಿ ನೀತಿಗಳನ್ನು ಅನುಸರಿಸುತ್ತಿದೆ ಎಂದು ಬಿಜೆಪಿ ಆರೋಪಿಸಿದೆ.

ದೈನಂದಿನ ನಿರ್ವಹಣೆ ಕಷ್ಟಕರ

ಉಚಿತ ಯೋಜನೆಗಳು ಮತ್ತು ಹೆಚ್ಚುತ್ತಿರುವ ವೆಚ್ಚಗಳ ಬಗ್ಗೆ ಮಾತನಾಡಿದ ಬಿಜೆಪಿ ನಾಯಕಿ ಚೇತನಾ, ಸರ್ಕಾರವು ಮತ ಕೇಳುವಾಗ ಉಚಿತ ಸೌಲಭ್ಯಗಳನ್ನು ನೀಡುವುದಾಗಿ ಭರವಸೆ ನೀಡಿತ್ತು. ಆದರೆ, ಈಗ ಸಾಮಾನ್ಯ ಕುಟುಂಬಗಳು ಹೆಚ್ಚುತ್ತಿರುವ ವೆಚ್ಚಗಳಿಂದಾಗಿ ತೀವ್ರ ಸಂಕಷ್ಟ ಎದುರಿಸುತ್ತಿವೆ ಎಂದರು. ನಾವು ಎಂದಿಗೂ ಏನನ್ನೂ ಉಚಿತವಾಗಿ ಕೇಳಿರಲಿಲ್ಲ. ಇಂದು ಸಾಮಾನ್ಯ ಜನರು ಸಂಕಷ್ಟದಲ್ಲಿದ್ದಾರೆ. ಹಾಲು ಮತ್ತು ಇತರ ಅಗತ್ಯ ವಸ್ತುಗಳ ಬೆಲೆಗಳು ಏರಿಕೆಯಾಗುತ್ತಿದ್ದು, ಕುಟುಂಬಗಳಿಗೆ ದೈನಂದಿನ ವೆಚ್ಚಗಳನ್ನು ನಿರ್ವಹಿಸುವುದು ಕಷ್ಟಕರವಾಗಿದೆ ಎಂದು ಹೇಳಿದರು.

ಕಾಂಗ್ರೆಸ್ ತನ್ನ ಚುನಾವಣಾ ಭರವಸೆಗಳನ್ನು ಈಡೇರಿಸುವಲ್ಲಿ ವಿಫಲವಾಗಿದೆ. ವಿದ್ಯುತ್ ಬಿಲ್, ಬಸ್ ಪ್ರಯಾಣ ದರ ಹಾಗೂ ಹಾಲಿನ ಬೆಲೆಗಳನ್ನು ಹೆಚ್ಚಿಸಿದೆ ಎಂದು ಬಿಜೆಪಿ ನಾಯಕಿ ರೂಪಾ ಕುಮಾರ್ ಆರೋಪಿಸಿದರು. ಸಾಮಾನ್ಯ ಕುಟುಂಬಗಳು ಎದುರಿಸುತ್ತಿರುವ ಆರ್ಥಿಕ ಸಂಕಷ್ಟಗಳನ್ನು ಎತ್ತಿ ತೋರಿಸುವ ಉದ್ದೇಶದಿಂದ ಈ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ನಾಯಕರು ತಿಳಿಸಿದರು ಮತ್ತು ಪದೇ ಪದೇ ಏರಿಕೆಯಾಗುತ್ತಿರುವ ಬೆಲೆಗಳಿಂದ ಜನರಿಗೆ ಪರಿಹಾರ ನೀಡಬೇಕೆಂದು ಆಗ್ರಹಿಸಿದರು.

Managing Editor : SANDEEP RENU 99728 72151 | Executive Editor : SHARAT JYOTSNA B.R 9886766483 vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20

Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363



ಸಿಎಂ ಡಿ ಕೆ ಶಿವಕುಮಾರ್ ಮೈಸೂರಿನ ಮಾನಸಗಂಗೋತ್ರಿಯ ಬಾಬಾಸಾಹೇಬ್ ಅಂಬೇಡ್ಕರ್ ಹಾಗೂ ರಾಷ್ಟ್ರಕವಿ ಕುವೆಂಪು ಅವರ ಪ್ರತಿಮೆಗೆ ಬುಧವಾರ ಪುಷ್ಪಾರ್ಚನೆ ಮಾಡಿದರು. ಶಾಸಕ ಹರೀಶ್ ಗೌಡ, ಮೈಸೂರು ವಿವಿ ಕುಲಪತಿ ಪ್ರೊ ಲೋಕನಾಥ್ ಎನ್ ಕೆ ಇದ್ದರು.

ನಾಳೆ ನಗರಕ್ಕೆ ಪ್ರಧಾನಿ ಮೋದಿ: ಬೆಂಗಳೂರು ಮೆಟ್ರೋ ಗುಲಾಬಿಮಾರ್ಗ, ವಂದೇಭಾರತ್ ರೈಲು ಉದ್ಘಾಟನೆ

ಬೆಂಗಳೂರು, ನ.11: ನಗರದ ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ ಮತ್ತೊಂದು ಮಹತ್ವದ ಸೇರ್ಪಡೆಯಾಗಿರುವ ನಮ್ಮ ಮೆಟ್ರೋ ಗುಲಾಬಿಮಾರ್ಗದ ಕಾಳೇನ ಅಗ್ರಹಾರ–ತಾವರೆಕೆರೆ ನಡುವಿನ 7.5 ಕಿ.ಮೀ ಉದ್ದದ ಮೇಲ್ಸೇತುವೆ ಮಾರ್ಗ ಲೋಕಾರ್ಪಣೆಗಾಗಿ ಪ್ರಧಾನಿ ನರೇಂದ್ರಮೋದಿ ಅವರು ನ.13ರಂದು ಬೆಂಗಳೂರಿಗೆ ಆಗಮಿಸುತ್ತಿದ್ದಾರೆ ಎಂದು ಸಂಸದ ತೇಜಸ್ವಿ ಸೂರ್ಯ ತಿಳಿಸಿದ್ದಾರೆ.

ಕಾಳೇನ ಅಗ್ರಹಾರದಿಂದ ತಾವರೆಕೆರೆವರೆಗೆ ನಿರ್ಮಾಣಗೊಂಡಿರುವ ಈ ಮಾರ್ಗದಲ್ಲಿ ಕಾಳೇನ ಅಗ್ರಹಾರ, ಹುಳಿಮಾವು, ಐಐಎಂಬಿ, ಜೆ.ಪಿ.ನಗರ 4ನೇ ಹಂತ, ಜಯದೇವ ಆಸ್ಪತ್ರೆ ಹಾಗೂ ತಾವರೆಕೆರೆ ಸೇರಿದಂತೆ ಪ್ರಮುಖ ನಿಲ್ದಾಣಗಳಿವೆ. ಜಯದೇವ ಆಸ್ಪತ್ರೆ ನಿಲ್ದಾಣದಲ್ಲಿ ಪಿಂಕ್‌ಲೈನ್ ಮತ್ತು ಯೆಲ್ಲೋ ಲೈನ್ ನಡುವೆ ಸಂಪರ್ಕ ಕಲ್ಪಿಸಲಾಗಿದ್ದು, ದಕ್ಷಿಣ ಬೆಂಗಳೂರಿನ ಪ್ರಯಾಣಿಕರಿಗೆ ಇದು ಪ್ರಮುಖ ಇಂಟರ್‌ಚೇಂಜ್ ಆಗಲಿದೆ. ಇದೇ ವೇಳೆ ಬಹುನಿರೀಕ್ಷಿತ ಬೆಂಗಳೂರು–ಮಂಗಳೂರು–ಗೋವಾ ವಂದೇಭಾರತ್ ಎಕ್ಸ್‌ಪ್ರೆಸ್ ರೈಲುಸೇವೆಗೂ ಪ್ರಧಾನಿ ಮೋದಿ ಚಾಲನೆ ನೀಡಲಿದ್ದಾರೆ.

ಕಾರ್ಯಕ್ರಮದ ಅಂಗವಾಗಿ ಪ್ರಧಾನಿ ಮೋದಿ ಅವರು ತಾವರೆಕೆರೆ ನಿಲ್ದಾಣದಿಂದ ಐಐಎಂಬಿ–ಬಿಳೇಕಹಳ್ಳಿ ನಿಲ್ದಾಣದವರೆಗೆ ಮೆಟ್ರೋದಲ್ಲಿ ಪ್ರಯಾಣಿಸಿ ಸೇವೆಗೆ ಚಾಲನೆ ನೀಡಲಿದ್ದಾರೆ ಎಂದು ತಿಳಿಸಿದ್ದಾರೆ.



ದೆಹಲಿ ನಂತರ ಬೆಂಗಳೂರಿಗೆ ಅತಿದೊಡ್ಡ ಮೆಟ್ರೋ ಜಾಲ ಹೊಂದಿದ ಹೆಗ್ಗಳಿಕೆ

ಉದ್ಘಾಟನೆಯ ಬಳಿಕ ಬೆಂಗಳೂರಿನ ಕಾರ್ಯಾಚರಣೆಯಲ್ಲಿರುವ ಮೆಟ್ರೋ ಜಾಲದ ಒಟ್ಟು ಉದ್ದ 96.1 ಕಿ.ಮೀ.ಯಿಂದ 103.6 ಕಿ.ಮೀ.ಗೆ ಏರಿಕೆಯಾಗಲಿದೆ. ಇದರೊಂದಿಗೆ ಬೆಂಗಳೂರು ದೇಶದಲ್ಲಿ ದೆಹಲಿಯ ನಂತರ ಎರಡನೇ ಅತಿದೊಡ್ಡ ಕಾರ್ಯಾಚರಣೆಯ ಮೆಟ್ರೋ ಜಾಲ ಹೊಂದಿರುವ ನಗರ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ. ಪಿಂಕ್‌ಲೈನ್ ಒಟ್ಟು 21.25 ಕಿ.ಮೀ. ಉದ್ದದ ಕಾಳೇನ ಅಗ್ರಹಾರ–ನಾಗವಾರ ಮಾರ್ಗವಾಗಿದೆ. ಇದರಲ್ಲಿ 7.5 ಕಿ.ಮೀ. ಮೇಲ್ಸೇತುವೆ ಮಾರ್ಗ ಉದ್ಘಾಟನೆಗೆ ಸಿದ್ಧವಾಗಿದ್ದು, ಉಳಿದ ಭಾಗದಲ್ಲಿ ಭೂಗತ ಮಾರ್ಗದ ಕಾಮಗಾರಿ ಮುಂದುವರಿದಿದೆ. ಪೂರ್ಣಮಾರ್ಗ ಕಾರ್ಯಾರಂಭಗೊಂಡ ಬಳಿಕ ದಕ್ಷಿಣ ಬೆಂಗಳೂರಿನಿಂದ ಉತ್ತರ ಬೆಂಗಳೂರಿನ ನಾಗವಾರ ಮತ್ತು ಪ್ರಮುಖ ವಾಣಿಜ್ಯ ಪ್ರದೇಶಗಳಿಗೆ ಸಂಪರ್ಕ ಮತ್ತಷ್ಟು ಸುಗಮವಾಗಲಿದೆ.

ವಂದೇ ಭಾರತ್‌ಗೂ ಚಾಲನೆ

ಬಹುನಿರೀಕ್ಷಿತ ಬೆಂಗಳೂರು–ಮಂಗಳೂರು–ಗೋವಾ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಸೇವೆಗೆ ನವೆಂಬರ್ 13ರಂದು ಚಾಲನೆ ದೊರೆಯುವ ಸಾಧ್ಯತೆಯಿದೆ. ಪ್ರಧಾನಿ ಮೋದಿ ಅವರು ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ ಹೊರಡುವ ವಂದೇ ಭಾರತ್ ರೈಲಿಗೆ ದೂರಸ್ಥ ವಿಧಾನದ ಮೂಲಕ ಚಾಲನೆ ನೀಡಲಿದ್ದಾರೆ. ಇದೇ ವೇಳೆ ಅಶ್ವಿನಿ ವೈಷ್ಣವ್ ಅವರು ಮಂಗಳೂರು ಜಂಕ್ಷನ್‌ನಲ್ಲಿ ಮಧ್ಯಾಹ್ನ 2.30ಕ್ಕೆ ರೈಲಿಗೆ ಚಾಲನೆ ನೀಡುವ ಸಾಧ್ಯತೆಯಿದೆ.



ಈ ಹೊಸ ಸೇವೆಯು ಪ್ರಸ್ತುತ ಸಂಚರಿಸುತ್ತಿರುವ ಮಂಗಳೂರು ಸೆಂಟ್ರಲ್–ಮಡಗಾಂವ್–ಮಂಗಳೂರು ಸೆಂಟ್ರಲ್ ವಂದೇ ಭಾರತ್ ಎಕ್ಸ್‌ಪ್ರೆಸ್ ಸೇವೆಯನ್ನು ವಿಸ್ತರಿಸಿ ಆರಂಭಿಸಲಾಗುತ್ತಿದೆ. ಸೆಪ್ಟೆಂಬರ್ 29ರಂದು ರೈಲ್ವೆ ಸಚಿವಾಲಯವು ಯಶವಂತಪುರ–ಮಂಗಳೂರು–ಮಡಗಾಂವ್–ಯಶವಂತಪುರ ಮಾರ್ಗದ ವಂದೇ ಭಾರತ್ ಸೇವೆಯನ್ನು ಘೋಷಿಸಿತ್ತು. ಇದಕ್ಕೆ ರೈಲು ಸಂಖ್ಯೆ 26655/656 ನಿಗದಿಪಡಿಸಲಾಗಿದೆ.

12 ನಿಲ್ದಾಣಗಳು: ಬೆಂಗಳೂರು–ಮಡಗಾಂವ್ ವಂದೇಭಾರತ್ ಎಕ್ಸ್‌ಪ್ರೆಸ್‌ಗೆ ಬೆಂಗಳೂರು ಮತ್ತು ಮಡಗಾಂವ್ ಹೊರತುಪಡಿಸಿ ಒಟ್ಟು 12 ನಿಲ್ದಾಣಗಳಿರಲಿವೆ. ಶ್ರವಣಬೆಳಗೊಳ, ಹಾಸನ, ಸಕಲೇಶಪುರ, ಸುಬ್ರಹ್ಮಣ್ಯ ರೋಡ್, ಕಬಕ ಪುತ್ತೂರು, ಮಂಗಳೂರು ಜಂಕ್ಷನ್, ಉಡುಪಿ, ಕುಂದಾಪುರ, ಬೈಂದೂರು, ಮುರ್ಡೇಶ್ವರ, ಗೋಕರ್ಣ ರೋಡ್, ಕಾರವಾರ ಮಾರ್ಗಗಳ ಮೂಲಕ ಬೆಂಗಳೂರು, ಹಾಸನ, ಕರಾವಳಿ ಕರ್ನಾಟಕ ಹಾಗೂ ಉತ್ತರ ಕನ್ನಡ ಭಾಗಗಳನ್ನು ಸಂಪರ್ಕಿಸುವ ವೇಗದ ರೈಲುಸೇವೆಗೆ ಮತ್ತಷ್ಟು ಉತ್ತೇಜನ ದೊರೆಯಲಿದೆ.

12 ಗಂಟೆ 20 ನಿಮಿಷಗಳ ಪ್ರಯಾಣ: ನಿಗದಿಪಡಿಸಿರುವ ವೇಳಾಪಟ್ಟಿಯ ಪ್ರಕಾರ, ಬುಧವಾರ ಹೊರತುಪಡಿಸಿ ಯಶವಂತಪುರದಿಂದ ರೈಲು ಬೆಳಗ್ಗೆ 7.35ಕ್ಕೆ ಹೊರಟು ರಾತ್ರಿ 8.55ಕ್ಕೆ ಮಡಗಾಂವ್ ತಲುಪಲಿದೆ. ಒಟ್ಟು ಪ್ರಯಾಣದ ಅವಧಿ 12 ಗಂಟೆ 20 ನಿಮಿಷಗಳು.ಮರುದಿನ ಮಡಗಾಂವ್‌ನಿಂದ ಬೆಳಗ್ಗೆ 8.20ಕ್ಕೆ ಹೊರಡುವ ರೈಲು ರಾತ್ರಿ 9.15ಕ್ಕೆ ಯಶವಂತಪುರ ತಲುಪಲಿದೆ. ಗುರುವಾರ ಹೊರತುಪಡಿಸಿ ಈ ಪ್ರಯಾಣಕ್ಕೆ 13 ಗಂಟೆಗಳ ಕಾಲ ಬೇಕಾಗಲಿದೆ. ರೈಲು ಸೇವೆಗಾಗಿ ಅಗತ್ಯವಿರುವ ಎರಡು ರೇಕ್‌ಗಳನ್ನು ಸಿದ್ಧಪಡಿಸಲಾಗಿದೆ ಎಂದು ರೈಲ್ವೆ ಮೂಲಗಳು ತಿಳಿಸಿವೆ.

ಮೆಟ್ರೋಗೆ ಕರ್ನಾಟಕ ಸರ್ಕಾರದಿಂದಲೇ ಹೆಚ್ಚು ಅನುದಾನ



ಬೆಂಗಳೂರು, ನ.11: ರಾಜಧಾನಿಯ ನಮ್ಮ ಮೆಟ್ರೋ ಯೋಜನೆಗೆ ಹೆಚ್ಚು ಅನುದಾನ ಕೊಡುತ್ತಿರುವುದೇ ರಾಜ್ಯ ಸರ್ಕಾರ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಈ ಬಗ್ಗೆ ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಬೆಂಗಳೂರು ಮೆಟ್ರೋ ಯೋಜನೆಯ ಸಮಗ್ರ ಅಭಿವೃದ್ಧಿಯಲ್ಲಿ ಕರ್ನಾಟಕ ಸರ್ಕಾರವೇ ಅತಿ ಹೆಚ್ಚಿನ ಆರ್ಥಿಕ ಕೊಡುಗೆ ನೀಡುತ್ತಿದೆ. ಮೆಟ್ರೋ ಮಾರ್ಗಗಳ ನಿರ್ಮಾಣಕ್ಕೆ ಹಣಕಾಸು ಒದಗಿಸುವುದರ ಜತೆಗೆ, ಭೂಸ್ವಾಧೀನ, ಪುನರ್ವಸತಿ, ರಾಜ್ಯ ತೆರಿಗೆ, ನಿರ್ಮಾಣದ ಅವಧಿಯ ಬಡ್ಡಿ, ಸಾಲ ಮರುಪಾವತಿ ಹಾಗೂ ಮೆಟ್ರೋ ರೈಲುಗಳ ನಿರ್ವಹಣೆಯ ಜವಾಬ್ದಾರಿಯನ್ನೂ ರಾಜ್ಯ ಸರ್ಕಾರ ನಿಭಾಯಿಸುತ್ತಿದೆ ಎಂದಿದ್ದಾರೆ. ಮುಂದುವರಿದು ಮೆಟ್ರೋ ಯೋಜನೆಯ ವಿವಿಧ ಹಂತಗಳಲ್ಲಿ ಕೇಂದ್ರ ಸರ್ಕಾರಕ್ಕಿಂತ ಹೆಚ್ಚಿನ ಹಣವನ್ನು ಕರ್ನಾಟಕ ಸರ್ಕಾರವೇ ಹೂಡಿಕೆ ಮಾಡಿದೆ. ಕಾಮಗಾರಿಗಳ ವಿಳಂಬದಿಂದ ಉಂಟಾಗುವ ಹೆಚ್ಚುವರಿ ವೆಚ್ಚದ ಹೊರೆಯಲ್ಲಿಯೂ ಕರ್ನಾಟಕದ ಪಾಲು ಗಣನೀಯವಾಗಿದೆ. ಇದರೊಂದಿಗೆ, ಹೊಸ ಮೆಟ್ರೋ ಮಾರ್ಗಗಳ ನಿರ್ಮಾಣ ಮತ್ತು ಜಾಲದ ವಿಸ್ತರಣೆಗೆ ರಾಜ್ಯ ಸರ್ಕಾರ ನಿರಂತರವಾಗಿ ಅನುದಾನ ಹಾಗೂ ಅಗತ್ಯ ನೆರವು ಒದಗಿಸುತ್ತಿದೆ. ಒಟ್ಟಾರೆ ಮೆಟ್ರೋ ಯೋಜನೆಯ ವೆಚ್ಚ, ನಿರ್ಮಾಣದ ನಂತರದ ನಿರ್ವಹಣೆ ಮತ್ತು ಭವಿಷ್ಯದ ವಿಸ್ತರಣೆ ಎಲ್ಲದರಲ್ಲೂ ಕರ್ನಾಟಕ ಸರ್ಕಾರದ ಪಾಲುದಾರಿಕೆ ಪ್ರಮುಖವಾಗಿದೆ. ಬೆಂಗಳೂರಿನ ಬೆಳವಣಿಗೆಗೆ ಪೂರಕವಾದ ಸಮಗ್ರ, ಸುಸ್ಥಿರ ಮತ್ತು ಸುಗಮ ಸಾರ್ವಜನಿಕ ಸಾರಿಗೆ ವ್ಯವಸ್ಥೆ ರೂಪಿಸುವುದು ರಾಜ್ಯ ಸರ್ಕಾರದ ಆದ್ಯತೆಯಾಗಿದೆ ಎಂದೂ ಡಿ.ಕೆ ಶಿವಕುಮಾರ್ ಹೇಳಿದ್ದಾರೆ.

ಬರ ಪರಿಹಾರ ಬಿಡುಗಡೆಗೆ ಮನವಿ ಮಾಡಿ 2 ವಾರ ಕಳೆದರೂ ಕೇಂದ್ರದಿಂದ ಉತ್ತರವಿಲ್ಲ



ಬೆಂಗಳೂರು, ನ.11: ರಾಜ್ಯಕ್ಕೆ ಬರ ಪರಿಹಾರದ ಹಣ ಬಿಡುಗಡೆ ಮಾಡುವಂತೆ ಆಗ್ರಹಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು ಎರಡು ವಾರಗಳಾಗಿದ್ದರೂ ಇದುವರೆಗೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ತಿಳಿಸಿದ್ದಾರೆ.

ಪ್ರಧಾನಿಯವರು ರಾಜ್ಯಕ್ಕೆ ಭೇಟಿ ನೀಡಿದ ವೇಳೆ ಅವರ ಸಮಯ ಸಿಗುವುದು ಕಷ್ಟವಾದರೂ ಮತ್ತೊಮ್ಮೆ ಸಮಯ ಕೇಳಲು ಮನವಿ ಮಾಡಲಾಗುವುದು. ಪ್ರಧಾನಿಗಳು ಸಮಯ ನಿಗದಿಪಡಿಸಿದ ನಂತರ, ತಾವು ಮತ್ತು ಮುಖ್ಯಮಂತ್ರಿ ಅಥವಾ ಸರ್ವಪಕ್ಷ ನಿಯೋಗ ದೆಹಲಿಗೆ ತೆರಳಬೇಕೇ ಎಂಬುದನ್ನು ನಿರ್ಧರಿಸಲಾಗುವುದು ಎಂದು ಹೇಳಿದರು.

ಡಿಸೆಂಬರ್ ಒಳಗೆ 2ನೇ ಕಂತು ಬಿಡುಗಡೆ: ಮೊದಲ ಕಂತಿನ ಬರ ಪರಿಹಾರ ಹಣ ಬಿಡುಗಡೆಯಾದ ತಕ್ಷಣವೇ ಎರಡನೇ ಕಂತಿನ ಹಣವನ್ನು ಬಿಡುಗಡೆ ಮಾಡಲು ಸರ್ಕಾರ ಸಜ್ಜಾಗಿದೆ. ಡಿಸೆಂಬರ್ ತಿಂಗಳ ಒಳಗೆ ಎರಡನೇ ಕಂತಿನ ಬರ ಪರಿಹಾರ ಹಣವನ್ನು ರೈತರ ಖಾತೆಗಳಿಗೆ ತಲುಪಿಸಲಾಗುವುದು. ಮೊದಲ ಹಂತದಲ್ಲಿ ಈಗಾಗಲೇ 1,250 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿದ್ದು, ಎರಡನೇ ಹಂತದಲ್ಲೂ ಅಷ್ಟೇ ಪ್ರಮಾಣದ ಮೊತ್ತವನ್ನು ಬಿಡುಗಡೆ ಮಾಡಲಾಗುವುದು ಎಂದು ಡಿಸಿಎಂ ಭರವಸೆ ನೀಡಿದರು.

ವಾಯುಮಾಲಿನ್ಯ: ತತ್ಕಾಲಕ್ಕೆ ದೆಹಲಿ ತೊರೆಯುವಂತೆ ವೈದ್ಯರ ಸಲಹೆ

ನವದೆಹಲಿ, ನ. 11: ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ವಾಯುಮಾಲಿನ್ಯ ಮಿತಿಮೀರಿದ್ದು, ಗಾಳಿಯ ಗುಣಮಟ್ಟ ತೀವ್ರ ಕುಸಿತ ಕಂಡಿರುವ ಹಿನ್ನೆಲೆಯಲ್ಲಿ ಆತಂಕ ಗೊಂಡಿರುವ ವೈದ್ಯಕೀಯ ತಜ್ಞರು, ಅವಕಾಶವಿರುವವರು ಮತ್ತು ಸಾಧ್ಯವಾದರೆ ದೆಹಲಿಯ ಗಾಳಿಯ ಗುಣಮಟ್ಟ ಸ್ವ ಸುಧಾರಿಸುವವರೆಗೆ ಕೆಲವು ದಿನ ನಗರದಿಂದ ಹೊರಹೋಗುವುದು ಒಳಿತು ಎಂದು ಸಲಹೆ ನೀಡಿದ್ದಾರೆ.ಮಾಲಿನ್ಯದ ಈ ತೀವ್ರತೆಯು ಸಾರ್ವಜನಿಕರ ಆರೋಗ್ಯದ ಮೇಲೆ ಭಾರಿ ದುಷ್ಪರಿಣಾಮ ಬೀರುತ್ತಿದೆ. ಮುಖ್ಯವಾಗಿ ಮಕ್ಕಳು, ವಯೋವೃದ್ಧರು, ಗರ್ಭಿಣಿಯರು ಹಾಗೂ ಹೃದಯ ಮತ್ತು ಶ್ವಾಸಕೋಶದ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಇದು ಅತ್ಯಂತ ಅಪಾಯಕಾರಿ ಸ್ಥಿತಿಯಾಗಿದೆ.

ತಜ್ಞವೈದ್ಯ ಡಾ. ರಣದೀಪ್ ಗುಲೇರಿಯಾ ಮತ್ತು ಡಾ. ಅಭಿನವ್ ಭಾನೋಟ್ ಆರೋಗ್ಯದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ವಿವರಿಸಿದ್ದು, ಹೊರಗೆ ಹೋಗುವಾಗ ಕಡ್ಡಾಯವಾಗಿ ಎನ್–95 ಮಾಸ್ಕ್ ಧರಿಸಬೇಕು, ವಾಯುವಿಹಾರ ಬಿಟ್ಟು ಮನೆಯೊಳಗೇ ವ್ಯಾಯಾಮ ಮಾಡಬೇಕು, ಏರ್ ಪ್ಯೂರಿಫೈಯರ್‌ಗಳನ್ನು ಬಳಸಬೇಕು ಹಾಗೂ ಸಾಧ್ಯವಾದಷ್ಟು ಮನೆಯಿಂದಲೇ ಕೆಲಸ ಮಾಡುವಂತೆ ಸೂಚಿಸಿದ್ದಾರೆ.ನಿತ್ಯ ಪ್ರಯಾಣಿಕರಿಗೆ, ದ್ವಿಚಕ್ರ ವಾಹನ ಸವಾರರಿಗೆ ಮತ್ತು ಕಾರ್ಮಿಕರಿಗೆ ಈ ಮಾಲಿನ್ಯ ಅತಿ ಹೆಚ್ಚು ಹಾನಿಯುಂಟುಮಾಡುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಐಐಟಿಎಂ (ಐಐಟಿಎಂ– ದೆಹಲಿ ವಾಯು ಗುಣಮಟ್ಟ ಮುನ್ನೆಚ್ಚರಿಕೆ ವ್ಯವಸ್ಥೆ) ಸಿದ್ಧಪಡಿಸಿದ ಮಾದರಿಗಳ ವರದಿ ಪ್ರಕಾರ, ನ.9ರಂದು ದೆಹಲಿಯಲ್ಲಿ ದಾಖಲಾದ ಒಟ್ಟು ವಾಯುಮಾಲಿನ್ಯದಲ್ಲಿ ಶೇ.80ಕ್ಕೂ ಅಧಿಕ ಪಾಲು ಕೇವಲ ಪಟಾಕಿಗಳಿಂದಲೇ ಉಂಟಾಗಿದೆ ಎಂಬ ಆಘಾತಕಾರಿ ಮಾಹಿತಿ ಬಹಿರಂಗವಾಗಿದೆ. ಮಾಲಿನ್ಯದ ನೈಜ ಪ್ರಮಾಣ ಸಾರ್ವಜನಿಕರಿಗೆ ಲಭ್ಯವಾಗುತ್ತಿಲ್ಲ ಎಂಬ ಕಳವಳವೂ ದಟ್ಟವಾಗಿದೆ. ಮಾಲಿನ್ಯದ ತೀವ್ರತೆಯು ಮಾಪನ ಉಪಕರಣಗಳ ಗರಿಷ್ಠ ಅಳತೆಯ ಮಿತಿಯನ್ನು ಮೀರಿದ್ದರಿಂದ, ದೀಪಾವಳಿಯ ಮರುದಿನ ದೆಹಲಿಯ 59 ಮಾಪನ ಕೇಂದ್ರಗಳ ಪೈಕಿ 45 ಕೇಂದ್ರಗಳಲ್ಲಿ ಸರಿಯಾದ ಅಂಕಿ–ಅಂಶಗಳು ದಾಖಲಾಗದೆ ಖಾಲಿ ಜಾಗಗಳು ಕಂಡುಬಂದಿವೆ.

ಉಪಶಮನದ ಲಕ್ಷಣಗಳಿಲ್ಲ

ಮುಂದಿನ ದಿನಗಳಲ್ಲೂ ದೆಹಲಿಯ ಜನತೆಗೆ ನೆಮ್ಮದಿ ಸಿಗುವ ಲಕ್ಷಣಗಳಿಲ್ಲ. ಮುಂಬರುವ ಎಲ್‌ನಿನೊ ಪ್ರಭಾವಿತ ಚಳಿಗಾಲದ ಹವಾಮಾನವು ದೆಹಲಿಯ ಮಾಲಿನ್ಯವನ್ನು ಮತ್ತಷ್ಟು ಬಿಗಡಾಯಿಸುವ ಆತಂಕವನ್ನು ಹುಟ್ಟುಹಾಕಿದೆ. ಎಲ್‌ನಿನೊ ಪ್ರಭಾವದಿಂದಾಗಿ ಈ ಬಾರಿ ಮಳೆಯ ಕೊರತೆ ಎದುರಾಗಲಿದ್ದು, ಗಾಳಿಯ ವೇಗವೂ ಗಣನೀಯವಾಗಿ ಕಡಿಮೆಯಾಗಲಿದೆ

ಒಂದೂವರೆ ವರ್ಷದಲ್ಲಿ ಮೆಟ್ರೋ ಜಾಲವನ್ನು 170 ಕಿ.ಮೀ.ಗೆ ವಿಸ್ತರಿಸುವ ಗುರಿ



ಬೆಂಗಳೂರು, ನ.11: ಮುಂದಿನ ಒಂದೂವರೆ ವರ್ಷದ ಅವಧಿಯಲ್ಲಿ ಬೆಂಗಳೂರು ಮೆಟ್ರೋ ಜಾಲವನ್ನು 170 ಕಿ.ಮೀ.ಗೆ ವಿಸ್ತರಿಸುವ ಸ್ಪಷ್ಟ ಗುರಿಯನ್ನು ಸರ್ಕಾರ ಹೊಂದಿದೆ ಎಂದು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾವರೆಕೆರೆಯಿಂದ ನಾಗವಾರದ ವರೆಗಿನ 13.7 ಕಿ.ಮೀ. ಭೂಗತ ಮಾರ್ಗ ಪೂರ್ಣಗೊಂಡಾಗ ಗುಲಾಬಿಮಾರ್ಗ ಒಟ್ಟು 21.2 ಕಿ.ಮೀ. ತಲುಪಲಿದೆ. ಎಂದರು.

ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಕೆ.ಆರ್.ಪುರಂವರೆಗಿನ 19.75 ಕಿ.ಮೀ ಮತ್ತು ಹೆಬ್ಬಾಳದಿಂದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದವರೆಗಿನ ಬ್ಲೂ ಲೈನ್ ಮಾರ್ಗಗಳನ್ನು ಮುಂದಿನ ವರ್ಷವೇ ಮುಕ್ತಗೊಳಿಸುವ ಗುರಿ ಇದೆ. ಕೆ.ಆರ್.ಪುರಂ ನಿಂದ ಹೆಬ್ಬಾಳ ನಡುವಿನ ಸವಾಲಿನ ಮಾರ್ಗವನ್ನೂ ಪೂರ್ಣಗೊಳಿಸಿ, ಸಿಲ್ಕ್ ಬೋರ್ಡ್ ನಿಂದ ಏರ್ಪೋರ್ಟ್‌ವರೆಗಿನ ಒಟ್ಟು 59 ಕಿ.ಮೀ ಸಂಪರ್ಕವನ್ನು ಶೀಘ್ರವೇ ಕಲ್ಪಿಸಲಾಗುವುದು ಎಂದರು.

ಜೆ.ಪಿ. ನಗರ 4ನೇ ಹಂತದಿಂದ ಮೈಸೂರು ರಸ್ತೆ, ಮಾಗಡಿ ರಸ್ತೆ ದಾಟಿ ಹೆಬ್ಬಾಳಕ್ಕೆ ತಲುಪುವ 32 ಕಿ.ಮೀ ಮಾರ್ಗ ಹಾಗೂ ಹೊಸಹಳ್ಳಿಯಿಂದ ಕಡಬಗೆರೆವರೆಗಿನ 12.5 ಕಿ.ಮೀ (ಒಟ್ಟು 44.5 ಕಿ.ಮೀ) ಆರೆಂಜ್ ಲೈನ್ ಗೆ ಮುಂದಿನ 6 ತಿಂಗಳಲ್ಲಿ ಟೆಂಡರ್ ಪ್ರಕ್ರಿಯೆ ಮುಗಿಸಿ ಭೂಮಿಪೂಜೆ ನೆರವೇರಿಸಲಾಗುವುದು ಎಂದರು. **ರೆಡ್ ಲೈನ್:** ಸರ್ಜಾಪುರದಿಂದ ಹೆಬ್ಬಾಳದ ವರೆಗೆ 37.8 ಕಿ.ಮೀ. ಉದ್ದದ ರೆಡ್ ಲೈನ್ ಯೋಜನೆಗೆ 2025ರ ಜನವರಿಯಲ್ಲಿಯೇ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಒಪ್ಪಿಗೆ ದೊರೆತ ತಕ್ಷಣ ಟೆಂಡರ್ ಕರೆಯಲಾಗುವುದು ಎಂದರು.

ಅವಮಾನ ಮಾಡಿದ್ದು ಸಾಕು

ಕರ್ನಾಟಕ ದಿವಾಳಿಯಾಗಿದೆ ಎಂಬ ಪ್ರತಿಪಕ್ಷ ನಾಯಕರ ಲೇವಡಿ ಬಗ್ಗೆ ಪತ್ರಕರ್ತರ ಪ್ರಶ್ನೆಗೆ ಉತ್ತರ ನೀಡಿದ ಸಚಿವ ಕೃಷ್ಣ ಬೈರೇಗೌಡ, ಕರ್ನಾಟಕ ತಲಾ ಆದಾಯದಲ್ಲಿ ಇಡೀ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಕೇಂದ್ರಕ್ಕೆ ತೆರಿಗೆ ಸಂದಾಯದಲ್ಲೂ ಎರಡನೇ ಸ್ಥಾನದಲ್ಲಿರುವ, ಇಡೀ ದೇಶದ ಎಲ್ಲಾ ರಾಜ್ಯದ ಜನತೆಗೂ ಉದ್ಯೋಗಾವಕಾಶ ನೀಡುತ್ತಿರುವ ರಾಜ್ಯ ದಿವಾಳಿಯಾಗುವುದು ಹೇಗೆ. ಪ್ರತಿಪಕ್ಷ ನಾಯಕರು ರಾಜಕೀಯಕ್ಕಾಗಿ ಕರ್ನಾಟಕವನ್ನು ಅಪಮಾನ ಮಾಡುವುದು ಬಿಟ್ಟು ಕೇಂದ್ರ ಸರ್ಕಾರದಿಂದ ನಮಗೆ ಬರಬೇಕಾದ ನ್ಯಾಯಯುತ ತೆರಿಗೆ ಪಾಲನ್ನು ಕೊಡಿಸಲಿ, ಆ ನಂತರ ಮಾತನಾಡಲಿ ಎಂದು ಕೃಷ್ಣ ಬೈರೇಗೌಡ ಸವಾಲು ಎಸೆದರು.

ಕೇಂದ್ರದ ಪಾಲು ಹೆಚ್ಚಳಕ್ಕೆ ಪ್ರಧಾನಿಗೆ ಮನವಿ

ಬೆಂಗಳೂರು ಮೆಟ್ರೋ ಯೋಜನೆಯ ಒಟ್ಟು ವೆಚ್ಚ ಹಂಚಿಕೆಯಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ನಡುವೆ ಇರುವ ಭಾರಿ ವ್ಯತ್ಯಾಸವನ್ನು ಸಚಿವ ಕೃಷ್ಣ ಬೈರೇಗೌಡ ಅಂಕಿ–ಅಂಶಗಳ ಸಮೇತ ವಿವರಿಸಿದರು.

ಮೆಟ್ರೋ–1 ನೇ ಹಂತದಿಂದ 3ನೇ ಹಂತದವರೆಗಿನ ಒಟ್ಟು 77,891 ಕೋಟಿ ರೂ. ವೆಚ್ಚದಲ್ಲಿ ಕರ್ನಾಟಕ ಸರ್ಕಾರವೇ 65,291=ಕೋಟಿ ರೂ. (ಶೇ. 84) ಭರಿಸುತ್ತಿದ್ದು, ಕೇಂದ್ರ ಸರ್ಕಾರದ ಪಾಲು ಕೇವಲ 12,600 ಕೋಟಿ ರೂ. (ಶೇ. 16) ಆಗಿದೆ. ಮೆಟ್ರೋ ಮೊದಲ ಹಂತದಲ್ಲಿ ಶೇ. 80ರಷ್ಟಿದ್ದ ಕೇಂದ್ರದ ಬಂಡವಾಳ ಹೂಡಿಕೆ, ಎರಡನೇ ಹಂತದಲ್ಲಿ ಕ್ರಮೇಣ ಶೇ.16ಕ್ಕೆ ಮತ್ತು ಪ್ರಸ್ತುತ ಶೇ.14ಕ್ಕೆ ಕುಸಿದಿದೆ ಎಂದು ತಿಳಿಸಿದರು.

ಮೆಟ್ರೋದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಹೂಡಿಕೆ ಸಮಪಾಲು ಎಂದರೂ ಸಹ ವಾಸ್ತವವಾಗಿ ಶೇ.84ರಷ್ಟು ರಾಜ್ಯ ಸರ್ಕಾರ ಭರಿಸುತ್ತಿದೆ, ಶೇ.16ರಷ್ಟು ಮಾತ್ರ ಕೇಂದ್ರ ಸರ್ಕಾರ ಭರಿಸುತ್ತಿದೆ ಎಂದು ಮಾಹಿತಿ ನೀಡಿದರು.

ಬೆಂಗಳೂರು ನಗರವು ದೇಶದಲ್ಲೇ 2ನೇ ಅತಿಹೆಚ್ಚು ಜಿಎಸ್ಟಿ ತಂದುಕೊಡುವ ಮತ್ತು ಭಾರಿ ಪ್ರಮಾಣದ ವಿದೇಶಿ ವಿನಿಮಯ ಈಡೇರಿಸುವ ಕೇಂದ್ರವಾಗಿದೆ. ಹೀಗಾಗಿ ದೇಶದ ಆರ್ಥಿಕತೆಗೆ ಪ್ರಮುಖ ಕೊಡುಗೆ ನೀಡುತ್ತಿರುವ ಬೆಂಗಳೂರಿನ ಮೂಲಸೌಕರ್ಯಕ್ಕೆ ಕೇಂದ್ರ ಸರ್ಕಾರ ತನ್ನ ಹೂಡಿಕೆಯ ಪಾಲನ್ನು ಹೆಚ್ಚಿಸಬೇಕು ಎಂದು ಕಾರ್ಯಕ್ರಮದ ವೇಳೆ ಪ್ರಧಾನಿ ಮೋದಿಯವರಿಗೆ ಖುದ್ದಾಗಿ ಮನವಿ ಸಲ್ಲಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ ಎಂದು ಸಚಿವ ಕೃಷ್ಣ ಬೈರೇಗೌಡ ನುಡಿದರು.

ಬಿ–ಖರಾಬು ಖಚಿತಪಡಿಸಿಕೊಂಡು ವಸತಿ ಬಡಾವಣೆ ಆಸ್ತಿಗಳಿಗೆ ಇ–ಸ್ವತ್ತು

ಬೆಂಗಳೂರು, ನ.11: ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಕಂದಾಯ ಭೂಮಿಯಲ್ಲಿ ನಿರ್ಮಾಣವಾಗಿರುವ ವಸತಿ ಬಡಾವಣೆಗಳಲ್ಲಿ ಬಿ–ಖರಾಬು ಇಲ್ಲ ಎಂಬುದನ್ನು ಖಚಿತಪಡಿಸಿಕೊಂಡು ಉಳಿದ ಆಸ್ತಿಗಳಿಗೆ ಇ–ಸ್ವತ್ತು ನೀಡುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ವಿಕಾಸಸೌಧದಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಚಿವರು, ಭೂಪರಿವರ್ತನೆ ಆಗಿರುವ ಮತ್ತು ಭೂಪರಿವರ್ತನೆ ಆಗದೇ ಇರುವ ಕಂದಾಯ ಜಮೀನುಗಳಲ್ಲಿ ನೋಂದಾಯಿತ ಕ್ರಯಪತ್ರ ಹೊಂದಿರುವ ನಿವೇಶನ ಮತ್ತು ಮನೆ ಮಾಲೀಕರಿಗೆ ಇ–ಸ್ವತ್ತು ನೀಡುವ ಕುರಿತಂತೆ ಸುದೀರ್ಘ ಸಮಾಲೋಚಿಸಿದರು.



■ ಅಧಿಕಾರಿಗಳಿಗೆ ಸಚಿವ ಈಶ್ವರ ಖಂಡ್ರೆ ಸೂಚನೆ

ಇಂತಹ ಸ್ವತ್ತುಗಳಲ್ಲಿ ಬಿ ಖರಾಬು, ಅರಣ್ಯ ಹಾಗೂ ಸರ್ಕಾರಿ ಭೂಮಿ ಇಲ್ಲ ಎಂಬುದನ್ನು ಖಚಿತಪಡಿಸಿಕೊಂಡು ಇ–ಸ್ವತ್ತು ನೀಡಲು ಕ್ರಮ ವಹಿಸುವಂತೆ ಹಾಗೂ ಬಿ ಖರಾಬು ಇರುವ ಭೂಮಿಗೆ ಸಂಬಂಧಿಸಿದಂತೆ ಸಮಸ್ಯೆ ಪರಿಹರಿಸಲು ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಲು ತಿಳಿಸಿದರು.

ಬೆಂಗಳೂರು ನಗರ ಜಿಲ್ಲಾ ಪಂಚಾಯತಿಯಲ್ಲಿ ಇ–ಸ್ವತ್ತಿಗಾಗಿ ಸಲ್ಲಿಸಿರುವ 1.30ಲಕ್ಷ ಅರ್ಜಿಗಳು ತಾಂತ್ರಿಕ ಕಾರಣಗಳಿಂದ ಇತ್ಯರ್ಥವಾಗದೆ ಬಾಕಿ ಇದ್ದು, ಇವುಗಳ ತ್ವರಿತ ವಿಲೇವಾರಿಗೆ, ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ರಾಜ್ಯದ ಒಂದು ವಿ.ವಿ.ಗೆ ಮೌಲಾನಾ ಅಬುಲ್ ಕಲಾಂ ಆಜಾದ್ ಹೆಸರು: ಸಚಿವ ಬಸವರಾಜ ರಾಯರೆಡ್ಡಿ

ಬೆಂಗಳೂರು, ನ.11: ರಾಜ್ಯದ ಯಾವುದಾದರೂ ಒಂದು ವಿಶ್ವವಿದ್ಯಾಲಯಕ್ಕೆ ಭಾರತರತ್ನ ಮೌಲಾನ ಅಬುಲ್ ಕಲಾಂ ಆಜಾದ್ ಅವರ ಹೆಸರನ್ನು ನಾಮಕರಣ ಮಾಡಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಹೇಳಿದ್ದಾರೆ.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ವತಿಯಿಂದ ಬುಧವಾರ ಆಯೋಜಿಸಿದ್ದ ಭಾರತ ರತ್ನ ಮೌಲಾನಾ ಅಬುಲ್ ಕಲಾಂ ಆಜಾದ್ ಜನ್ಮಜಯಂತಿ ಆಚರಣೆ ಹಾಗೂ ರಾಷ್ಟ್ರೀಯ ಶಿಕ್ಷಣ ದಿನ–2026 ಉದ್ಘಾಟಿಸಿ ಮಾತನಾಡಿ, ಶಿಕ್ಷಣಕ್ಕೆ ಅಪಾರ ಕೊಡುಗೆಯನ್ನು ನೀಡಿರುವ ಮೌಲಾನ ಅಬುಲ್ ಕಲಾಂ ಆಜಾದ್ ಅವರ ನೆನಪು ಸದಾ ಉಳಿಯಬೇಕು. ಹೀಗಾಗಿ, ರಾಜ್ಯದ ಯಾವುದಾದರೂ ಒಂದು ವಿಶ್ವವಿದ್ಯಾಲಯಕ್ಕೆ ಅವರ ಹೆಸರು ಇಡಲಾಗುವುದು. ಈ ಸಂಬಂಧಿಸಿದಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಚರ್ಚೆ ನಡೆಸಲಾಗುವುದು ಎಂದರು.

ಮೌಲಾನಾ ಅಬುಲ್ ಕಲಾಂ ಆಜಾದ್ ಶ್ರೇಷ್ಠ ದೇಶ ಭಕ್ತ. ಅವರನ್ನು ಒಂದು ಜಾತಿ, ಧರ್ಮಕ್ಕೆ ಸೀಮಿತಗೊಳಿಸಿದರೆ ಅದು ಮಹಾ ಪಾಪದ ಕೆಲಸ. ಇಂದು ಎಲ್ಲವೂ ಜಾತಿ, ಧರ್ಮದ ನೋಟದಲ್ಲಿ ಗುರುತಿಸುತ್ತಿರುವುದು ಬೇಸರ ಸಂಗತಿ. ಆದರೆ ಮೌಲಾನಾ ಅಬುಲ್ ಕಲಾಂ ಎಲ್ಲರಿಗೂ ಸೇರಿದ ಮಹಾನ್ ಸಾಧಕ, ನಾವು ಇಂದು ಓದುತ್ತಿರುವ ಐಐಟಿ, ವಿಶ್ವವಿದ್ಯಾಲಯಗಳು ಎಲ್ಲವೂ ಅವರ ಕನಸಿನ ಫಲ. ಒಂದು ಮಾತಿನಲ್ಲಿ ಹೇಳಬೇಕೆಂದರೆ ಅವರು ಕಟ್ಟಡಗಳನ್ನು ಕಟ್ಟಲಿಲ್ಲ, ಅವರು ಭಾರತದ ಭವಿಷ್ಯವನ್ನು ಕಟ್ಟಿದರು. ಇನ್ನೊಂದು ಮುಖ್ಯ ವಿಷಯ – ಅವರು ಹಿಂದೂ–ಮುಸ್ಲಿಂ ಏಕತೆಗೆ ಜೀವನವನ್ನೇ ಮೀಸಲಿಟ್ಟರು. ನಾವು ಮೊದಲು ಭಾರತೀಯರು ಎಂಬುದು ಅವರ ಸಂದೇಶ ಎಂದು ರಾಯರೆಡ್ಡಿ ಹೇಳಿದರು.

ಕಾರ್ಯಕ್ರಮದಲ್ಲಿ ಚಿಂತಕ ಡಾ.ಚಿರಂಜೀವಿ ಸಿಂಗ್, ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ಪುರಸ್ಕೃತೆ, ಹಿರಿಯ ಸಾಹಿತಿ ಬಾನು ಮುಷ್ತಾಕ್, ಜೈನ್ ವಿವಿಯ ಕುಲಪತಿ ಡಾ.ಚೆನ್ನರಾಜ ರಾಯಚಂದ್, ಕರ್ನಾಟಕ ಮಾಧ್ಯಮ ಅಕಾಡೆಮಿಯ ಅಧ್ಯಕ್ಷೆ ಆಯೇಶಾ ಖಾನಂ ಮತ್ತಿತರರು ಭಾಗವಹಿಸಿದ್ದರು. ಹಲವು ಗಣ್ಯರನ್ನು ಸನ್ಮಾನಿಸಿ ಗೌರವಿಸಲಾಯಿತು.



ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಲ್ಲಿ ಎಐ ಪಠ್ಯಕ್ರಮ

ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಸಚಿವ ಯು.ಟಿ.ಖಾದರ್ ಮಾತನಾಡಿ, ಈಗಿನ ಕಾಲ ಬದಲಾಗಿದೆ. ಮುಂದಿನ ಭವಿಷ್ಯ ಎಲ್ಲವನ್ನೂ ಕೃತಕ ಬುದ್ಧಿಮತ್ತೆ (ಎಐ) ಒಳಗೊಳ್ಳಲಿದೆ. ಹಾಗಾಗಿ, ರಾಜ್ಯದ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳಲ್ಲಿ ಕೃತಕ ಬುದ್ಧಿಮತ್ತೆ (ಎಐ) ಪಠ್ಯಕ್ರಮ ಜಾರಿಗೊಳಿಸಲಾಗುವುದು ಎಂದರು. ಒಂದು ರಾಷ್ಟ್ರದ ಪ್ರಮುಖ ಶಕ್ತಿ, ಸಂಪತ್ತು ಎಂದರೆ ಅದು ಶಿಕ್ಷಣ ಮಾತ್ರ. ಇಂತಹ ಶಿಕ್ಷಣ ಕ್ಷೇತ್ರಕ್ಕೆ ಭಾರತ ರತ್ನ ಮೌಲಾನಾ ಅಬುಲ್ ಕಲಾಂ ಆಜಾದ್ ಅಪಾರ ಕೊಡುಗೆ ನೀಡಿದ್ದಾರೆ.ಅವರ ಮಾರ್ಗ ದರ್ಶನದಲ್ಲಿ ಶಿಕ್ಷಣ ಕ್ರಾಂತಿಯೇ ಆಗಿದೆ ಎಂದು ಅವರು ನುಡಿದರು.

ಶಿಕ್ಷಣದ ಮಹತ್ವ ಅರಿತಿದ್ದ ಮೌಲಾನಾ ಆಜಾದ್

ವಿಧಾನ ಪರಿಷತ್ತಿನ ಸಭಾಪತಿ ಸಲೀಂ ಅಹ್ಮದ್ ಮಾತನಾಡಿ, ಆಜಾದ್ ಅವರು ಕೇವಲ ಒಬ್ಬ ನಾಯಕರಲ್ಲ, ಒಬ್ಬ ದೂರದರ್ಶಿತ್ವ ಹೊಂದಿದ್ದ ನಾಯಕ. ಒಂದು ದೇಶ ಉದ್ಧಾರವಾಗಬೇಕಾದರೆ, ಮೊದಲು ಶಿಕ್ಷಣ ಉದ್ಧಾರವಾಗಬೇಕು ಎಂಬುದನ್ನು ಅವರು ಅರಿತಿದ್ದರು. ಶಿಕ್ಷಣ ಸಚಿವರಾಗಿದ್ದಾಗ ಐಐಟಿ, ಯುಜಿಸಿ, ಸಾಹಿತ್ಯ ಅಕಾಡೆಮಿ, ಸಂಗೀತ ನಾಟಕ ಅಕಾಡೆಮಿಗಳನ್ನು ಸ್ಥಾಪಿಸಿದರು. ಅವರ ಕನಸು ಈಡೇರಿಸಬೇಕೆಂದರೆ ಯಾರು ಸಹ ಶಿಕ್ಷಣದಿಂದ ವಂಚಿತರಾಗಬಾರದು ಎಂದು ಕರೆ ನೀಡಿದರು.

ಪ್ರಣವ್ ಮುಖರ್ಜಿ ಪ್ರಧಾನಿ ಆಸೆ ಆಘಾತ ತಂದಿತ್ತು: ಸೋನಿಯಾ

ನವದೆಹಲಿ, ನ. 11: ಭಾರತೀಯ ರಾಜಕಾರಣದ ಅತ್ಯಂತ ಪ್ರಭಾವಿ ಹಾಗೂ ಸುದೀರ್ಘ ರಾಜಕೀಯ ಅನುಭವ ಹೊಂದಿದ್ದ ದಿವಂಗತ ಮಾಜಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರಿಗೆ ಪ್ರಧಾನಿಯಾಗುವ ಆಸೆಯಿತ್ತು. 2010ರಲ್ಲಿ ನಡೆದ ಮಾತುಕತೆಯೊಂದರಲ್ಲಿ ಅವರು ಮೇಲ್ಮಟ್ಟದಲ್ಲಿ ಬದಲಾವಣೆಯಾಗುವ ಅಗತ್ಯವಿದೆ ಎಂದು ಸೂಕ್ಷ್ಮವಾಗಿ ಇಂಗಿತ ವ್ಯಕ್ತಪಡಿಸಿ ನನಗೆ ಆಘಾತ ನೀಡಿದ್ದರು ಎಂದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ತಮ್ಮ ಆತ್ಮಕಥನ ಬಿಲಾಂಗಿಂಗ್: ಎ ಜರ್ನಿ ಆಫ್ ಲವ್ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಹಾರ್ಪರ್ ಕಾಲಿನ್ಸ್ ಪ್ರಕಟಿಸಿರುವ ಈ ಪುಸ್ತಕವು ನವೆಂಬರ್ 10ರಂದು ಮಾರುಕಟ್ಟೆಗೆ ಬಂದಿದ್ದು, ನವೆಂಬರ್ 16ರಂದು ಅಧಿಕೃತವಾಗಿ ಬಿಡುಗಡೆಯಾಗಲಿದೆ. ಮನಮೋಹನ್ ಸಿಂಗ್ ಸಂಪುಟದಲ್ಲಿ ಅತ್ಯಂತ ಹಿರಿಯ ಸಚಿವರಾಗಿದ್ದ ಪ್ರಣವ್ ಮುಖರ್ಜಿ ಹಾಗೂ ಅಂದಿನ ಹಣಕಾಸು ಸಚಿವ ಪಿ. ಚಿದಂಬರಂ ನಡುವೆ ಭಿನ್ನಾಭಿಪ್ರಾಯಗಳಿದ್ದವು. ಸಂಸತ್ತಿನ ಕಲಾಪಗಳ ಬಗ್ಗೆ ಚರ್ಚಿಸಲು ರಚಿಸಲಾಗಿದ್ದ



ಕಾಂಗ್ರೆಸ್ ಕಾರ್ಯತಂತ್ರ ಗುಂಪಿನ ಸಭೆಗಳ ನಂತರ ಪ್ರಣವ್ ದಾ ತಮ್ಮೊಂದಿಗೆ ಮಾತನಾಡಲು ತಂಗುತ್ತಿದ್ದರು ಎಂದು ಸೋನಿಯಾ ಗಾಂಧಿ ನೆನಪಿಸಿಕೊಂಡಿದ್ದಾರೆ.

2010ರ ಸಂದರ್ಭದಲ್ಲಿ, ತಮ್ಮ ಅಸಮಾಧಾನ ವ್ಯಕ್ತಪಡಿಸಿದ ನಂತರ ಪ್ರಣವ್ ದಾ ಮೇಲ್ಮಟ್ಟದಲ್ಲಿ ಬದಲಾವಣೆಯ ಸಮಯ ಬಂದಿದೆ ಎಂದು ಸೂಚಿಸಿದರು. ಇದು ಅವರ ಸುದೀರ್ಘ ಕಾಲದ ಪ್ರಧಾನಿ ಹುದ್ದೆಯ ಆಕಾಂಕ್ಷೆಯಾಗಿತ್ತು ಎಂಬುದು ನನಗೆ ಅರ್ಥವಾಯಿತು. ಅವರ ಆ ಮಾತು ನನಗೆ ತೀವ್ರ ಆಘಾತ ತಂದಿತ್ತು. ನಾನು ತಕ್ಷಣವೇ ಉಪಾಯವಾಗಿ ವಿಷಯವನ್ನು ಬದಲಾಯಿಸಿದೆ. ಇದರಿಂದ ಅವರಿಗೆ ನಿರಾಶೆಯಾಗಿದ್ದರೂ, ಎಂದಿಗೂ ಅದನ್ನು ನನ್ನ ಮೇಲೆ ತೋರಿಸಿಕೊಳ್ಳಲಿಲ್ಲ ಎಂದು ಸೋನಿಯಾ ಗಾಂಧಿ ಬರೆದಿದ್ದಾರೆ. 2012ರಲ್ಲಿ ಪ್ರಣವ್ ಮುಖರ್ಜಿ ರಾಷ್ಟ್ರಪತಿಯಾದ ಮೇಲೆಯೂ ತಾವು ಅವರನ್ನು ಆಗಾಗ ಭೇಟಿಯಾಗುತ್ತಿದ್ದೆ ಎಂದು ಸೋನಿಯಾ ಸ್ಮರಿಸಿದ್ದಾರೆ. ಸೋನಿಯಾ ಗಾಂಧಿ ಅವರ ಈ ಹೇಳಿಕೆಗೆ ಪ್ರಣವ್ ಮುಖರ್ಜಿ ಪುತ್ರಿ ಶರ್ಮಿಷ್ಠಾ ಮುಖರ್ಜಿ ಟ್ವಿಟರ್‌ನಲ್ಲಿ ಖಾರವಾಗಿ ಪ್ರತಿಕ್ರಿಯೆ ಕೊಟ್ಟಿದ್ದಾರೆ. ಇದರಲ್ಲಿ ಆಘಾತಪಡುವಂಥದ್ದು ಏನಿದೆ ರಾಜಕೀಯ ಮತ್ತು ಆಡಳಿತದಲ್ಲಿ ದಶಕಗಳ ಅನುಭವ, ಕಠಿಣ ಪರಿಶ್ರಮ ಮತ್ತು ಅಪಾರ ಬುದ್ಧಿಮತ್ತೆ ಹೊಂದಿದ್ದ ಒಬ್ಬ ನಾಯಕ ಪ್ರಧಾನಿಯಾಗುವ ಆಸೆ ಹೊಂದುವುದು ಅಪರಾಧವೇ ಒಮ್ಮೆ ನಾನು ಅವರಲ್ಲಿ ಪ್ರಧಾನಿಯಾಗುವ ಇಚ್ಛೆಯಿದೆಯೇ ಎಂದು ಕೇಳಿದಾಗ, ಆತ್ಮಗೌರವವಿರುವ ಯಾವುದೇ ರಾಜಕಾರಣಿಗೂ ಈ ಆಸೆ ಇದ್ದೇ ಇರುತ್ತದೆ ಎಂದು ಅವರು ನೇರವಾಗಿ ಹೇಳಿದ್ದರು, ಎಂದು ಶರ್ಮಿಷ್ಠಾ ಬರೆದುಕೊಂಡಿದ್ದಾರೆ.

ತಮ್ಮ ರಾಜಕೀಯ ಮತ್ತು ವೈಯಕ್ತಿಕ ಜೀವನದ ಹಲವು ಕುತೂಹಲಕಾರಿ ಸಂಗತಿಗಳನ್ನು ಈ ಪುಸ್ತಕದಲ್ಲಿ ಸೋನಿಯಾ ಹಂಚಿಕೊಂಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ತಮಗೆ ಯಾವುದೇ ನಿಕಟ ಸಂಬಂಧವಿಲ್ಲ. ಅಧಿಕೃತ ಕಾರ್ಯಕ್ರಮಗಳಲ್ಲಿ ಭೇಟಿಯಾದಾಗ ಸಾಮಾನ್ಯವಾಗಿ ನಮಸ್ಕರಿಸುತ್ತೇವೆಯಾದರೂ, ಮೋದಿ ಅವರು ಕಣ್ಣುಗಳಲ್ಲಿ ಕಣ್ಣಿಟ್ಟು ನೋಡುವುದನ್ನು ತಪ್ಪಿಸಿ ಬೇರೆಡೆ ನೋಡುತ್ತಾರೆ ಎಂದು ಉಲ್ಲೇಖಿಸಿದ್ದಾರೆ.

ಸಂಜಯ್ ಗಾಂಧಿ ಅವರೊಂದಿಗಿನ ಮದುವೆಯ ನಂತರ ಮನೇಕಾ ಗಾಂಧಿ ಅವರೊಂದಿಗೆ ಉಂಟಾದ ವೈಯಕ್ತಿಕ ಭಿನ್ನಾಭಿಪ್ರಾಯಗಳು ರಾಜಕೀಯಕ್ಕೂ ಹೇಗೆ ಹರಡಿದವು ಎಂಬುದನ್ನು ವಿವರಿಸಿದ್ದಾರೆ. ತುರ್ತುಸ್ಥಿತಿಯ ನಂತರ ಮೇನಕಾ ಅವರ ರಾಜಕೀಯ ಚಟುವಟಿಕೆಗಳ ಬಗ್ಗೆ ಇಂದಿರಾ ಗಾಂಧಿಯವರಿಗಿದ್ದ ಅಸಮಾಧಾನ ಮತ್ತು ಕೊನೆಗೆ ಮನೇಕಾ ಗಾಂಧಿ ಮನೆ ತೊರೆದು ಹೋದ ಘಟನೆಯನ್ನು ಪುಸ್ತಕದಲ್ಲಿ ನೆನಪಿಸಿಕೊಂಡಿದ್ದಾರೆ.

ಕೋಲ್ಕತ್ತಾ ವಿಮಾನ ನಿಲ್ದಾಣದಲ್ಲಿ ಏರ್ ಇಂಡಿಯಾ ವಿಮಾನಕ್ಕೆ ಹೈಜಾಕ್ ಬೆದರಿಕೆ

ಮುಂಬೈಗೆ ಹೊರಡಬೇಕಿದ್ದ ವಿಮಾನದಲ್ಲಿ ಬೆದರಿಕೆ ಸಂದೇಶ ಪತ್ತೆ



ಕೋಲ್ಕತ್ತಾ: ಕೋಲ್ಕತ್ತಾದಿಂದ ಮುಂಬೈಗೆ ತೆರಳಬೇಕಿದ್ದ ಏರ್ ಇಂಡಿಯಾ ವಿಮಾನದಲ್ಲಿ ಹೈಜಾಕ್ ಬೆದರಿಕೆ ಸಂದೇಶ ಪತ್ತೆಯಾಗಿದ್ದು, ಕೋಲ್ಕತ್ತಾ ವಿಮಾನ ನಿಲ್ದಾಣದಲ್ಲಿ ಆತಂಕದ ವಾತಾವರಣ ನಿರ್ಮಾಣವಾಯಿತು. ಏರ್ ಇಂಡಿಯಾದ AI 772 ವಿಮಾನ ಟೇಕ್‌ಆಫ್‌ಗೆ ಸಿದ್ಧವಾಗಿದ್ದ ಸಂದರ್ಭದಲ್ಲಿ ಈ ಘಟನೆ ನಡೆದಿದೆ. ವಿಮಾನದ ಶೌಚಾಲಯದಲ್ಲಿರುವ ಕನ್ನಡಿಯ ಮೇಲೆ ಹೈಜಾಕ್‌ಗೆ ಸಂಬಂಧಿಸಿದ ಬೆದರಿಕೆ ಸಂದೇಶ ಬರೆಯಲಾಗಿತ್ತು ಎಂದು ಪ್ರಾಥಮಿಕ ವರದಿಗಳು ತಿಳಿಸಿವೆ. ಈ ವಿಚಾರ ತಿಳಿಯುತ್ತಿದ್ದಂತೆ ವಿಮಾನದ ಪೈಲಟ್ ವಾಯು ಸಂಚಾರ ನಿಯಂತ್ರಣ ವಿಭಾಗಕ್ಕೆ (ಎಟಿಸಿ) ಹೈಜಾಕ್ ಎಚ್ಚರಿಕೆ ಸಂದೇಶ ರವಾನಿಸಿದ್ದಾರೆ. ತಕ್ಷಣ ಕಾರ್ಯಪ್ರವೃತ್ತರಾದ ಭದ್ರತಾ ಸಿಬ್ಬಂದಿ ವಿಮಾನವನ್ನು ಸಾಮಾನ್ಯ ನಿಲುಗಡೆ ಸ್ಥಳದಿಂದ ಪ್ರತ್ಯೇಕವಾಗಿ ಇರಿಸಲಾಗುವ ಐಸೋಲೇಷನ್ ಬೇ ಗೆ ಸ್ಥಳಾಂತರಿಸಿದ್ದಾರೆ. ಅಲ್ಲಿ ವಿಮಾನದ ಸಂಪೂರ್ಣ ಭದ್ರತಾ ತಪಾಸಣೆ ನಡೆಸಲು ಕ್ರಮ ಕೈಗೊಳ್ಳಲಾಗಿದೆ. ವಿಮಾನದೊಳಗಿದ್ದ ಪ್ರಯಾಣಿಕರೊಬ್ಬರಿಗೆ ಸಂಬಂಧಿಸಿದ ವಿಚಾರದಿಂದ ಈ ಎಚ್ಚರಿಕೆ ಉಂಟಾಗಿರಬಹುದು ಎಂಬ ಶಂಕೆಯೂ ವ್ಯಕ್ತವಾಗಿದೆ. ಆದರೆ, ಬೆದರಿಕೆ ಸಂದೇಶದ ಮೂಲ ಹಾಗೂ ಅದರ ಹಿಂದಿನ ಉದ್ದೇಶದ ಬಗ್ಗೆ ಅಧಿಕೃತವಾಗಿ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ.

ಶೇ.27ರಷ್ಟು ಕುಸಿದ ದೇಶದ ಜಲಾಶಯಗಳ ಮಟ್ಟ

ಜಲಾಶಯಗಳಲ್ಲಿ ಕುಸಿದ ನೀರಿನ ಮಟ್ಟ: ಕೃಷಿ, ಇಂಧನ ವಲಯಕ್ಕೆ ಆತಂಕದ ಮುನ್ಸೂಚನೆ

ನವದೆಹಲಿ, ನ. 11: ನೈರುತ್ಯ ಮುಂಗಾರಿನ ತೀವ್ರ ಅಭಾವದಿಂದಾಗಿ ದೇಶದ ಪ್ರಮುಖ ಜಲಾಶಯಗಳಲ್ಲಿ ನೀರಿನ ಸಂಗ್ರಹ ಕುಸಿದಿದ್ದು, ಇದು ಕೃಷಿ ಉತ್ಪಾದನೆ ಹಾಗೂ ಜಲವಿದ್ಯುತ್ ಉತ್ಪಾದನೆಗೆ ಭಾರಿ ಹೊಡೆತ ನೀಡಲಿದೆ. ಕಳೆದ ವರ್ಷ ಶೇ 90ಕ್ಕಿಂತ ಹೆಚ್ಚು ತುಂಬಿದ್ದ ಜಲಾಶಯಗಳು ಈ ಬಾರಿ ಮೂರನೇ ಎರಡರಷ್ಟು ಕೂಡ ಭರ್ತಿಯಾಗಿಲ್ಲ ಎಂಬುದು ಕೃಷಿ ಮತ್ತು ಇಂಧನ ವಲಯದ ಭವಿಷ್ಯದ ಸಂಕಷ್ಟಗಳನ್ನು ಮುನ್ಸೂಚಿಸುತ್ತಿದೆ. ದಶಕಗಳಲ್ಲೇ ಅತ್ಯಂತ ಶುಷ್ಕ ಮುಂಗಾರು ಋತುಗಳಲ್ಲಿ ಇದೂ ಒಂದಾಗಿದೆ.



ದೇಶಾದ್ಯಂತ ನೀರಾವರಿ ಕಾಲುವೆಗಳು, ಜಲವಿದ್ಯುತ್ ಘಟಕಗಳು ಮತ್ತು ನಗರಗಳಿಗೆ ಕುಡಿಯುವ ನೀರು ಪೂರೈಸುವ ಒಟ್ಟು 178 ಜಲಾಶಯಗಳಲ್ಲಿನ ನೀರಿನ ಮಟ್ಟವು ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 27 ರಷ್ಟು ಕುಸಿದಿದ್ದು, ಕೇವಲ 121.9 ಶತಕೋಟಿ ಕ್ಯೂಬಿಕ್ ಮೀಟರ್(12,190 ಕೋಟಿ ಘನ ಮೀಟರ್) ನೀರು ಮಾತ್ರ ಸಂಗ್ರಹವಾಗಿದೆ. ಈ ಒಣಹವೆಯು ಈಗಾಗಲೇ ಗ್ರಾಮೀಣ ಆರ್ಥಿಕತೆಯ ಮೇಲೆ ದುಷ್ಪರಿಣಾಮ ಬೀರಲಾರಂಭಿಸಿದ್ದು, 6 ರಾಜ್ಯಗಳು ಬರಗಾಲವನ್ನು ಘೋಷಿಸಿವೆ ಹಾಗೂ ಆಹಾರ ಹಣದುಬ್ಬರ ಹೆಚ್ಚಾಗುವ ಅಪಾಯವಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಎಚ್ಚರಿಕೆ ನೀಡಿದೆ. ಕೇಂದ್ರ ಜಲ ಆಯೋಗದ (ಸಿಡಬ್ಲ್ಯುಸಿ) ದತ್ತಾಂಶಗಳ ಪ್ರಕಾರ, ದಕ್ಷಿಣ ಭಾರತದ ಜಲಾಶಯಗಳ ಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಕಳೆದ ವರ್ಷ ಶೇ 89.97 ರಷ್ಟಿದ್ದ ದಕ್ಷಿಣದ ಜಲಾಶಯಗಳ ನೀರಿನ ಮಟ್ಟ ಈ ವರ್ಷ ಕೇವಲ ಶೇ 42.6 ಕ್ಕೆ ಕುಸಿದಿದೆ. ಉಳಿದಂತೆ ಉತ್ತರ ಭಾರತದಲ್ಲಿ ಶೇ 56.62% (ಕಳೆದ ವರ್ಷ 86.32%), ಪಶ್ಚಿಮದಲ್ಲಿ ಶೇ 76.17 (96.10%), ಪೂರ್ವದಲ್ಲಿ ಶೇ 75.74 (81.66%) ಹಾಗೂ ಮಧ್ಯ ಭಾರತದಲ್ಲಿ ಕೇವಲ ಶೇ 84.23 (92.01) ರಷ್ಟು ನೀರಿದೆ. ಆದರೆ, ದಕ್ಷಿಣ ಪರ್ಯಾಯ ದ್ವೀಪದಲ್ಲಿ ಈಶಾನ್ಯ ಮುಂಗಾರು ಇನ್ನೂ ಸಕ್ರಿಯವಾಗಿರುವುದು ಕೊಂಚ ಭರವಸೆ ಮೂಡಿಸಿದೆ

ಜಲಾಶಯಗಳಲ್ಲಿನ ನೀರಿನ ಕೊರತೆಯಿಂದಾಗಿ ಹಿಂಗಾರು ಬಿತ್ತನೆ ತೀವ್ರವಾಗಿ ಕುಸಿದಿದೆ. ನವೆಂಬರ್ 6 ರ ವೇಳೆಗೆ ಕೇವಲ 1. 17 ಕೋಟಿ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದ್ದು, ಇದು ಕಳೆದ ವರ್ಷದ 1.4 ಕೋಟಿ ಹೆಕ್ಟೇರ್‌ಗಿಂತ 20.5 ಲಕ್ಷ ಹೆಕ್ಟೇರ್ ಕಡಿಮೆಯಾಗಿದೆ. 2021 ರಿಂದ 2025 ರ ಅವಧಿಯಲ್ಲಿ ಹಿಂಗಾರು ಬಿತ್ತನೆಯ ಸರಾಸರಿ 7.1 ಕೋಟಿ ಹೆಕ್ಟೇರ್ ಆಗಿತ್ತು. ಕೃಷಿ ಸಚಿವಾಲಯದ ದತ್ತಾಂಶಗಳ ಪ್ರಕಾರ, ಗೋಧಿ ಬಿತ್ತನೆ 12 ರಷ್ಟು (2 ಲಕ್ಷ ಹೆಕ್ಟೇರ್), ಭತ್ತ ಶೇ 3.10 ರಷ್ಟು (673,000 ಹೆಕ್ಟೇರ್) ಹಾಗೂ ದ್ವಿದಳ ಧಾನ್ಯಗಳ ಬಿತ್ತನೆ ಶೇ 14.4 ರಷ್ಟು (30 ಲಕ್ಷ ಹೆಕ್ಟೇರ್) ಕುಸಿತ ಕಂಡಿದೆ. ವಿಶ್ವ ಹವಾಮಾನ ಸಂಸ್ಥೆ ಕೂಡ ಸೆಪ್ಟೆಂಬರ್‌ನಲ್ಲಿ ಎಚ್ಚರಿಕೆ ನೀಡಿದ್ದು, 2026 ರ ಎಲ್‌ನಿನೋ ಪ್ರಭಾವವು ಅಭೂತಪೂರ್ವವಾಗಿರಲಿದ್ದು, ಪೆಸಿಫಿಕ್ ಸಾಗರದ ತಾಪಮಾನವು 3.8°C ನಷ್ಟು ಹೆಚ್ಚಾಗಬಹುದು ಮತ್ತು ಇದರ ದುಷ್ಪರಿಣಾಮ 2027 ರವರೆಗೂ ಕಾಡಲಿದೆ ಎಂದಿದೆ.

ಕೃಷಿ ನೀತಿ ತಜ್ಞ ಹಾಗೂ ಉತ್ತರ ಪ್ರದೇಶ ಯೋಜನಾ ಆಯೋಗದ ಮಾಜಿ ಸದಸ್ಯ ಸುಧೀರ್ ಪನ್ವಾರ್ ಅವರ ಪ್ರಕಾರ, ಪಶ್ಚಿಮ ಮತ್ತು ದಕ್ಷಿಣ ಭಾರತದಲ್ಲಿ ರೈತರು ನೀರಾವರಿಗಾಗಿ ಜಲಾಶಯಗಳನ್ನೇ ನಂಬಿರುವುದರಿಂದ, ಬೆಳೆಗಳ ನಿರ್ಣಾಯಕ ಹಂತದಲ್ಲಿ ನೀರು ಸಿಗದಿದ್ದರೆ ಗೋಧಿ, ಭತ್ತ, ದ್ವಿದಳ ಧಾನ್ಯ ಮತ್ತು ಎಣ್ಣೆಕಾಳುಗಳ ಉತ್ಪಾದನೆಗೆ ಭಾರಿ ಹೊಡೆತ ಬೀಳಲಿದೆ.

ಭಾರತೀಯ ಹವಾಮಾನ ಇಲಾಖೆ ಪ್ರಕಾರ, 2026 ರ ನೈಋತ್ಯ ಮುಂಗಾರು 50 ವರ್ಷಗಳ ಸರಾಸರಿಯ ಕೇವಲ ಶೇ 87 ರಷ್ಟಿದ್ದು, ಇದು 2001 ರ ನಂತರದ 4 ನೇ ಅತಿಕಡಿಮೆ ಹಾಗೂ 1901 ರ ನಂತರದ 13 ನೇ ಅತಿಕಡಿಮೆ ಮಳೆಯಾಗಿದೆ. ಅಕ್ಟೋಬರ್‌ನಲ್ಲಿ ಶೇ.31.4 ಮಳೆ ಕೊರತೆಯಾಗಿದೆ.

ಪಟಾಕಿ ಸಿಡಿಸುವುದನ್ನು ಸಮರ್ಥಿಸಿಕೊಂಡ ಸಿಎಂ ಯೋಗಿ

ಲಖನೌ,ನ. 11:: ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪಟಾಕಿ ಸಿಡಿಸುವುದನ್ನು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಸಮರ್ಥಿಸಿಕೊಂಡಿದ್ದಾರೆ. ಪಟಾಕಿ ಸಿಡಿಸುವುದರಿಂದ ಉಂಟಾಗುವ ವಾಯುಮಾಲಿನ್ಯ ದೊಡ್ಡ ಸಮಸ್ಯೆಯಲ್ಲ. ಕೆಲವೇ ದಿನಗಳಲ್ಲಿ ಮಾಲಿನ್ಯ ಕಡಿಮೆಯಾಗಲಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಲಖನೌದಲ್ಲಿ ನಡೆದ ಸರ್ಕಾರಿ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ದೀಪಾವಳಿ ಸಂದರ್ಭದಲ್ಲಿ ಜನರು ಸಂಭ್ರಮದಿಂದ ಪಟಾಕಿ ಸಿಡಿಸಿದ್ದಾರೆ. ಇದರಿಂದ ಮಾಲಿನ್ಯ ಹೆಚ್ಚಾಗಿದೆ ಎಂದು ಕೆಲವರು ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ. ಆದರೆ ಮಾಲಿನ್ಯ ಹೆಚ್ಚಾದರೆ ಅದು ಕಡಿಮೆಯೂ ಆಗುತ್ತದೆ. ಇದಕ್ಕಾಗಿ ಹೆಚ್ಚು ಚಿಂತಿಸುವ ಅಗತ್ಯವಿಲ್ಲ ಎಂದು ಹೇಳಿದ್ದಾರೆ.

ಪಟಾಕಿ ಸಿಡಿಸುವುದರಿಂದ ಒಂದು ದಿನ ಮಾಲಿನ್ಯ ಉಂಟಾದರೆ ಅದನ್ನೇ ದೊಡ್ಡ ಸಮಸ್ಯೆಯಾಗಿ ಬಿಂಬಿಸಲಾಗುತ್ತಿದೆ. ಆದರೆ ತಮ್ಮ ಭ್ರಷ್ಟ ಕೃತ್ಯಗಳಿಂದ ಇಡೀ ವ್ಯವಸ್ಥೆಯನ್ನೇ ಕಲುಷಿತಗೊಳಿಸುವವರನ್ನು ಯಾರೂ ಪ್ರಶ್ನಿಸುವುದಿಲ್ಲ ಎಂದು ಟೀಕಿಸಿದ್ದಾರೆ. ದೀಪಾವಳಿ ಸಂದರ್ಭದಲ್ಲಿ ಪಟಾಕಿ ಸಿಡಿಸುವುದಕ್ಕೆ ಯಾವುದೇ ನಿರ್ಬಂಧ ವಿಧಿಸುವುದಿಲ್ಲ ಎಂದು ಸರ್ಕಾರ ನಿರ್ಧರಿಸಿತ್ತು. ಜನರು ಸಂಭ್ರಮದಿಂದ ಹಬ್ಬ ಆಚರಿಸಿರುವುದು ಒಳ್ಳೆಯ ಬೆಳವಣಿಗೆ. ಅಯೋಧ್ಯೆಯಲ್ಲಿ ತಾವು ಕೂಡ ಪಟಾಕಿ ಸಂಭ್ರಮದ ಭಾಗವಾಗಿದ್ದೆ ಎಂದು ಯೋಗಿ ಆದಿತ್ಯನಾಥ ತಿಳಿಸಿದ್ದಾರೆ.

ತಮಿಳುನಾಡಿನಲ್ಲಿ 74 ಲಕ್ಷ ಮತದಾರರ ಹೆಸರು ನಾಪತ್ತೆ

ಚೆನ್ನೈ, ನ. 11: ತಮಿಳುನಾಡಿನ ಮತದಾರರ ಪಟ್ಟಿಯಿಂದ 74.07 ಲಕ್ಷ ಮತದಾರರ ಹೆಸರನ್ನು ಕೈಬಿಡಲಾಗಿದೆ ಎಂದು ಇಂಡಿಪೆಂಡೆಂಟ್ ಯಂಗ್ ಸಿಟಿಜನ್ಸ್ ಕಲೆಕ್ಟಿವ್ (ಐವೈಸಿಸಿ) ಗಂಭೀರ ಆರೋಪ ಮಾಡಿದ್ದು, ಈ ಬಗ್ಗೆ ತನಿಖೆ ನಡೆಸುವಂತೆ ಒತ್ತಾಯಿಸಿದೆ. ಈ ಬೃಹತ್ ಪ್ರಮಾಣದ ಅಳಿಸುವಿಕೆಯನ್ನು ಖಂಡಿಸಿ ಹಾಗೂ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ವಿರುದ್ಧದ ರಾಷ್ಟ್ರವ್ಯಾಪಿ ಹೋರಾಟದ ಭಾಗವಾಗಿ ನವೆಂಬರ್ 26 ರಂದು ಚೆನ್ನೈನ ಅಣ್ಣಾ ಸಲೈನಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸುವುದಾಗಿ ಸಂಘಟನೆ ಘೋಷಿಸಿದೆ.

ಮಂಗಳವಾರ ಚೆನ್ನೈ ಪ್ರೆಸ್‌ಕ್ಲಬ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಪೀಪಲ್ ಅಗೇನ್ಸ್ಟ ಎಸ್‌ಐಆರ್ ರಾಷ್ಟ್ರೀಯ ವೇದಿಕೆಯ ಭಾಗವಾಗಿರುವ ಐವೈಸಿಸಿ ಈ ಹೇಳಿಕೆ ಬಿಡುಗಡೆ ಮಾಡಿದೆ. ರಾಜಕೀಯ ಅರ್ಥಶಾಸ್ತ್ರಜ್ಞ ಪರಕಾಲ ಪ್ರಭಾಕರ್, ಖ್ಯಾತ ಕರ್ನಾಟಕ ಸಂಗೀತಾ ಗಾಯಕ ಮತ್ತು ಬರಹಗಾರ ಟಿ.ಎಂ. ಕೃಷ್ಣ, ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಒಕ್ಕೂಟದ ಮಾಜಿ ಪ್ರಧಾನ ಕಾರ್ಯದರ್ಶಿ ಥಾಮಸ್ ಫ್ರಾಂಕೋ ಹಾಗೂ ಐವೈಸಿಸಿ ಸಹಸಂಚಾಲಕಿ ರಾಧಿಕಾ ಗಣೇಶ್ ಈ ಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರಾಧಿಕಾ ಗಣೇಶ್, ಎಸ್‌ಐಆರ್ ಯಾವುದೇ ಸಾಂವಿಧಾನಿಕ ಆಧಾರವಿಲ್ಲದ ಬಿಜೆಪಿ–ಆರ್‌ಎಸ್‌ಎಸ್ ಪ್ರಾಯೋಜಿತ ಯೋಜನೆಯಾಗಿದೆ ಎಂದು ಆರೋಪಿಸಿದರು.



ಇದರ ಪರಿಣಾಮವಾಗಿ ರಾಜ್ಯದ ಶೇಕಡಾ 11.5 ರಷ್ಟು, ಅಂದರೆ 74.07 ಲಕ್ಷ ಮತದಾರರ ಹೆಸರುಗಳನ್ನು ತೆಗೆದುಹಾಕಲಾಗಿದೆ. ಇದೊಂದು ಪ್ರಜಾಪ್ರಭುತ್ವದ ಬಿಕ್ಕಟ್ಟು ಎಂದು ಹೇಳಿದ ಅವರು, ಭಾರತದ ಚುನಾವಣಾ ಆಯೋಗ, ಕೇಂದ್ರ ಸರ್ಕಾರ ಮತ್ತು ತಮಿಳುನಾಡಿನ ರಾಜಕೀಯ ಪಕ್ಷಗಳು ಇದಕ್ಕೆ ಹೊಣೆಗಾರರಾಗಬೇಕು ಹಾಗೂ ಸ್ಪಷ್ಟ ಉತ್ತರ ನೀಡಬೇಕು ಎಂದು ಆಗ್ರಹಿಸಿದರು. ಇದೇ ವೇಳೆ ಮಾತನಾಡಿದ ಪರಕಾಲ ಪ್ರಭಾಕರ್, ಎಸ್‌ಐಆರ್ ಪ್ರಕ್ರಿಯೆಯನ್ನು ತಕ್ಷಣವೇ ರದ್ದುಗೊಳಿಸಬೇಕು ಮತ್ತು ಪಟ್ಟಿಯಿಂದ ಕೈಬಿಡಲಾದ ಎಲ್ಲಾ ಅರ್ಹ ಮತದಾರರ ಹೆಸರನ್ನು ಮರುಸೇರ್ಪಡೆ ಮಾಡಬೇಕು ಎಂದು ಒತ್ತಾಯಿಸಿದರು. ಎಸ್‌ಐಆರ್ ಮೂಲಕ ಸಿದ್ಧಪಡಿಸಿದ ಮತದಾರರ ಪಟ್ಟಿಗಳನ್ನು ಬಳಸಿ ನಡೆಸಲಾದ ಚುನಾವಣೆಗಳನ್ನು ಅಮಾನ್ಯಗೊಳಿಸಬೇಕು ಮತ್ತು ಮುಂಬರುವ ಚುನಾವಣೆಗಳನ್ನು 2024ರ ಮತದಾರರ ಪಟ್ಟಿಯ ಆಧಾರದ ಮೇಲೆ ನಡೆಸಬೇಕು ಎಂದು ಅವರು ಆಗ್ರಹಿಸಿದರು. ಅಲ್ಲದೆ, ಚುನಾವಣಾ ಆಯುಕ್ತರಿಗೆ ವಿನಾಯಿತಿ ನೀಡುವ 2023ರ ಕಾನೂನನ್ನು ರದ್ದುಪಡಿಸಬೇಕು ಮತ್ತು ಅವರ ನೇಮಕಾತಿ ಪ್ರಕ್ರಿಯೆಯಲ್ಲಿ ಬದಲಾವಣೆ ತರಬೇಕು ಎಂದು ಅವರು ಒತ್ತಾಯಿಸಿದರು.

ಈ ಪರಿಷ್ಕರಣಾ ಪ್ರಕ್ರಿಯೆಯು ಗೊಂದಲ ಮೂಡಿಸುವ ಮತ್ತು ಮತದಾರರನ್ನು ಹೊರಗಿಡುವ ಉದ್ದೇಶದಿಂದಲೇ ರೂಪಿತವಾಗಿದೆ ಎಂದು ಟಿ.ಎಂ. ಕೃಷ್ಣ ತೀವ್ರ ವಾಗ್ದಾಳಿ ನಡೆಸಿದರು. ಮತದಾರರ ಹೆಸರು ಸೇರ್ಪಡೆಗಿಂತ ಕೈಬಿಡುವುದರ ಕಡೆಗೇ ಹೆಚ್ಚಿನ ಗಮನಹರಿಸಲಾಗಿದೆ ಎಂದು ಅವರು ಟೀಕಿಸಿದರು. 2002ರ ಮತದಾರರ ಪಟ್ಟಿಯ ವಿವರಗಳನ್ನು ಒದಗಿಸುವಂತೆ ಕೇಳುವ ನಮೂನೆಯನ್ನು ಟೀಕಿಸಿದ ಅವರು, ಇಷ್ಟು ದಶಕಗಳ ನಂತರ ಮತಗಟ್ಟೆ ಅಥವಾ ಇತರ ವಿವರಗಳನ್ನು ನೆನಪಿಟ್ಟುಕೊಳ್ಳುವುದು ಸಾಮಾನ್ಯ ನಾಗರಿಕರಿಗೆ ಅಸಾಧ್ಯವಾದ ಬೇಡಿಕೆಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇಷ್ಟು ದೊಡ್ಡ ಮಟ್ಟದಲ್ಲಿ ಮತದಾರರ ಹೆಸರನ್ನು ಅಳಿಸಿಹಾಕಿದ್ದರೂ ರಾಜಕೀಯವಾಗಿ ಅಥವಾ ಸಾರ್ವಜನಿಕವಾಗಿ ಈ ಬಗ್ಗೆ ಸಾಕಷ್ಟು ಗಮನಹರಿಸದಿರುವ ಬಗ್ಗೆ ಟಿ.ಎಂ. ಕೃಷ್ಣ ಬೇಸರ ವ್ಯಕ್ತಪಡಿಸಿದರು. ಇದೊಂದು ರಾಜ್ಯದ ಪಾಲಿನ ಕಪ್ಪು ಚುಕ್ಕೆ ಎಂದು ಬಣ್ಣಿಸಿದ ಅವರು, ಪ್ರಜಾಪ್ರಭುತ್ವದ ಮೂಲಭೂತ ಕಾಳಜಿಯಾದ ಇಂತಹ ಗಂಭೀರ ವಿಷಯದ ಬಗ್ಗೆ ಧ್ವನಿ ಎತ್ತುವಲ್ಲಿ ರಾಜಕೀಯ ಪಕ್ಷಗಳು ವಿಫಲವಾಗಿವೆ ಎಂದು ಪ್ರಶ್ನಿಸಿದರು.

ನಿಟ್ಟೆ ವಿಶ್ವವಿದ್ಯಾಲಯದ 16ನೇ ಘಟಿಕೋತ್ಸವ ಆರ್.ತನ್ವಿಗೆ ಚಿನ್ನದ ಪದಕ



ಮುಂಬಯಿ, ನ.11: ಮಂಗಳೂರಿನ ದೇರಳಕಟ್ಟೆಯಲ್ಲಿ ನಡೆದ ನಿಟ್ಟೆ ಪರಿಗಣಿತ ವಿಶ್ವ ವಿದ್ಯಾಲಯದ 16ನೇ ಘಟಿಕೋತ್ಸವದಲ್ಲಿ ಜೈವಿಕ ವೈದ್ಯಕೀಯ ವಿಜ್ಞಾನ (ಬಯೋ ಮೆಡಿಕಲ್ ಸೈನ್ಸ್) ವಿಭಾಗದಲ್ಲಿ ಉನ್ನತ ಶೈಕ್ಷಣಿಕ ಸಾಧನೆಗಾಗಿ ಆರ್. ತನ್ವಿ ಚಿನ್ನದ ಪದಕವನ್ನು ಪಡೆದು ಕೊಂಡಿದ್ದಾರೆ. ನಿಟ್ಟೆ ಕುಲಾಧಿಪತಿ ವಿಶಾಲ್ ಹೆಗ್ಡೆ, ಚಂಡೀಗಢದ ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ| ವಿವೇಕ್ ಲಾಲ್ ನಿಟ್ಟೆ ವಿವಿಯ ಕುಲಪತಿ ಪ್ರೊ| ಎಂ. ಎಸ್. ಮೂಡಿತ್ತಾಯ, ಪ್ರೊ ಚಾನ್ಸಲರ್ ಪ್ರೊ| ಡಾ.ಎಂ. ಶಾಂತರಾಮ ಶೆಟ್ಟಿ ಮೊದಲಾದವರಿದ್ದರು. ಆರ್. ತನ್ವಿ ಹಿರಿಯ ಪತ್ರಕರ್ತ ರಾಮಕೃಷ್ಣ ಆರ್. ಮತ್ತು ಡಾ.ರೇಷ್ಮಾ ಜಿ. ಉಳ್ಳಾಲ್ ಪುತ್ರಿ.

ಲಿಲ್ಲಿ ವಿಲಿಯಂ ರೆಬೆರೋ ನಿಧನ

ಮುಂಬಯಿ, ನ.11 ಮುಂಬಯಿ ಸಾಂತಾಕ್ರೂಜ್ ನಿವಾಸಿ ಲಿಲ್ಲಿ ವಿಲಿಯಂ ರೆಬೆರೋ(87) ಕಳೆದ ಸೋಮವಾರ ನ.09 ರಂದು ನಿಧನರಾದರು.

ಮೂಲತಃ ಬೆಳ್ಮಣ್‌ನವರಾಗಿದ್ದ ಮೃತರು ದಿವಂಗತ ವಿಲಿಯಂ ರೆಬೆರೊ ಅವರ ಪತ್ನಿಯಾಗಿದ್ದು, ಮೃತರು ಅಳಿಯ ಮಹಾ ನಗರದ ಹಿರಿಯ ಉದ್ಯಮಿ ಗ್ರೆಗೊರಿ ಡಿ'ಅಲ್ಮೇಡಾ ಸೇರಿದಂತೆ ಎರಡು



ಗಂಡು, ಎರಡು ಹೆಣ್ಣು ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆಯು ನವೆಂಬರ್ 13, ಶುಕ್ರವಾರದಂದು ಮಧ್ಯಾಹ್ನ 3.30 ಗಂಟೆಯಿಂದ ಸಾಂತಾಕ್ರೂಜ್ ಪಶ್ಚಿಮದ ಸೇಕ್ರೆಡ್ ಹಾರ್ಟ್ ಚರ್ಚ್‌ನಲ್ಲಿ ಅಂತಿಮ ದರ್ಶನ, ಸಂಜೆ 4.00 ಗಂಟೆಗೆ ಪವಿತ್ರ ಬಲಿಪೂಜೆ ಬಳಿಕ ಜುಹು ತಾರಾ ರಸ್ತೆಯಲ್ಲಿರುವ ಸೇಕ್ರೆಡ್ ಹಾರ್ಟ್ ಚರ್ಚ್ ಸ್ಮಶಾನದಲ್ಲಿ ಅಂತ್ಯಸಂಸ್ಕಾರ ನೆರವೇರಲಿದೆ.

405 ದ್ವೇಷ ಪ್ರಕರಣ, 54 ಸಾವು, ಕೇವಲ 6 ಎಫ್‌ಐಆರ್: APCR ವರದಿ

ಪಟನಾ, ನ. 11: ಭಾರತವು ವಿವಿಧತೆಯಲ್ಲಿ ಏಕತೆಯನ್ನು ಸಾರುವ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ಹಾಗೂ ಶಾಂತಿಯ ಬೀಡು. ಆದರೆ, ಇತ್ತೀಚಿನ ದಿನಗಳಲ್ಲಿ ದ್ವೇಷದ ಕಿಡಿಗಳು ಮುಗ್ಧರ ಬದುಕನ್ನು ಹೇಗೆ ಸುಡುತ್ತಿವೆ ಎಂಬುದನ್ನು ಕೇಳಿದರೆ ಎಂತಹವರ ಮನಸ್ಸಾದರೂ ಒಮ್ಮೆ ಮಮ್ಮಲ ಮರುಗುತ್ತದೆ. ಹೌದು, ದೇಶದಲ್ಲಿ ದಿನೇ ದಿನೇ ಮಿತಿಮೀರುತ್ತಿರುವ ದ್ವೇಷ ಭಾಷಣಗಳು ಹಾಗೂ ದ್ವೇಷ ಅಪರಾಧಗಳ ಕುರಿತು ನಾಗರಿಕ ಹಕ್ಕುಗಳ ರಕ್ಷಣಾ ಒಕ್ಕೂಟ ನ.10ರಂದು ನವದೆಹಲಿಯಲ್ಲಿ ಬಿಡುಗಡೆ ಮಾಡಿರುವ ವರದಿಯು, ನಮ್ಮ ಸಮಾಜದ ಕರಾಳ ವಾಸ್ತವವನ್ನು ಕಣ್ಣಿಗೆ ಕಟ್ಟುವಂತೆ ಬಹಳ ಮಾರ್ಮಿಕವಾಗಿ ಬಿಚ್ಚಿಟ್ಟಿದೆ.

ಈ ವರದಿಯ ಅಂಕಿಅಂಶಗಳು ಪ್ರತಿಯೊಬ್ಬರನ್ನೂ ಬೆಚ್ಚಿಬೀಳಿಸುವಂತಿವೆ. ಕೇವಲ ಒಂಬತ್ತು ತಿಂಗಳಲ್ಲಿ, ಅಂದರೆ 2026ರ ಜನವರಿಯಿಂದ ಸೆಪ್ಟೆಂಬರ್‌ವರೆಗಿನ ಅವಧಿಯಲ್ಲಿ ದೇಶಾದ್ಯಂತ ಒಟ್ಟು 405 ದ್ವೇಷ ಪ್ರಕರಣಗಳು ನಡೆದಿವೆ ಎಂದು ಎಪಿಸಿಆರ್ ವರದಿ ಮಾಡಿದೆ. ಈ ಪ್ರಕರಣಗಳನ್ನು ವಿಂಗಡಿಸಿ ನೋಡುವುದಾದರೆ, ಇದರಲ್ಲಿ 322 ಭೌತಿಕ ದ್ವೇಷ ಅಪರಾಧಗಳಾದರೆ, 83 ಪ್ರಚೋದನಾಕಾರಿ ದ್ವೇಷ ಭಾಷಣದ ಪ್ರಕರಣಗಳಾಗಿವೆ. ಮತ್ತೊಂದು ಆಘಾತಕಾರಿ ಅಂಶವೆಂದರೆ, ಕಲುಷಿತಗೊಂಡ ಈ ದ್ವೇಷದ ವಾತಾವರಣಕ್ಕೆ ಕೇವಲ ಒಂಬತ್ತು ತಿಂಗಳಲ್ಲಿ 54 ಮುಗ್ಧ ಜೀವಗಳು ಬಲಿಯಾಗಿವೆ ಎಂಬುದು ಅತ್ಯಂತ ದುರಂತದ ಸಂಗತಿಯಾಗಿದೆ.

ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಕಾಪಾಡಬೇಕಾದ ಜವಾಬ್ದಾರಿಯುತ ಸ್ಥಾನದಲ್ಲಿರುವವರೇ ದ್ವೇಷ ಬಿತ್ತುತ್ತಿರುವುದು ಮತ್ತೊಂದು ವಿಪರ್ಯಾಸ. ವರದಿಯ ಪ್ರಕಾರ, ಈ 83 ದ್ವೇಷ ಭಾಷಣಗಳನ್ನು ಕೇವಲ 57 ಮಂದಿ ಮಾಡಿದ್ದಾರೆ. ಈ ಭಾಷಣಕಾರರ ಪಟ್ಟಿಯಲ್ಲಿ ದೇಶದ ಅತ್ಯುನ್ನತ ಹುದ್ದೆಯಲ್ಲಿರುವವರ ಹೆಸರುಗಳಿರುವುದು ಹೆಚ್ಚು ಆತಂಕಕಾರಿ. ಸ್ವತಃ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಹಾಗೂ ನಾಲ್ವರು ರಾಜ್ಯಗಳ ಮುಖ್ಯಮಂತ್ರಿಗಳಂತಹ ಜವಾಬ್ದಾರಿಯುತ ಸಾಂವಿಧಾನಿಕ ಸ್ಥಾನದಲ್ಲಿರುವ ನಾಯಕರೂ ಇಂತಹ ದ್ವೇಷದ ಭಾಷಣಗಳನ್ನು ಮಾಡಿದ್ದಾರೆ ಎಂದು ವರದಿಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಸಾರ್ವಜನಿಕ ಹುದ್ದೆಗಳಲ್ಲಿರುವವರು ಮತ್ತು ಪದೇ ಪದೇ ದ್ವೇಷ ಕಾರುವ ಭಾಷಣಕಾರರು ಅಲ್ಪಸಂಖ್ಯಾತರ ವಿರುದ್ಧ ನಿರಂತರವಾಗಿ ಹಿಂಸೆಗೆ ಪ್ರಚೋದನೆ ನೀಡುತ್ತಲೇ ಇದ್ದಾರೆ. ಇಷ್ಟೆಲ್ಲಾ ನಡೆಯುತ್ತಿದ್ದರೂ ನಮ್ಮ ಕಾನೂನು ವ್ಯವಸ್ಥೆ ಮಾತ್ರ ಕಣ್ಮುಚ್ಚಿ ಕುಳಿತಂತಿದೆ ಎಂಬುದು ತೀವ್ರ ಖೇದದ ಸಂಗತಿಯಾಗಿದೆ. ಇಡೀ ದೇಶದಲ್ಲಿ 83 ದ್ವೇಷ ಭಾಷಣಗಳು ಮೊಳಗಿದ್ದರೂ, ಪೊಲೀಸ್ ಇಲಾಖೆಯು ಕೇವಲ 6 ಪ್ರಕರಣಗಳಲ್ಲಿ ಮಾತ್ರ ಎಫ್‌ಐಆರ್ ದಾಖಲಿಸಿರುವುದು ಆಡಳಿತ ಯಂತ್ರದ ಅಸಹಾಯಕತೆ, ನಿರ್ಲಕ್ಷ್ಯ ಹಾಗೂ ಸಂಪೂರ್ಣ ವೈಫಲ್ಯವನ್ನು ಎತ್ತಿತೋರಿಸುತ್ತದೆ. ಇನ್ನು, ದ್ವೇಷ ಹರಡುವವರ ವಿರುದ್ಧ ಪೊಲೀಸರು ಕೈಗೊಂಡಿರುವ ಕಠಿಣ ಕ್ರಮಗಳ ಬಗ್ಗೆಯೂ ವರದಿಗಳ ನಡುವೆ ಸಣ್ಣ ಗೊಂದಲಗಳಿದ್ದವು. ಆದರೆ, ಈ ಬಗ್ಗೆ ಇದೀಗ ಸ್ಪಷ್ಟ ಚಿತ್ರಣ ಲಭ್ಯವಾಗಿದೆ. ಪೊಲೀಸರು ಒಂದು ಪ್ರಕರಣದಲ್ಲಿ ಮೂವರನ್ನು ಬಂಧಿಸಿರುವುದು ನಿಜ. ಆದರೆ, ಆ ಬಂಧನವು ಕೇವಲ ಮುಸ್ಲಿಂ ವಿರೋಧಿ ಗೋಡೆಬರಹಕ್ಕೆ ಸಂಬಂಧಿಸಿದ್ದೇ ಹೊರತು, ಸಾರ್ವಜನಿಕವಾಗಿ ದ್ವೇಷ ಭಾಷಣ ಮಾಡಿದ ಯಾವುದೇ ಪ್ರಭಾವಿ ರಾಜಕೀಯ ನಾಯಕರನ್ನಾಗಲಿ ಅಥವಾ ಪ್ರಮುಖ ಭಾಷಣಕಾರರನ್ನಾಗಲಿ ಈವರೆಗೆ ಬಂಧಿಸಿಲ್ಲ ಎಂಬ ಕಟು ಸತ್ಯವನ್ನು ಸ್ಪಷ್ಟಪಡಿಸಲಾಗಿದೆ. ಈ ದ್ವೇಷದ ರಾಜಕಾರಣ ಮತ್ತು ಸಾಂವಿಧಾನಿಕ ಸಂಸ್ಥೆಗಳ ಮೌನದ ಬಗ್ಗೆ ತಜ್ಞರು ಸುದೀರ್ಘವಾಗಿ ವಿಶ್ಲೇಷಿಸಿದ್ದಾರೆ. ದೇಶದ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ಈ ನಿರಂತರ ಮಾನಸಿಕ ಹಾಗೂ ಭೌತಿಕ ದೌರ್ಜನ್ಯಗಳನ್ನು ತಕ್ಷಣವೇ ತಡೆಯಬೇಕು ಎಂದು ಮಾನವ ಹಕ್ಕುಗಳ ಹೋರಾಟಗಾರರು ಮತ್ತು ಸಂಶೋಧಕರು ತೀವ್ರವಾಗಿ ಆಗ್ರಹಿಸಿದ್ದಾರೆ.

ದೆಹಲಿ, ಬಿಹಾರ, ಆಂಧ್ರದಲ್ಲಿ ಸಂಜೆ ನ್ಯಾಯಾಲಯ ಜಾರಿ

ನವದೆಹಲಿ, ನ. 11: ನ್ಯಾಯಾಲಯಗಳಲ್ಲಿ ವರ್ಷಾನುಗಟ್ಟಲೆಯಿಂದ ಬಾಕಿ ಉಳಿದಿರುವ ಲಕ್ಷಾಂತರ ಪ್ರಕರಣಗಳ ಶೀಘ್ರ ವಿಲೇವಾರಿಗಾಗಿ ಕೇಂದ್ರ ಸರ್ಕಾರವು ಮಹತ್ವದ ಹೆಜ್ಜೆಯಿಟ್ಟಿದೆ. ಇದರ ಅಂಗವಾಗಿ ದೆಹಲಿ, ಬಿಹಾರ ಹಾಗೂ ಆಂಧ್ರಪ್ರದೇಶದಲ್ಲಿ ಪ್ರಾಯೋಗಿಕ ಯೋಜನೆಯಾಗಿ ಸಂಜೆ ನ್ಯಾಯಾಲಯ (ಇವಿನಿಂಗ್ ಕೋರ್ಟ್) ಗಳನ್ನು ಆರಂಭಿಸಲು ಕೇಂದ್ರ ಸರ್ಕಾರ ಸಜ್ಜಾಗಿದೆ ಎಂದು ಕೇಂದ್ರ ಕಾನೂನು ಮತ್ತು ನ್ಯಾಯ ಖಾತೆ (ಸ್ವತಂತ್ರ ನಿರ್ವಹಣೆ) ರಾಜ್ಯ ಸಚಿವ ಅರ್ಜುನ್ ರಾಮ್ ಮೇಘವಾಲ್ ತಿಳಿಸಿದ್ದಾರೆ.

ಪತ್ರಿಕೆಗೆ ನೀಡಿದ ಸಂದರ್ಶನವೊಂದರಲ್ಲಿ ಸಚಿವರು ಸರ್ಕಾರದ ಈ ಹೊಸ ಕಾರ್ಯತಂತ್ರವನ್ನು ವಿವರಿಸಿದ್ದಾರೆ. ಉದ್ದೇಶಿತ ವ್ಯವಸ್ಥೆಯ ಅಡಿಯಲ್ಲಿ, ಪ್ರಸ್ತುತ ಹಗಲಿನ ವೇಳೆಯಲ್ಲಿ ಎಂದಿನಂತೆ ಕಾರ್ಯ ನಿರ್ವಹಿಸುತ್ತಿರುವ ನ್ಯಾಯಾಲಯಗಳೇ ತಮ್ಮ ನಿಗದಿತ ಸಮಯದ ನಂತರವೂ ಹೆಚ್ಚುವರಿಯಾಗಿ ಕೆಲವು ಗಂಟೆಗಳ ಕಾಲ ಸಂಜೆಯ ಅವಧಿಯಲ್ಲಿ ಕಾರ್ಯನಿರ್ವಹಿಸಲಿವೆ. ವಿಶೇಷವಾಗಿ ಬಾಕಿ ಉಳಿದಿರುವ ಪ್ರಕರಣಗಳ ವಿಚಾರಣೆ ನಡೆಸಿ ಅವುಗಳನ್ನು ಇತ್ಯರ್ಥಪಡಿಸುವ ಏಕೈಕ ಉದ್ದೇಶದಿಂದಲೇ ಈ ವ್ಯವಸ್ಥೆಯನ್ನು ರೂಪಿಸಲಾಗುತ್ತಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಈ ಸಂಜೆ ನ್ಯಾಯಾಲಯಗಳ ಕಲಾಪಗಳನ್ನು ಮುನ್ನಡೆಸಲು ನಿವೃತ್ತ ನ್ಯಾಯಾಧೀಶರ ಸೇವೆ ಪಡೆಯಲು ಕೇಂದ್ರ ಸರ್ಕಾರ ಯೋಜಿಸಿದೆ. ಆಯಾ ರಾಜ್ಯಗಳ ಹೈಕೋರ್ಟ್‌ಗಳ ಸಹಯೋಗದೊಂದಿಗೆ ಅತಿ ಶೀಘ್ರದಲ್ಲೇ ಈ ಪ್ರಾಯೋಗಿಕ ಯೋಜನೆಗೆ ಚಾಲನೆ ನೀಡಲಾಗುವುದು. ಈ ಮೂರು ರಾಜ್ಯಗಳಲ್ಲಿನ ಆರಂಭಿಕ ಹಂತದ ಕಾರ್ಯಕ್ಷಮತೆಯನ್ನು ಸಮಗ್ರವಾಗಿ ಮೌಲ್ಯಮಾಪನ ಮಾಡಿದ ಬಳಿಕ, ಈ ಸಂಜೆಯ ನ್ಯಾಯಾಲಯಗಳ ಮಾದರಿಯನ್ನು ದೇಶದ ಇತರ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೂ ವಿಸ್ತರಿಸುವ ಬಗ್ಗೆ ಸರ್ಕಾರ ಪರಿಶೀಲನೆ ನಡೆಸಲಿದೆ ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ.

ಸಂಜೆ ನ್ಯಾಯಾಲಯಗಳ ಆರಂಭದ ಜೊತೆಗೆ, ನ್ಯಾಯಾಲಯಗಳ ಮೇಲಿನ ಸಾಂಸ್ಥಿಕ ಹೊರೆಯನ್ನು ಕಡಿಮೆ ಮಾಡಲು ಪರ್ಯಾಯ ಕಾರ್ಯವಿಧಾನಗಳನ್ನು ಸರ್ಕಾರ ನೆಚ್ಚಿಕೊಂಡಿದೆ ಎಂಬುದನ್ನು ಸಚಿವರು ಇದೇ ವೇಳೆ ಒತ್ತಿ ಹೇಳಿದ್ದಾರೆ. ಈ ನಿಟ್ಟಿನಲ್ಲಿ ಲೋಕ ಅದಾಲತ್ ಮತ್ತು ಪರ್ಯಾಯ ವ್ಯಾಜ್ಯ ಪರಿಹಾರ ವ್ಯವಸ್ಥೆಗಳ ಮೂಲಕ ಪ್ರಕರಣಗಳನ್ನು ತ್ವರಿತವಾಗಿ ಬಗೆಹರಿಸಿ ವಿಲೇವಾರಿ ಮಾಡುವತ್ತ ಸರ್ಕಾರ ಹೆಚ್ಚಿನ ಗಮನ ಹರಿಸುತ್ತಿದೆ ಎಂದು ಅವರು ತಿಳಿಸಿದ್ದಾರೆ.

ದೇಶಾದ್ಯಂತ ವಿವಿಧ ಹಂತದ ನ್ಯಾಯಾಲಯಗಳಲ್ಲಿ ಪ್ರಕರಣಗಳು ಗುಡ್ಡದಂತೆ ಬೆಳೆಯುತ್ತಿದ್ದು, ಜನಸಾಮಾನ್ಯರಿಗೆ ಸಕಾಲದಲ್ಲಿ ನ್ಯಾಯ ದೊರಕುತ್ತಿಲ್ಲ ಎಂಬ ಕಳವಳ ಹಿಂದಿನಿಂದಲೂ ಇದೆ. ಇದೀಗ ಕೇಂದ್ರ ಸರ್ಕಾರವು ನಿವೃತ್ತ ನ್ಯಾಯಾಧೀಶರ ಮೂಲಕ ಸಂಜೆಯ ನ್ಯಾಯಾಲಯಗಳನ್ನು ಆರಂಭಿಸುತ್ತಿರುವುದು ಹಾಗೂ ಪರ್ಯಾಯ ವ್ಯಾಜ್ಯ ಪರಿಹಾರ ವ್ಯವಸ್ಥೆಗೆ ಹೆಚ್ಚಿನ ಒತ್ತು ನೀಡುತ್ತಿರುವುದು, ನ್ಯಾಯಾಂಗ ವ್ಯವಸ್ಥೆಯಲ್ಲಿನ ಪ್ರಕರಣಗಳ ದಟ್ಟಣೆಯನ್ನು ಕಡಿಮೆ ಮಾಡಿ ಜನರಿಗೆ ತ್ವರಿತ ನ್ಯಾಯ ಒದಗಿಸುವ ಭರವಸೆಯನ್ನು ಮೂಡಿಸಿದೆ.

ಯಪಿಎಸ್‌ಸಿ ಅಗ್ರಸ್ಥಾನಿ ಶ್ರೇಯಾಗೆ ರಾಜ್ಯಪಾಲರ ಅಭಿನಂದನೆ




ಬೆಂಗಳೂರು, ನ.11: ಕೇಂದ್ರ ಲೋಕಸೇವಾ ಆಯೋಗ ನಡೆಸಿದ ಪ್ರತಿಷ್ಠಿತ ರಾಷ್ಟ್ರೀಯ ರಕ್ಷಣಾ ಅಕಾಡೆಮಿ ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ ಪ್ರಥಮ ಸ್ಥಾನ ಗಳಿಸಿದ ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಭದ್ರಾವತಿಯ ವಿದ್ಯಾರ್ಥಿನಿ ಶ್ರೇಯಾ ಎನ್.ಗೌಡ ಅವರಿಗೆ ರಾಜ್ಯಪಾಲೆ ಡಾ. ಸುಧಾ ಯಾದವ್ ಅಭಿನಂದನೆ ಸಲ್ಲಿಸಿದ್ದಾರೆ.

ಎನ್‌ಡಿಎ ಪರೀಕ್ಷೆಯಲ್ಲಿ ದೇಶದ್ಯಂತದ ಅಭ್ಯರ್ಥಿಗಳ ನಡುವೆ ಪ್ರಥಮ ಸ್ಥಾನ ಗಳಿಸುವ ಮೂಲಕ ಶ್ರೇಯಾ ಅವರು ರಾಜ್ಯಕ್ಕೆ ಹೆಮ್ಮೆ ತಂದಿದ್ದಾರೆ. ಅವರ ಈ ಅಸಾಧಾರಣ ಸಾಧನೆಯು ಪರಿಶ್ರಮ, ಶಿಸ್ತು, ಆತ್ಮವಿಶ್ವಾಸ ಮತ್ತು ದೃಢಸಂಕಲ್ಪಕ್ಕೆ ಸಾಕ್ಷಿಯಾಗಿದೆ. ಒಬ್ಬ ವಿದ್ಯಾರ್ಥಿನಿಯಾಗಿ ರಾಷ್ಟ್ರಮಟ್ಟದಲ್ಲಿ ಇಂತಹ ಮಹತ್ವದ ಸಾಧನೆ ಮಾಡಿರುವುದು ನಾಡಿನ ಹೆಣ್ಣು ಮಕ್ಕಳಿಗೆಸ್ಫೂರ್ತಿದಾಯಕವಾಗಿದೆ. ವಿಶೇಷವಾಗಿ, ರಕ್ಷಣಾ ಕ್ಷೇತ್ರದಲ್ಲಿ ವೃತ್ತಿಜೀವನ ರೂಪಿಸಿಕೊಳ್ಳಲು ಬಯಸುವ ಯುವತಿಯರಿಗೆ ಶ್ರೇಯಾ ಸಾಧನೆ ಹೊಸ ಭರವಸೆ ಮತ್ತು ಪ್ರೇರಣೆ ನೀಡಲಿದೆ.ಶ್ರೇಯಾ ತಮ್ಮ ಮುಂದಿನ ಶೈಕ್ಷಣಿಕ ಹಾಗೂ ವೃತ್ತಿಜೀವನದಲ್ಲಿಯೂ ಇದೇ ರೀತಿಯ ಯಶಸ್ಸು ಸಾಧಿಸಲಿ. ದೇಶಸೇವೆಯ ಮಹತ್ತರ ಗುರಿಯನ್ನು ಸಾಕಾರಗೊಳಿಸಿ, ಭಾರತೀಯ ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸುವ ಅವರ ಕನಸು ನನಸಾಗಲಿ.

ಶ್ರೇಯಾ ಸಾಧನೆಯು ಕರ್ನಾಟಕದ ಯುವಜನತೆಗೆ ಪ್ರೇರಣೆಯಾಗಿದ್ದು ಅವರ ಉಜ್ವಲ ಭವಿಷ್ಯಕ್ಕೆ ರಾಜ್ಯಪಾಲರು ಶುಭ ಹಾರೈಸಿದ್ದಾರೆ.

ಸಚಿವ ಪ್ರಿಯಾಂಕ್ ಖರ್ಗೆಗೆ ಸಂಸದ ತೇಜಸ್ವಿ ಸೂರ್ಯ ಸವಾಲು, ಮೂರು ದಿನದ ಗಡುವು

ಗೌರಿ ಲಂಕೇಶ್, ಎಂ.ಎಂ. ಕಲಬುರಗಿ ಹತ್ಯೆಯಲ್ಲಿ ಸಂಘ ಪರಿವಾರದ ಪಾತ್ರವಿದ್ದರೆ ದಾಖಲೆ ಕೊಡಿ, ಇಲ್ಲ ರಾಜೀನಾಮೆ ನೀಡಿ



ಬೆಂಗಳೂರು, ನ.11: ಗೌರಿ ಲಂಕೇಶ್, ಪ್ರೊ. ಎಂ.ಎಂ. ಕಲ್ಬುರ್ಗಿ ಸೇರಿದಂತೆ ವಿಚಾರವಾದಿಗಳ ಹತ್ಯೆ ಪ್ರಕರಣಗಳಲ್ಲಿ ಆರ್‌ಎಸ್‌ಎಸ್ ಮತ್ತು ಸಂಘ ಪರಿವಾರಕ್ಕೆ ಸಂಬಂಧಿಸಿದವರ ಪಾತ್ರವಿದೆ ಎಂಬ ಗೃಹಸಚಿವ ಪ್ರಿಯಾಂಕ್ ಖರ್ಗೆ ಆರೋಪಕ್ಕೆ ಆಕ್ಷೇಪಿಸಿರುವ ಬಿಜೆಪಿ ಸಂಸದ ತೇಜಸ್ವಿ ಸೂರ್ಯ, ಆರೋಪಕ್ಕೆ ಸೂಕ್ತ ಸಾಕ್ಷ್ಯ ಒದಗಿಸಬೇಕು; ಸಾಧ್ಯವಾಗದಿದ್ದರೆ ಮೂರು ದಿನಗಳೊಳಗೆ ಪ್ರಿಯಾಂಕ್ ಖರ್ಗೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಸವಾಲು ಹಾಕಿದ್ದಾರೆ.

ತೇಜಸ್ವಿ, ಗೌರಿ ಲಂಕೇಶ್ ಮತ್ತು ಪ್ರೊ. ಕಲ್ಬುರ್ಗಿ ಅವರಿಗೆ ನ್ಯಾಯ ದೊರಕಿಸುವುದು ಅತ್ಯಂತ ಗಂಭೀರ ವಿಚಾರವಾಗಿದ್ದು, ರಾಜಕೀಯ ವೇದಿಕೆಗಳಲ್ಲಿ ನೀಡುವ ಆರೋಪ–ಪ್ರತ್ಯಾರೋಪಗಳಿಗಿಂತ ಪ್ರಕರಣಗಳ ನಿಷ್ಪಕ್ಷಪಾತ ತನಿಖೆ ಮುಖ್ಯ. ಕರ್ನಾಟಕದ ಗೃಹಸಚಿವರಾಗಿ ಕಾನೂನಿನ ಆಳ್ವಿಕೆಯನ್ನು ಕಾಪಾಡುವುದು ಖರ್ಗೆ ಅವರ ಜವಾಬ್ದಾರಿ. ತನಿಖೆ ಪೂರ್ಣಗೊಳ್ಳುವ ಮುನ್ನವೇ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನುವವರನ್ನು ಜೈಲಿಗೆ ಕಳುಹಿಸಲಾಗುವುದು ಎಂದು ಹೇಳುವುದು ನ್ಯಾಯಾಂಗದ ತೀರ್ಪಿನ ಮೇಲೆ ಪೂರ್ವಗ್ರಹದ ಪರಿಣಾಮ ಬೀರುವ ಸಾಧ್ಯತೆಯಿದೆ ಆಕ್ಷೇಪಿಸಿದ್ದಾರೆ. ಇದೀಗ ಪ್ರಿಯಾಂಕ್ ಖರ್ಗೆ ಅವರ ಇತ್ತೀಚಿನ ಹೇಳಿಕೆ ಮತ್ತು ಅದಕ್ಕೆ ತೇಜಸ್ವಿ ಸೂರ್ಯ ನೀಡಿರುವ ಪ್ರತಿಕ್ರಿಯೆಯಿಂದ ಈ ವಿಚಾರ ಮತ್ತೆ ರಾಜಕೀಯ ವಾಗ್ವಾದದ ಕೇಂದ್ರಕ್ಕೆ ಬಂದಿದೆ. ಒಂದು ಕಡೆ ಹತ್ಯೆ ಪ್ರಕರಣಗಳ ತನಿಖೆಯನ್ನು ಆಧರಿಸಿ ಸಂಘ ಪರಿವಾರದ ಸಂಪರ್ಕದ ಬಗ್ಗೆ ಖರ್ಗೆ ಪ್ರಶ್ನೆ ಎತ್ತಿದ್ದರೆ, ಮತ್ತೊಂದೆಡೆ ತನಿಖೆ ಪೂರ್ಣಗೊಳ್ಳುವ ಮುನ್ನವೇ ರಾಜಕೀಯ ಆರೋಪಗಳನ್ನು ಮಾಡಲಾಗುತ್ತಿದೆ ಎಂದು ಬಿಜೆಪಿ ಆರೋಪಿಸುತ್ತಿದೆ.

ಹೀಗಾಗಿ ಪ್ರಕರಣಗಳ ತನಿಖೆ ಯಾವ ಹಂತದಲ್ಲಿದೆ, ತನಿಖೆಯಿಂದ ಇದುವರೆಗೆ ಯಾವ ಸಾಕ್ಷ್ಯಗಳು ಲಭ್ಯವಾಗಿವೆ ಮತ್ತು ಆರೋಪಗಳಿಗೆ ಕಾನೂನುಬದ್ಧ ಆಧಾರವೇನು ಎಂಬುದರ ಕುರಿತು ಮುಂದಿನ ದಿನಗಳಲ್ಲಿ ಸ್ಪಷ್ಟತೆ ದೊರೆಯುವ ನಿರೀಕ್ಷೆಯಿದೆ.

ಹಾಸನ ಜಿಲ್ಲಾಧಿಕಾರಿ ಕಚೇರಿ ಅಕ್ರಮ: ಉನ್ನತ ತನಿಖೆ ನಡೆಸಲು ಜೆಡಿಎಸ್‌ನಿಂದ ಮುಖ್ಯಕಾರ್ಯದರ್ಶಿಗೆ ದೂರು




ಬೆಂಗಳೂರು, ನ.11: ಹಾಸನ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದಿದೆ ಎನ್ನಲಾದ ಕೋಟ್ಯಂತರ ರೂಪಾಯಿಗಳ ಹಣಕಾಸಿನ ವ್ಯವಹಾರ ಹಾಗೂ ಭ್ರಷ್ಟಾಚಾರದ ಗಂಭೀರ ಆರೋಪಗಳ ಕುರಿತು ಉನ್ನತ ಮಟ್ಟದ ತನಿಖೆ ನಡೆಸುವಂತೆ ಆಗ್ರಹಿಸಿ ಜೆಡಿಎಸ್ ಇಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ದೂರು ಸಲ್ಲಿಸಿದೆ.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ.ಸುರೇಶ್‌ಬಾಬು, ವಿಧಾನ ಪರಿಷತ್ತಿನ ಜೆಡಿಎಸ್ ಉಪ ನಾಯಕ ಟಿ.ಎ.ಶರವಣ ಮತ್ತು ಶಾಸಕ ಭೀಮನಗೌಡ ಬಸನಗೌಡ ಪಾಟೀಲ್ ಅವರನ್ನೊಳಗೊಂಡ ಜೆಡಿಎಸ್ ನಿಯೋಗ ವಿಧಾನಸೌಧದಲ್ಲಿ ಇಂದು ಮಧ್ಯಾಹ್ನ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರನ್ನು ಭೇಟಿ ಮಾಡಿ ದೂರು ಸಲ್ಲಿಸಿದೆ.

ಆರೋಪದ ಗಂಭೀರತೆ, ಸಾರ್ವಜನಿಕವಾಗಿ ಬಿಡುಗಡೆ ಯಾಗಿರುವ ಸಂಭಾಷಣೆಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಪಾತ್ರದ ಕುರಿತು ಉನ್ನತ ಮಟ್ಟದ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಒತ್ತಾಯಿಸಲಾಗಿದೆ.

ಸಾರ್ವಜನಿಕವಾಗಿ ಬಿಡುಗಡೆ ಯಾಗಿರುವ ವಾಟ್ಸಾಪ್ ಸಂಭಾಷಣೆಗಳ ಸ್ಕ್ರೀನ್‌ಶಾಟ್‌ಗಳಲ್ಲಿ ಹಾಸನ ಜಿಲ್ಲಾಧಿಕಾರಿ ಉಪವಿಭಾಗಾಧಿ ಕಾರಿ, ಅಪರ ಜಿಲ್ಲಾಧಿಕಾರಿ, ತಹಶೀಲ್ದಾರ್ ಹಾಗೂ ಜಿಲ್ಲಾಧಿಕಾರಿಗಳ ಆಪ್ತ ಸಹಾಯಕ ಸೇರಿದಂತೆ ವಿವಿಧ ಅಧಿಕಾರಿಗಳ ಹುದ್ದೆಗಳನ್ನು ಉಲ್ಲೇಖಿಸಿ ಕೋಟ್ಯಂತರ ರೂಪಾಯಿಗಳ ಹಣಕಾಸಿನ ವ್ಯವಹಾರ, ಹಣದ ಹಂಚಿಕೆ ಮತ್ತು ಹೊಂದಾಣಿಕೆ ಕುರಿತು ಗಂಭೀರ ಆರೋಪಗಳು ಕೇಳಿಬಂದಿವೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಮಧ್ಯವರ್ತಿಗಳ ಪಾತ್ರ, ಹಣಕಾಸಿನ ವಹಿವಾಟುಗಳ ಮೂಲ, ಬ್ಯಾಂಕ್ ಖಾತೆಗಳು, ಯುಪಿಐ ವ್ಯವಹಾರಗಳು ಹಾಗೂ ಇತರ ಹಣಕಾಸಿನ ದಾಖಲೆಗಳನ್ನು ಪರಿಶೀಲಿಸಬೇಕು. ಸಾರ್ವಜನಿಕವಾಗಿ ಬಿಡುಗಡೆಯಾಗಿರುವ ವಾಟ್ಸಾಪ್ ಸಂಭಾಷಣೆಗಳ ಸತ್ಯಾಸತ್ಯತೆಯನ್ನು ಮೂಲ ಮೊಬೈಲ್ ಸಾಧನಗಳು, ಡಿಜಿಟಲ್ ದಾಖಲೆಗಳು ಮತ್ತು ವಿಧಿವಿಜ್ಞಾನ ಪರೀಕ್ಷೆಯ ಮೂಲಕ ದೃಢಪಡಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ. ಪ್ರಕರಣವನ್ನು ಜಿಲ್ಲಾಡಳಿತದ ಆಂತರಿಕ ತನಿಖೆಗೆ ಸೀಮಿತಗೊಳಿಸದೆ, ಲೋಕಾಯುಕ್ತ ಅಥವಾ ಸಮರ್ಥ ಸ್ವತಂತ್ರ ತನಿಖಾ ಸಂಸ್ಥೆಯ ಮೂಲಕ ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಆಗ್ರಹಿಸಲಾಗಿದೆ.

ಸ್ಟಿಂಗ್ ಆಪರೇಷನ್: ಸೈಬರ್ ಕ್ರೈ ಠಾಣೆಯಲ್ಲಿ ವಿಚಾರಣೆಗೆ ಮತ್ತೆ ಹಾಜರಾದ ಕೃಪಾ ಆಳ್ವ



ಬೆಂಗಳೂರು, ನ.11: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ನಡೆದಿದೆ ಎನ್ನಲಾದ ಸ್ಟಿಂಗ್ ಆಪರೇಷನ್ ಪ್ರಕರಣಕ್ಕೆ ಸಂಬಂಧಿಸಿದಂತೆ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಮಾಜಿ ಅಧ್ಯಕ್ಷೆ ಕೃಪಾ ಆಳ್ವ ಅವರು ಬುಧವಾರ ನಗರದ ಸೈಬರ್ ಕ್ರೈಂ (ಸಿಸಿಪಿಎಸ್) ಠಾಣೆಗೆ ವಿಚಾರಣೆಗೆ ಹಾಜರಾಗಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಆಗಮಿಸುವಂತೆ ಸಿಸಿಪಿಎಸ್ ಪೊಲೀಸರು ಕೃಪಾ ಆಳ್ವ ಅವರಿಗೆ ನೋಟಿಸ್ ಜಾರಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಅವರು ವಿಚಾರಣೆಗೆ ಉಪಸ್ಥಿತರಾಗಿದ್ದು, ಬೆಂಗಳೂರಿನ ಸಿಸಿಪಿಎಸ್ ಕಚೇರಿಯಲ್ಲಿ ಅಧಿಕಾರಿಗಳು ಅವರ ವಿಚಾರಣೆ ನಡೆಸುತ್ತಿದ್ದಾರೆ. ಪ್ರಕರಣದ ತನಿಖೆಯನ್ನು ತೀವ್ರಗೊಳಿಸಿರುವ ಸಿಸಿಪಿಎಸ್ ಪೊಲೀಸರ ಎದುರು ಕೃಪಾ ಆಳ್ವ ಅವರು ಹಾಜರಾಗುತ್ತಿ ರುವುದು ಇದು ಎರಡನೇ ಬಾರಿಯಾಗಿದೆ. ಸಿದ್ದರಾಮಯ್ಯ ಅವರ ವಿರುದ್ಧದ ಸ್ಟಿಂಗ್ ಆಪರೇಷನ್ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಹಲವು ಕೋನಗಳಿಂದ ತನಿಖೆ ನಡೆಸುತ್ತಿದ್ದು, ಕೃಪಾ ಆಳ್ವ ಅವರಿಂದ ಪ್ರಮುಖ ಮಾಹಿತಿ ಹಾಗೂ ಹೇಳಿಕೆಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಈ ವಿಚಾರಣೆ ಬಳಿಕ ಪ್ರಕರಣದ ಕುರಿತು ಇನ್ನಷ್ಟು ವಿವರಗಳು ಹೊರಬೀಳುವ ಸಾಧ್ಯತೆಯಿದೆ.



ಧಾರವಾಡ ತಾಲೂಕಿನ ದೇವರಹುಬ್ಬಳ್ಳಿಯಲ್ಲಿ ಬುಧವಾರ ರೈತರು ಅಲಂಕರಿಸಿದ ಜಾನುವಾರುಗಳೊಂದಿಗೆ ದೀಪಾವಳಿಯನ್ನು ಸಂಭ್ರಮದಿಂದ ಆಚರಿಸಿದರು.

ಸುಪ್ರೀಂಕೋರ್ಟ್ ಆಶಯದಂತೆ 2027ರ ಕೇಂದ್ರದ ಜಾತಿ ಜನಗಣತಿ

ಓಬಿಸಿ ಕಾಲಂ ನಮೂದಿಸಿ ಭಾರತೀಯ ಓಬಿಸಿ ಒಕ್ಕೂಟ ಆಗ್ರಹ

OBC FEDERATION OF INDIA (R) OFI
Voice for the voice less

ಬೆಂಗಳೂರು, ನ.11: 2027ರ ಆದಿ ಭಾಗದಲ್ಲಿ ಕೇಂದ್ರ ಸರ್ಕಾರ ನಡೆಸಲಿರುವ ಜಾತಿ ಜನಗಣತಿಯಲ್ಲಿ ಹಿಂದುಳಿದ ವರ್ಗ (ಓಬಿಸಿ) ಕಾಲಂ ಸೇರಿಸಬೇಕು. ಸಮಯದಾಯದ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್ ಆಶಯವನ್ನು ಪರಿಗಣಿಸಿ ಎಸ್‌ಸಿ/ಎಸ್‌ಟಿ ಮಾದರಿಯಲ್ಲಿ ಓಬಿಸಿ ಜನಗಣತಿಗೂ ಕ್ರಮ ಕೈಗೊಳ್ಳಬೇಕು ಎಂದು ಓಬಿಸಿ ಫೆಡರೇಷನ್ ಆಫ್ ಇಂಡಿಯಾ ಆಗ್ರಹಿಸಿದೆ.

ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಫೆಡರೇಷನ್‌ನ ಸಂಚಾಲಕರಾದ ಮುಖ್ಯಮಂತ್ರಿ ಚಂದ್ರು, ಬಂಜಾರಾ ಗುರುಪೀಠ ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಕೇಂದ್ರ ಜನಗಣತಿಯಲ್ಲಿ ಪ್ರತ್ಯೇಕವಾಗಿ ಒಬಿಸಿ ಕಾಲಂ ಸೇರಿಸಲು ಕಾನೂನು ಹೋರಾಟದಲ್ಲಿ ಜಯ ಸಿಕ್ಕಿದೆ. ನಾವು ಸಲ್ಲಿಸಿದ ಅರ್ಜಿಯನ್ನು ಸುಪ್ರಿಂಕೋರ್ಟ್ ಮಾನ್ಯ ಮಾಡಿದೆ.

ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿ ಜೋಯ್ ಮಾಲ್ಯ ಬಗ್ಚಿ, ನ್ಯಾಯಮೂರ್ತಿ ವಿ. ಮೋಹನ ನೇತೃತ್ವದ ತ್ರಿಸದಸ್ಯ ಪೀಠ ಅಕ್ಟೋಬರ್ 28ರಂದು ಈ ಕುರಿತ ಅರ್ಜಿ ವಿಚಾರಣೆ ನಡೆಸಿ ಬೇಡಿಕೆಯು ಅರ್ಹತೆ ಹೊಂದಿದ್ದು, ರಿಜಿಸ್ಟ್ರಾರ್ ಜನರಲ್ ಮತ್ತು ಜನಗಣತಿ ಆಯುಕ್ತರಿಗೆ ಈ ಕುರಿತು ಮನವಿ ಸಲ್ಲಿಸುವಂತೆ ಅರ್ಜಿದಾರರಿಗೆ ಸೂಚಿಸಿದೆ. ಜೊತೆಗೆ ಈ ಮನವಿಯನ್ನು ಸಹ ಸಂಬಂಧಪಟ್ಟವರಿಗೆ ನ್ಯಾಯಪೀಠ ವರ್ಗಾಯಿಸುವುದಾಗಿ ತಿಳಿಸಿತ್ತು ಎಂದರು.

ಜನಗಣತಿ ಸಮೀಪಿಸುತ್ತಿದ್ದರೂ ಸಹ ಕೇಂದ್ರ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ದೇಶದ ವಿವಿಧೆಡೆ ಕುಗ್ರಾಡು, ಗುಡ್ಡಗಾಡು ಪ್ರದೇಶಗಳಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಹಿಂದುಳಿದ ವರ್ಗದವರು ನೆಲಸಿದ್ದಾರೆ. ಈ ಕುರಿತು ಜಾಗೃತಿ ಮೂಡಿಸಲು ಮತ್ತು ಸಾಮಾಜಿಕ ನ್ಯಾಯಕ್ಕಾಗಿ ರಾಷ್ಟ್ರೀಯ ಮಟ್ಟದಲ್ಲಿ ಒಂದು ತಿಂಗಳ ಅಭಿಯಾನ ಹಮ್ಮಿಕೊಳ್ಳಲಾಗುವುದು ಎಂದರು. ಮಹಾಲಕ್ಷ್ಮಿ ಮಹಾಸಂಸ್ಥಾನದ ಜಗದ್ಗುರು ಜ್ಞಾನಾನಂದಪುರಿ ಮಹಾಸ್ವಾಮೀಜಿ, ಕುಂಬಾರ ಗುರುಪೀಠದ ಬಸವ ಕುಂಬಾರ ಮಹಾಸ್ವಾಮೀಜಿ, ಓಬಿಸಿ ಫೆಡರೇಷನ್ ಆಫ್ ಇಂಡಿಯಾದ ಸ್ಥಾಪಕ ಅಧ್ಯಕ್ಷ ಜೆ.ಹೆಂಜಾರಪ್ಪ ಮಾತನಾಡಿದರು

ರಾಷ್ಟ್ರೀಯ ಒಬಿಸಿ ಮುಖಂಡ ನಾರಾಯಣ ತೋಸೂರು, ಪ್ರಧಾನ ಕಾರ್ಯದರ್ಶಿ ಬಿ.ಎಂ.ಪವನ್ ಸಿಂಗ್, ಮುಖಂಡರಾದ ಶಿವಪ್ಪ ಲಮಾಣಿ, ಉಮೇಶ್ ಬಾಬು, ದೇವಿಪೂತೂರಿ, ವಿಜಿಆರ್ ನಾರಗೋನಿ, ರೂಪಕುಮಾರ್, ಡಾ.ಮಹಾಲಕ್ಷ್ಮಿ, ಡಾ.ಧನಯ್ ಕುಮಾರ್, ಪ್ರಫುಲ್ಲ ಶ್ರೀನಿವಾಸ್, ಡಾ.ರವೀಂದ್ರ ನವಿಲೆ, ರಾಜೇಶ್ ರಾಂಪುರೆ, ಡಿ.ವಿ.ಹಾಲಪ್ಪ, ವೆಂಕಟೇಶ್, ನಾಗೇಶ್ ಟಿ.ಬಿ, ಸೋಮಶೇಖರ್, ರಾವುತಾರ್ ಮತ್ತಿತರರು ಉಪಸ್ಥಿತರಿದ್ದರು.

ಚಿನ್ನ, ಬೆಳ್ಳಿ ಸೇರಿ ಅಂತಾರಾಷ್ಟ್ರೀಯ ಮಟ್ಟದ 8 ಪದಕಗಳ ವಶ

ಹಾಕಿ ತಂಡದ ಮಾಜಿ ನಾಯಕ ಸೋಮಯ್ಯ ಮನೆಯಲ್ಲಿ ಕಳವು ಮಾಡಿದ್ದ ಇಬ್ಬರ ಬಂಧನ




ಬೆಂಗಳೂರು, ನ.11: ಭಾರತ ಹಾಕಿ ತಂಡದ ಮಾಜಿ ನಾಯಕ ಸೋಮಯ್ಯ ಅವರ ಮನೆಯಲ್ಲಿ ಕಳವು ಮಾಡಿದ್ದ ಇಬ್ಬರನ್ನು ಇಂದಿರಾನಗರ ಠಾಣೆ ಪೊಲೀಸರು ಬಂಧಿಸಿ ಚಿನ್ನ, ಬೆಳ್ಳಿ ಪದಕಗಳು ಸೇರಿ 8 ಅಂತರಾಷ್ಟ್ರೀಯ ಪದಕಗಳನ್ನು ವಶಪಡಿಸಿಕೊಂಡಿದ್ದಾರೆ.

ಮಾಣಿಕ್ಯ ಅಲಿಯಾಸ್ ಮಣಿಕಾಂತ (31) ಮತ್ತು ಭರತ್ (25) ಬಂಧಿತ ಆರೋಪಿಗಳು. ಮಾಣಿಕ್ಯನ ವಿರುದ್ಧ ಕರ್ನಾಟಕದಲ್ಲಿ 25 ಪ್ರಕರಣಗಳು ಮತ್ತು ತಮಿಳುನಾಡಿ ನಲ್ಲಿ ಎಂಟು ಪ್ರಕರಣಗಳು ದಾಖ ಲಾಗಿವೆ. ಈತನ ವಿರುದ್ಧ 3 ಪ್ರೋಕ್ಲೋನೇಶನ್, ಆರು ಎನ್‌ಬಿಡಬ್ಲ್ಯೂ ಹೊರಡಿಸಲಾಗಿದೆ.

ಆರೋಪಿ ಭರತ್ ವಿರುದ್ಧ 2 ಪ್ರಕರಣಗಳು ದಾಖಲಾಗಿವೆ. ಈ ಇಬ್ಬರು ಆರೋಪಿಗಳು ಬೆಂಗಳೂರು ನಗರದ ನಿವಾಸಿಗಳು.

ಬಿಎಲ್‌ಕಾವಲ್‌ನ 4ನೇ ಕ್ರಾಸ್‌ನಲ್ಲಿ ಸೋಮಯ್ಯ ಅವರು ವಾಸವಾಗಿದ್ದು, ಕುಟುಂಬ ಸಮೇತ ಕೊಡಗು ಜಿಲ್ಲೆಗೆ ಹೋಗಿದ್ದರು. ಆ ಸಂದರ್ಭದಲ್ಲಿ ಕಳ್ಳರು ಇವರ ಮನೆಯ ಮುಂಬಾಗಿಲಿನ ಬೀಗ ಹೊಡೆದು ಒಳನುಗ್ಗಿ ಅಂತರಾಷ್ಟ್ರೀಯ ಕ್ರೀಡೆಗಳಿಗೆ ಸಂಬಂಧಿಸಿದ ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕಗಳ ಜೊತೆ ಚಿನ್ನಾಭರಣಗಳನ್ನು ಮತ್ತು ಹಣ ಕಳವು ಮಾಡಿಕೊಂಡು ಪರಾರಿಯಾಗಿದ್ದರು.


ಸೋಮಯ್ಯ ಅವರ ಕುಟುಂಬ ವಾಪಸ್ಸಾದಾಗ ಮನೆಯಲ್ಲಿ ಕಳ್ಳತನವಾಗಿರುವುದು ಕಂಡು ಬಂದಿದೆ. ಈ ಬಗ್ಗೆ ಅವರು ಪೊಲೀ ಸರಿಗೆ ದೂರು ನೀಡಿದ್ದಾರೆ.

ಆರೋಪಿಗಳ ಪತ್ತೆಗಾಗಿ 65 ಮಂದಿ ಸಿಬ್ಬಂದಿ ಮತ್ತು ಅಧಿಕಾರಿಗಳನ್ನೊಳಗೊಂಡ ಎಂಟು ವಿಶೇಷ ತಂಡಗಳನ್ನು ರಚಿಸಲಾಗಿತ್ತು. ಈ ತಂಡವು ವಿವಿಧ ಆಯಾಮಗಳಲ್ಲಿ ಕಾರ್ಯಾಚರಣೆ ಕೈಗೊಂಡು ಸಿಸಿ ಟಿವಿ ದೃಶ್ಯಾವಳಿಗಳನ್ನು ಆಧರಿಸಿ ಆರೋಪಿಗಳ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿವೆ. ಖಚಿತ ಮಾಹಿತಿ ಮೇರೆಗೆ ರಾಮನಗರದ ಹಾಗಲಹಳ್ಳಿ ಕ್ರಾಸ್ ಬಳಿ ಇಬ್ಬರು ಆರೋಪಿಗಳನ್ನು ಕೃತ್ಯಕ್ಕೆ ಬಳಸಿದ್ದ ದ್ವಿಚಕ್ರ ವಾಹನ ಸಮೇತ ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ಮತ್ತೊಬ್ಬ ಸ್ನೇಹಿತನೊಂದಿಗೆ ಸೇರಿ ಕಳವು ಮಾಡಿರುವುದಾಗಿ ಬಾಯ್ಬಿಟ್ಟಿದ್ದಾರೆ.

ಆರೋಪಿಗಳನ್ನು ಠಾಣೆಯಲ್ಲಿ ಸುದೀರ್ಘ ವಿಚಾರಣೆಗೆ ಒಳಪಡಿಸಲಾಗಿ, ಕಳವು ಮಾಡಿದ್ದ ಪದಕಗಳ ಪೈಕಿ ಒಂದು ಚಿನ್ನದ ಪದಕ ಮತ್ತು 1 ಬೆಳ್ಳಿ ಪದಕಗಳನ್ನು ರಾಜಾಜಿನಗರದ ಗೋಲ್?ಡ ಕಂಪನಿಯೊಂದರಲ್ಲಿ ಮಾರಾಟ ಮಾಡಿರುವುದಾಗಿ ತಿಳಿಸಿದ್ದು, ಅದರಂತೆ ಪೊಲೀಸರು ಆ ಕಂಪನಿಯಿಂದ 2 ಪದಕಗಳನ್ನು ವಶಕ್ಕೆ ಪಡೆದಿದ್ದಾರೆ.

ಉಳಿದ ಪದಕಗಳನ್ನು ಆರೋಪಿ ಯೊಬ್ಬನ ಹೊಸಕೋಟೆಯ ಹೆಚ್ ಕ್ರಾಸ್ ಬಳಿಯ ವಾಸದ ಮನೆಯಲ್ಲಿಟ್ಟಿರುವುದಾಗಿ ತಿಳಿಸಿದ್ದು, ಅದರಂತೆ ಪೊಲೀಸರು ಅಲ್ಲಿಗೆ ತೆರಳಿ ಆರು ಪದಕಗಳು, ಒಂದು ಬೆಳ್ಳಿಯ ಕೊಡಗಿನ ಕತ್ತಿ, ಒಂದು ಕ್ಯಾಮೆರಾ, ಒಲಂಪಿಕ್ ಬ್ಯಾಗ್ ವಶಪಡಿಸಿಕೊಂಡಿದ್ದಾರೆ. ಈ ಪ್ರಕರಣದಲ್ಲಿ ತಲೆಮರೆಸಿಕೊಂಡಿರುವ ಮತ್ತೊಬ್ಬನ ಪತ್ತೆಕಾರ್ಯ ಮುಂದುವರೆದಿದ್ದು, ತನಿಖೆ ಪ್ರಗತಿಯಲ್ಲಿದೆ.

ಯುಜಿ ವೈದ್ಯಕೀಯ: ವಿಶೇಷ ಸ್ಟ್ರೇ ವೇಕೆನ್ಸಿ ಸುತ್ತಿನ ಫಲಿತಾಂಶ ಪ್ರಕಟ



ಬೆಂಗಳೂರು, ನ. 11; ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸಿದ ವಿಶೇಷ ಸ್ಟ್ರೇ ವೇಕೆನ್ಸಿ ಸುತ್ತಿನ ಸೀಟು ಹಂಚಿಕೆಯ ಅಂತಿಮ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬುಧವಾರ ಪ್ರಕಟಿಸಿದೆ.

ಸೀಟು ಹಂಚಿಕೆಯಾದವರು ನ.13ರೊಳಗೆ ಉಳಿಕೆ ಶುಲ್ಕ ಪಾವತಿಸಿ, ಸೀಟು ಖಾತರಿ ಚೀಟಿ ಡೌನ್‌ಲೋಡ್ ಮಾಡಿಕೊಂಡು ಕಾಲೇಜುಗಳಲ್ಲಿ ಪ್ರವೇಶ ಪಡೆಯಬೇಕು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಒಟ್ಟು 195 ಸೀಟು ಉಳಿದಿತ್ತು. ಇದರಲ್ಲಿ ರದ್ದುಪಡಿಸಿಕೊಂಡ ಹಾಗೂ ದಂತ ವೈದ್ಯಕೀಯದಿಂದ ವೈದ್ಯಕೀಯ ಕೋರ್ಸ್‌ಗೆ ಮೇಲ್ದರ್ಜೆಗೇರಿದ ಸೀಟುಗಳೂ ಸೇರಿವೆ. ಈ ಸುತ್ತಿನಲ್ಲಿ 148 ವೈದ್ಯಕೀಯ ಹಾಗೂ 21 ದಂತ ವೈದ್ಯಕೀಯ ಸೀಟು ಹಂಚಿಕೆಯಾಗಿವೆ. ಇನ್ನೂ 47 ವೈದ್ಯಕೀಯ ಸೀಟು ಹಂಚಿಕೆಯಾಗದೆ ಉಳಿದಿವೆ. ಇವುಗಳಲ್ಲಿ ಬೀದರ್ ಸರ್ಕಾರಿ ವೈದ್ಯಕೀಯ ಕಾಲೇಜಿನ ಒಂದು ಹಾಗೂ ಬಾಗಲಕೋಟೆ ಸರ್ಕಾರಿ ವೈದ್ಯಕೀಯ ಕಾಲೇಜಿನ 14 ಮ್ಯಾನೇಜ್‌ಮೆಂಟ್ ಸೀಟು ಕೂಡ ಸೇರಿವೆ ಎಂದು ಅವರು ವಿವರಿಸಿದ್ದಾರೆ.

ಪಿಇಎಸ್ ವೈದ್ಯಕೀಯ ಕಾಲೇಜಿನ 25 ಸೀಟು ಉಳಿದಿವೆ. ದಂತ ವೈದ್ಯಕೀಯ ಕೋರ್ಸ್ ನಲ್ಲಿ ಯಾವೊಂದೂ ಸೀಟು ಉಳಿದಿಲ್ಲ ಎಂದು ತಿಳಿಸಿದ್ದಾರೆ.

ದರ ಏರಿಕೆಗೆ ಎಲ್ಲೆಡೆ ಜನಾಕ್ರೋಶ ಪ್ರತಿಪಕ್ಷ ನಾಯಕ ಆರ್.ಅಶೋಕ್


ಬೆಂಗಳೂರು, ನ. 11; ಹಾಸನಾಂಬೆಯ ದರ್ಶನಕ್ಕೆ ಹೋದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಜನರೇ ಮಂಗಳಾರತಿ ಮಾಡಿ ಕಳುಹಿಸಿದ್ದಾರೆ. ದರ ಏರಿಕೆ ಮಾಡಿರುವುದರ ವಿರುದ್ಧ ಎಲ್ಲೆಡೆ ಜನಾಕ್ರೋಶ ವ್ಯಕ್ತವಾಗುತ್ತಿದೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ಹೇಳಿದರು. ಕಾಂಗ್ರೆಸ್ ಸರ್ಕಾರದ ಬೆಲೆ ಏರಿಕೆ ಕ್ರಮಗಳ ವಿರುದ್ಧ ಬಿಜೆಪಿಯಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಪ್ರತಿಭಟನೆಯಲ್ಲಿ ಮಾತನಾಡಿ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧಿಕಾರಕ್ಕೆ ಬಂದ ನಂತರ ಏನಾದರೂ ಉತ್ತಮ ಕೆಲಸ ಮಾಡಿದ್ದಾರಾ ಎಂದು ಜನರು ಪ್ರಶ್ನೆ ಮಾಡುತ್ತಿದ್ದಾರೆ. ಇತ್ತೀಚೆಗೆ ಹಾಸನಾಂಬೆ ದೇವಾಲಯದ ದರ್ಶನಕ್ಕೆ ಮುಖ್ಯಮಂತ್ರಿ ಹೋದಾಗ, ಜನರು ಬೆಲೆ ಏರಿಕೆ ಬಗ್ಗೆ ಪ್ರಶ್ನೆ ಮಾಡಿದ್ದರು. ಜನರು ಕಾಂಗ್ರೆಸ್ ನಾಯಕರ ಮುಂದೆಯೇ ಆಕ್ರೋಶ ಹೊರಹಾಕಿದ್ದರು. ಈಗ ದೇವರು ಕೂಡ ಡಿ.ಕೆ.ಶಿವಕುಮಾರ್‌ಗೆ ಆಶೀರ್ವಾದ ಮಾಡುತ್ತಿಲ್ಲ. ಬಿಜೆಪಿ ಅವಧಿಯಲ್ಲಿ ಕೆಆರ್‌ಎಸ್ ತುಂಬಿತ್ತು. ಈಗ ಪೂರ್ತಿ ಬರಿದಾಗಿದೆ. ತಮಿಳುನಾಡು ಸರ್ಕಾರ ಕೇಳದಿದ್ದರೂ ಕಾಂಗ್ರೆಸ್ ಸರ್ಕಾರ ನೀರು ಬಿಡುತ್ತಿದೆ. ಈಗ ಡೀಸೆಲ್ ಹಾಕಲೂ ಹಣವಿಲ್ಲ ಎಂದಿದ್ದಾರೆ. ಮುಂದೆ ನೀರು ಕೂಡ ಇರುವುದಿಲ್ಲ ಎಂದರು. ಎಲ್ಲರಿಗೂ ತೆರಿಗೆ ಹೇರಿರುವ ಸರ್ಕಾರ ಜನರ ಪಾಲಿಗೆ ಸತ್ತುಹೋಗಿದೆ. ನಾನು ಸಾರಿಗೆ ಸಚಿವನಾಗಿದ್ದಾಗ ಸಾರಿಗೆ ನಿಗಮಗಳಿಗೆ ರಾಷ್ಟ್ರೀಯ ಪ್ರಶಸ್ತಿ ಬಂದಿತ್ತು. ಹೆಚ್ಚು ಲಾಭದಲ್ಲಿತ್ತು. ಅಂತಹ ನಿಗಮಗಳನ್ನು ಕಾಂಗ್ರೆಸ್ ಸರ್ಕಾರ ನಷ್ಟದಲ್ಲಿ ಮುಳುಗಿಸಿಬಿಟ್ಟಿದೆ. ಕಬ್ಬು ಬೆಳೆಗಾರರ ಜೊತೆ ನಡೆಸಿದ ಸಭೆಯಲ್ಲಿ ಬೊಕ್ಕಸದಲ್ಲಿ ಹಣವೇ ಇಲ್ಲ ಎಂದು ಸಿಎಂ ಹೇಳಿದ್ದರು. ಮಹಿಳೆಯರಿಗೆ 2,000 ರೂ. ನೀಡುತ್ತೇವೆಂದು ಹೇಳಿ, ಈಗ ತೆರಿಗೆ ಪಾವತಿಸಿ ಎನ್ನುತ್ತಿದ್ದಾರೆ ಎಂದರು.

ಎಥೆನಾಲ್ ಮಿಶ್ರಣದ ಬಗ್ಗೆ ಅಪಪ್ರಚಾರ

ಪೆಟ್ರೋಲ್‌ನಲ್ಲಿ ಹೆಚ್ಚು ಎಥೆನಾಲ್ ಮಿಶ್ರಣ ಮಾಡಲಾಗುತ್ತಿದೆ ಎಂದು ಕಾಂಗ್ರೆಸ್ ಸಚಿವರು ಆರೋಪ ಮಾಡಿದ್ದಾರೆ. ಆದರೆ ಕಾಂಗ್ರೆಸ್‌ನವರಿಗೆ ಸ್ವಲ್ಪವೂ ಜ್ಞಾನವಿಲ್ಲ. ಪೆಟ್ರೋಲ್‌ಗಿಂತ ಎಥೆನಾಲ್‌ನ ದರ ಹೆಚ್ಚಿದೆ. ಅಮೆರಿಕ, ಇಟಲಿ ಮೊದಲಾದ ದೇಶಗಳಲ್ಲಿ 80% ಎಥೆನಾಲ್ ಮಿಶ್ರಣ ಮಾಡಲಾಗುತ್ತಿದೆ. ರೈತರಿಗೆ ಆದಾಯ ಸಿಗಲಿ ಎಂಬ ಉದ್ದೇಶದಿಂದ ಇಂತಹ ಕ್ರಮ ಜಾರಿಯಾಗಿದೆ. ಕೇಂದ್ರ ಸರ್ಕಾರ 20% ಎಥೆನಾಲ್ ಮಿಶ್ರಣ ಮಾಡಲು ಆದೇಶಿಸಿದ್ದು, ಅದರಿಂದ ರೈತರ ಆದಾಯ ಹೆಚ್ಚಿದೆ. ಅದಕ್ಕೂ ಕಾಂಗ್ರೆಸ್ ಸರ್ಕಾರ ಕಲ್ಲು ಹಾಕುತ್ತಿದೆ ಎಂದರು. ಕಾಂಗ್ರೆಸ್‌ನ ವಿರುದ್ಧ ಜನರು ಹಾಗೂ ಬಿಜೆಪಿ ಹೋರಾಟ ಮಾಡುತ್ತಿದೆ. ಜನರಿಗೆ ಬೆಲೆ ಏರಿಕೆಯ ಬಿಸಿ ತಟ್ಟಿದೆ. ಈಗ ವಿಷಯಾಂತರ ಮಾಡಲು ಕಾಂಗ್ರೆಸ್ ಸಚಿವ ರಿಜ್ವಾನ್ ಅರ್ಷದ್ ಎಥೆನಾಲ್ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ.

ಹಿಮಾಚಲ ಪ್ರದೇಶ, ತೆಲಂಗಾಣ, ಕೇರಳದಲ್ಲೂ ಎಥೆನಾಲ್ ಮಿಶ್ರಣ ಮಾಡಲಾಗುತ್ತಿದೆ. ಅಲ್ಲಿ ಇಲ್ಲದ ಸಮಸ್ಯೆ ನಮ್ಮಲ್ಲಿ ಇದೆ ಎಂದರೆ ಇವರೇ ಅಕ್ರಮವಾಗಿ ಮಿಶ್ರಣ ಮಾಡಿ ಬಿಜೆಪಿ ಮೇಲೆ ಆರೋಪ ಮಾಡುತ್ತಿದ್ದಾರೆ. ಕಾಂಗ್ರೆಸ್‌ನವರ ಪೆಟ್ರೋಲ್ ಬಂಕ್‌ಗಳಿಂದ ಸ್ಯಾಂಪಲ್‌ಗಳನ್ನು ಸಂಗ್ರಹಿಸಿ ಅದನ್ನು ಪರೀಕ್ಷೆ ಮಾಡಲಾಗಿದೆ ಎಂದರು.

ಕೇಂದ್ರ ಸರ್ಕಾರ 20% ಎಥೆನಾಲ್ ಮಿಶ್ರಣ ಮಾಡಲು ಆದೇಶಿಸಿದ್ದು, ಅದರಿಂದ ರೈತರ ಆದಾಯ ಹೆಚ್ಚಿದೆ. ಅದಕ್ಕೂ ಕಾಂಗ್ರೆಸ್ ಸರ್ಕಾರ ಕಲ್ಲು ಹಾಕುತ್ತಿದೆ. ಕಾಂಗ್ರೆಸ್‌ನ ವಿರುದ್ಧ ಜನರು ಹಾಗೂ ಬಿಜೆಪಿ ಹೋರಾಟ ಮಾಡುತ್ತಿದೆ. ಜನರಿಗೆ ಬೆಲೆ ಏರಿಕೆಯ ಬಿಸಿ ತಟ್ಟಿದೆ. ಈಗ ವಿಷಯಾಂತರ ಮಾಡಲು ಕಾಂಗ್ರೆಸ್ ಸಚಿವ ರಿಜ್ವಾನ್ ಅರ್ಷದ್ ಎಥೆನಾಲ್ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ.



ರಾಜಾಜಿನಗರ ಸರಣಿ ಹತ್ಯೆ: ಆರೋಪಿಯ ಕರಾಳಮುಖ ಮತ್ತಷ್ಟು ಬಯಲು



ಬೆಂಗಳೂರು, ನ.11: ರಾಜ್ಯವನ್ನೇ ಬೆಚ್ಚಿಬೀಳಿಸಿದ್ದ ರಾಜಾಜಿನಗರ ಹತ್ಯಾಕಾಂಡ ಪ್ರಕರಣದಲ್ಲಿ ಆರೋಪಿಯ ಕರಾಳಮುಖ ಮತ್ತಷ್ಟು ಬಯಲಾಗಿದೆ. ಕೊಲೆಯ ಬಳಿಕ ಮೃತದೇಹಗಳನ್ನು ಸಾಗಿಸಿ, ಸಾಕ್ಷಿ ನಾಶ ಮಾಡುವುದಕ್ಕೆ ಮಾಡಿದ್ದ ಪ್ಲಾನ್ ಬಗ್ಗೆ ಆತ ಬಾಯ್ಬಿಟ್ಟಿದ್ದಾನೆ. ರಸ್ತೆ ಬದಿಯಲ್ಲಿ ಬೆಡ್ಶೀಟ್ ಖರೀದಿ ಮಾಡಿದ್ದು, ಮೂಟೆ ಕಟ್ಟಿರುವುದು ಪೊಲೀಸ್ ತನಿಖೆ ವೇಳೆ ಬಹಿರಂಗವಾಗಿದೆ.

ಇತ್ತೀಚೆಗೆ ರಾಜಾಜಿನಗರದಲ್ಲಿ ನಡೆದಿದ್ದ ಏಳು ಜನರ ನರಮೇಧ ಹತ್ಯೆ ಪ್ರಕರಣದಲ್ಲಿ ಪೊಲೀಸರು ತನಿಖೆ ಮುಂದುವರಿಸಿದ್ದಾರೆ. ಹಂತಕ ಇಂದುಶೇಖರ್(52) ಸರಣಿ ಕೊಲೆ ಮಾಡಲು ಮೊದಲೇ ಸಂಚು ಮಾಡಿದ್ದ, ಅದಾದ ನಂತರ ಮೃತದೇಹಗಳನ್ನು ಸಾಗಿಸಲು ಸೆಲ್ಲೋ ಟೇಪ್, ಚೀಲ, ಹಗ್ಗ, ಕವರ್, ಹಾಕಿದ್ದ. ಇದರ ಜೊತೆಗೆ ಮತ್ತೊಂದು ಪ್ಲಾನ್ ಮಾಡಿದ್ದ. ಪತ್ನಿ ಸುನೀತಾ, ಅತ್ತೆ ರೂಪಾವತಿ ಕೊಲೆ ಬಳಿಕ ರಸ್ತೆ ಬದಿ ಮಾರಾಟ ಮಳಿಗೆಯೊಂದರಲ್ಲಿ ಬಂಡಲ್ ಬೆಡ್ಶೀಟ್ ಖರೀದಿಸಿದ್ದ. ಇದರಲ್ಲಿ ಮೂರು ಬೆಡ್‌ಶೀಟ್‌ಲ್ಲಿ ಮೃತದೇಹವನ್ನು ಕವರ್ ಮಾಡಿ, ವೇಸ್ಟ್ ಬಟ್ಟೆ ಸುತ್ತಿದ್ದ, ಒಂದೊಂದು ಮೃತದೇಹವನ್ನು ಮೂಟೆ ರೀತಿಯಲ್ಲಿ ಕಟ್ಟಿ ಕಾರಿನ ಡಿಕ್ಕಿಯಲ್ಲಿ ಹಾಕಿದ್ದ ಎಂದು ತನಿಖೆಯಲ್ಲಿ ತಿಳಿದು ಬಂದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಶಿವಕುಮಾರ್ ಮತ್ತು ಶಂಕರನ ಹತ್ಯೆ ಮಾಡಿದ ನಂತರ ಅವರ ಬಟ್ಟೆಗಳನ್ನು ಬಿಚ್ಚಿ ಅದರಿಂದಲೇ ಅವರ ಮೊಣಕಾಲು ಮತ್ತು ಕೈಗೆ ಲಗಾಮು ಹಾಕುವ ರೀತಿ ಕುಳಿತಿರುವಂತೆ ಮೂಟೆ ಕಟ್ಟಿದ್ದ. ನಳಿನಿ, ದಿವ್ಯಾ, ರೂಪಾವತಿ, ಸುನಿತಾ ಅವರ ಸೀರೆಯನ್ನು ಕೂಡ ಎಳೆದು ಕಟ್ಟಿದ್ದ. ಆದಷ್ಟು ಬೇಗ ಮೃತದೇಹಗಳಿಂದ ದುರ್ವಾಸನೆ ತಡೆಯಲು ರಾಸಾಯನಿಕ ದ್ರಾವಕ ಹಾಕಿದ್ದ. ಅಲ್ಲದೇ, ಮೃತದೇಹ ಗಳನ್ನು ಘಾಟ್ ಭಾಗದಲ್ಲಿಯೇ ಎಸೆದು ಬಂದಿದ್ದ. ಏಳು ಮೃತದೇಹಗಳಲ್ಲಿ ಮೂರು ಕೊಳೆತ ಸ್ಥಿತಿಯಲ್ಲಿ ಕಂಡು ಬಂದಿವೆ ಎಂದು ಪೊಲೀಸ್ ಮೂಲಗಳು ಮಾಹಿತಿ ನೀಡಿವೆ.

ಈಗಾಗಲೇ ಎಲ್ಲರ ಅಂತ್ಯಕ್ರಿಯೆ ನೆರವೇರಿಸಿರುವ ಕುಟುಂಬಸ್ಥರು ಶ್ರೀರಂಗಪಟ್ಟಣದಲ್ಲಿ ಅಸ್ಥಿ ವಿಸರ್ಜನೆ ಮಾಡಿ ಕಾರ್ಯ ಮುಗಿಸಿದ್ದಾರೆ. ಏಳು ಮೃತದೇಹಗಳ ಮರಣೋತ್ತರ ಪರೀಕ್ಷೆ ವರದಿ ಬಂದ ಮೇಲೆ ಯಾವ ರೀತಿ ಹತ್ಯೆ ಮಾಡಿದ್ದಾನೆ ಎಂಬುದು ಗೊತ್ತಾಗಲಿದೆ.

ಈ ಬಗ್ಗೆ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್, 7 ಜನರ ಸರಣಿ ಹತ್ಯೆ ಪ್ರಕರಣ ಸಂಬಂಧ ಆರೋಪಿಯು ವೈಯಕ್ತಿಕ ಮಾತ್ರವಲ್ಲದೆ, ಹಣಕಾಸು ವಿಚಾರಕ್ಕಾಗಿಯೂ ಕೊಲೆ ಮಾಡಿರುವುದು ತಿಳಿದುಬಂದಿದೆ. ಎಲ್ಲ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ ತನಿಖಾಧಿಕಾರಿಯಾಗಿರುವ ಉತ್ತರ ವಿಭಾಗದ ಡಿಸಿಪಿ ಬಿ.ಎಸ್.ನ್ಯಾಮಗೌಡ ಅವರು ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಲಿದ್ದಾರೆ. ಆರೋಪಿಗೆ ಶಿಕ್ಷೆ ಕೊಡಿಸುವ ಸಂಬಂಧ ಪ್ರಕರಣವನ್ನು ತ್ವರಿತಗತಿ ನ್ಯಾಯಾಲಯ ವಿಚಾರಣೆ ನಡೆಸಬೇಕು. ಹಾಗೂ ಇದಕ್ಕಾಗಿ ವಿಶೇಷ ಸರ್ಕಾರಿ ಅಭಿಯೋಜಕರನ್ನು ನಿಯೋಜಿಸುವಂತೆ ಗೃಹ ಇಲಾಖೆಗೆ ಪತ್ರ ಬರೆಯಲಾಗುವುದು ಎಂದರು.



ಚಿಕ್ಕಮಗಳೂರಿನಲ್ಲಿ ಬುಧವಾರ ನಡೆದ ಶ್ರೀದೇವೀರಮ್ಮ ಕೆಂಡೋತ್ಸವದ ನಿಮಿತ್ತ ಬೆಂಕಿಯ ಕೆಂಡ ದಾಟಿದ ಭಕ್ತರು.

ದೀಪಾವಳಿಗೆ ದಿವಾಳಿ ಸರ್ಕಾರದಿಂದ ಹಬ್ಬಕ್ಕೆ ಹಾಲು–ಬಸ್ ದರ ಏರಿಕೆ: ವಿರೋಧಿಸಿ ಬೀದಿಗಿಳಿದು ಬಿಜೆಪಿ ಪ್ರತಿಭಟನೆ

ಕಲಬುರಗಿ, ನ. 11: ಪುಕ್ಕಟೆ ಗ್ಯಾರಂಟಿಗಳನ್ನು ಘೋಷಿಸಿ ಅಧಿಕಾರ ಹಿಡಿದ ಸರ್ಕಾರ ಈಗ ಸಂಪೂರ್ಣ ದಿವಾಳಿಯಾಗಿದ್ದು, ಡಿಜೇಲ್ ಹಾಕಿ ಸಲೂ ಹಣವಿಲ್ಲವೆಂದು ಬಸ್ ಪ್ರಯಾಣದರ ಹೆಚ್ಚಳ ಮಾಡಿದ್ದು, ರೈತರಿಗೆ ಕೊಡುತ್ತೇವೆಂದು ಹಾಲಿನ ದರ ಹೆಚ್ಚಿಸುವ ಮೂಲಕ ಕೆಎಂಎಫ್ ಬಂದ್ ಮಾಡಲು ಹೊರಟಿದೆ ಎಂದು ಖಂಡಿಸಿ ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಕಾರ್ಯಕರ್ತರು ನಗರದ ಕೇಂದ್ರ ಬಸ್‌ನಿಲ್ದಾಣದ ಮುಂದೆ ಟೈರ್‌ಸುಟ್ಟು, ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಂಸದ ಡಾ. ಉಮೇಶ್ ಜಾಧವ್ ಮಾತನಾಡಿ, ಇದು ಜನಸಾಮಾನ್ಯರ ಮೇಲೆ ಬರೆ ಎಳೆಯುವ ಸರಕಾರ, ಬಸ್ ಪ್ರಯಾಣದರ ಏರಿಕೆಯ ಮೂಲಕ ಇದು ಮತ್ತೆ ಸಾಬೀತುಪಡಿಸಿದೆ. ಕೆಎಸ್‌ಆರ್‌ಟಿಸಿ 4 ವಿಭಾಗ, ಬಿಎಚಿಟಿಸಿಯ ಬಸ್ ಪ್ರಯಾಣ ದರ ಸುಮಾರು ಶೇಕಡಾ 25ರಿಂದ 30ರಷ್ಟು ಹೆಚ್ಚಾಗಿದೆ. ಇದು ದೀಪಾವಳಿಗೆ ಜನತೆಗೆ ಕಾಂಗ್ರೆಸ್ ಸರ್ಕಾರದ ಉಡುಗೊರೆ. ಮಹಿಳೆಯರಿಗೆ ಉಚಿತ ಪ್ರಯಾಣ ಎನ್ನುವ ಸರಕಾರವು ದಿವಾಳಿಯಾಗಿದೆ. ಅದನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲ. ಮಹಿಳೆಯರಿಗೆ ಉಚಿತ ಪ್ರಯಾಣ ಎಂಬ ಕಾರಣಕ್ಕೆ ಪುರುಷರ ಮೇಲೆ ದರ ಏರಿಸುವ ಬರೆ ಎಳೆದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೊನ್ನೆ ಮೊನ್ನೆಯಷ್ಟೇ ಕಾಂಗ್ರೆಸ್ ಸರ್ಕಾರ



ಹಾಲಿನ ಬೆಲೆಯನ್ನು ರೂ.8ರಷ್ಟು ಏರಿಸಿದ್ದಾಗಿ ಪ್ರಕಟಿಸಿತ್ತು. ಆದರೆ, ಆ ಬೆಲೆ ಮೊಸರಿಗೆ 14 ರೂಪಾಯಿ, ಇತರ ಹಾಲಿನ ಉತ್ಪನ್ನಗಳಿಗೆ ಇನ್ನಷ್ಟು ದುಬಾರಿ ಎನಿಸಿತ್ತು. ಹಾಲಿನ ದರ ಏರಿಸಿದರೂ ಸಬ್ಸಿಡಿ ಮೊತ್ತವನ್ನು ಈ ಸರಕಾರ ಹಾಗೇ ಉಳಿಸಿಕೊಂಡಿದೆ. 1200 ಕೋಟಿ ಹೆಚ್ಚು ಸಬ್ಸಿಡಿ ಮೊತ್ತವನ್ನು ರೈತರಿಗೆ ಕೊಡಬೇಕಿದೆ. ಇದು ರೈತರು, ಹಾಲು ಉತ್ಪಾದಕರು, ಮದ್ಯಮ ವರ್ಗದ ಜನತೆ, ಮಹಿಳೆಯರ ವಿರೋಧಿ ಮಾತ್ರವಲ್ಲ ಯುವಜನರ ವಿರೋಧಿ ಸರಕಾರ. ಬೃಷ್ಟಾಚಾರ, ಸ್ಟಿಂಗ್‌ಆಪರೇಷನ್‌ನಂಥ ವಿಚಾರ ಈ ಸರಕಾರದ ಪ್ರಥಮ ಆದ್ಯತೆ. ಬರಗಾಲದಿಂದ ರೈತರು ಹೈರಣಾಗಿದ್ದಾರೆ. ಆದರೆ, ಈ ಸರ್ಕಾರ, ಸಚಿವರು ದೆಹಲಿಯ ಹೈಕಮಾಂಡಿನ ಕರೆಗೆ ಸ್ಪಂದಿಸು ಕೆಲಸ ಮಡುತ್ತಾರೆ. ಎಸ್‌ಐಆರ್ ವಿರೋಧಿ ಹೋರಾಟಕ್ಕೆ ತಮ್ಮನ್ನು ಸೀಮಿತ ಗೊಳಿಸಿದ್ದಾರೆ ಎಂದು ಕಿಡಿಕಾರಿದರು.

ರೈತರಿಗೆ ಬರಗಾಲ ಸಂಬಂದ ಭಿಕ್ಷೆಯ ರೂಪದಲ್ಲಿ 2500 ರೂ.ಗಳು ಕೊಡುವದಾಗಿ ನೀಡಿದ ಭರವಸೆ ಕೇವಲ ಭರವಸೆಯಾಗಿದೆ. ರೈತವರ್ಗಕ್ಕೆ ಹಣ ಸಂದಾಯ ಆಗದೇ ಇರುವುದರ ಬಗ್ಗೆ ಸ್ವತಃ ಕಂದಾಯ ಸಚಿವರೇ ಬೇಸರ ವ್ಯಕ್ತಪಡಿಸಿದ್ದಾರೆ. ಸರ್ಕಾರ ದಿವಳಿಯಾಗಿದೆ ಎಂದು ಪರೋಕ್ಷವಾಗಿ ಅವರು ಒಪ್ಪಿಕೊಂಡಿದ್ದಾರೆ. ಮುಖ್ಯಮಂತ್ರಿಗಳು ಕಬ್ಬಿನ ಬೆಳಗಾರರಿಗೆ ಸಂಬಂದಪಟ್ಟಂತೆ ಸಭೆ ಮಾಡಿದ್ದರು. ಸರಕಾರದಲ್ಲಿ ಹಣ ಎಲ್ಲಿದೆ, ನನ್ನ ಜೇಬಿನಿಂದ ಹೇಗೆ ಕೊಡಲು ಸಾಧ್ಯ? ಎಂದು ಅಸಹಾಯಕತೆ ವ್ಯಕ್ತಪಡಿಸಿದ್ದೇ ಅವರ ಸಾಧನೆ. ಒಟ್ಟಾರೆ ಈ ಸರ್ಕಾರ ಒಂದು ಜೀರೋ ಬ್ಯಾಲೇನ್ಸ್ ಸರಕಾರ: ಇದು ದಿವಾಳಿ ಸರಕಾರ, ಯಾವ ವರ್ಗಕ್ಕೂ ಕೂಡ ನ್ಯಾಯವನ್ನು ಕೊಡದೇ ಇರುವ ಅಸಹಾಯಕತೆಗೆ ಈ ಸರ್ಕಾರ ಇವತ್ತು ಮುಟ್ಟಿದೆ. ಗ್ಯಾರಂಟಿ ಯೋಜನೆಗಳು ಜನರಿಗೆ ತಲುಪುತ್ತಿಲ್ಲ. ಅದರಲ್ಲೂ ಆಗಾಗ ಹಣ ನುಂಗಲಾಗುತ್ತಿದೆ. 5 ಸಾವಿರ ಕೋಟಿ ಮೊತ್ತವನ್ನು ಬಾಕಿ ಉಳಿಸಿಕೊಂಡಿದ್ದು, ಈ ಕುರಿತು ಕೇಳಿದರೆ ಸ್ಪಷ್ಟ ಉತ್ತರ ಸಿಕ್ಕಿಲ್ಲ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರವು ಬಜೆಟ್‌ನಲ್ಲಿ ಘೋಷಣೆಯಾದ ಯಾವ ಯೋಜನೆಗಳ ಕುರಿತು ಸರ್ಕಾರಿ ಆದೇಶ ಹೊಡಿಸಿಲ್ಲ. ಇಂತಹ ಒಂದು ಅಸಹಾಯಕತೆಯ ಶೂನ್ಯ ಆವರಿಸಿರುವಂತಹ ಪರಿಸ್ಥಿತಿ ಕರ್ನಾಟಕದಲ್ಲಿ ಯಾವತ್ತೂ ಕೂಡಾ ಬಂದಿರಲಿಲ್ಲ. ಈ ಸರ್ಕಾರಕ್ಕೆ ಆಡಳಿತ ನಡೆಸಲು ಬರುತ್ತಿಲ್ಲ. ಕೇವಲ ಭ್ರಷ್ಟಾಚಾರ, ಬೆಲೆ ಏರಿಕೆ, ಆಶ್ವಾಸನೆಗಳಿಗೆ ಸೀಮಿತವಾದ ಸರ್ಕಾರ ಇದಾಗಿದೆ. ಅಭಿವೃದ್ಧಿರೋಗ್ಯ ಸರ್ಕಾರದ ವಿರುದ್ಧ ಜನರು ಬಂಡೇಳುವ ದಿನ ದೂರವಿಲ್ಲ; ಆಡಳಿತ ನಡೆಸಲು ಆಗದಿದ್ದರೆ ರಾಜೀನಾಮೆ ನೀಡಿ ಇವರು ಜನಾದೇಶ ಎದುರಿಸಲಿ ಎಂದು ಒತ್ತಾಯಿಸಿದರು.

ಮಕ್ಕಳನ್ನು ಅನಾಥವಾಗಿ ಬಿಡದೆ ದತ್ತು ನೀಡಲು ಮನವಿ



ಬೀದರ ಜಿಲ್ಲೆಯ ಔರಾದ ತಾಲ್ಲೂಕಿನ ಅಶೋಕನಗರ ತಾಂಡಾದಲ್ಲಿ ರಾಷ್ಟ್ರೀಯ ದತ್ತು ಮಾಸಾಚರಣೆ ಅಂಗವಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ವತಿಯಿಂದ ಹಮ್ಮಿಕೊಂಡಿದ್ದ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಶಾರದಾ ಕಲ್ಮಲಕರ್ ಉದ್ಘಾಟಿಸಿದರು.

ಬೀದರ, ನ. 11: ಪ್ರತಿಯೊಂದು ಮಗುವಿಗೂ ಬದುಕುವ ಹಕ್ಕಿದೆ. ಅನಾಥ, ಪೋಷಕರಿಂದ ತಿರಸ್ಕರಿಸಲ್ಪಟ್ಟ ಮಕ್ಕಳನ್ನು ಅನಾಥವಾಗಿ ಬಿಡದೆ ಕಾನೂನು ಬದ್ಧವಾಗಿ ದತ್ತು ನೀಡುವ ಮೂಲಕ ಮಕ್ಕಳಿಗೆ ಸುರಕ್ಷಿತ ಭವಿಷ್ಯ ಕಲ್ಪಿಸಬೇಕು ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಶಾರದಾ ಕಲ್ಮಲಕರ್ ಹೇಳಿದರು.

ಜಿಲ್ಲೆಯ ಔರಾದ ತಾಲ್ಲೂಕಿನ ಅಶೋಕನಗರ ತಾಂಡಾದಲ್ಲಿ 'ರಾಷ್ಟ್ರೀಯ ದತ್ತು ಮಾಸಾಚರಣೆ–2026'ರ ಅಂಗವಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ವತಿಯಿಂದ ಹಮ್ಮಿಕೊಂಡಿದ್ದ ಜಾಗೃತಿ ಜಾಥಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳನ್ನು ತಿಪ್ಪೆಗುಂಡಿಗೆ ಎಸೆಯುವ ಬದಲು ಮಮತೆಯ ತೊಟ್ಟಿಲಿನಲ್ಲಿ ಇರಿಸಬೇಕು. ಪ್ರತಿ ಮಗುವನ್ನು ಕಾನೂನುಬದ್ಧವಾಗಿ ದತ್ತು ಸ್ವೀಕರಿಸುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ದತ್ತು ಮಾಸಾಚರಣೆಯ ಮುಖ್ಯ ಉದ್ದೇಶ ಎಂದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶ್ರೀನಿವಾಸ ಅವರು, ದತ್ತು ಸ್ವೀಕಾರ ಪ್ರಕ್ರಿಯೆ ಮತ್ತು ಅದರ ಕಾನೂನುಬದ್ಧ ಕ್ರಮಗಳ ಕುರಿತು ವಿವರಿಸಿದರು.

ತಾಂಡಾದ ಸೇವಾಲಾಲ್ ಮಂದಿರದಿಂದ ಸರ್ಕಾರಿ ಶಾಲೆಯವರೆಗೆ ಮಹಿಳೆಯರು ಜಾಥಾ ನಡೆಸಿ ದತ್ತು ಸ್ವೀಕಾರದ ಕುರಿತು ಜಾಗೃತಿ ಮೂಡಿಸಿದರು. ಅಂಗನವಾಡಿ ಮೇಲ್ವಿಚಾರಕಿ ಶೋಭಾ ರಾಠೋಡ್ ಅವರು ಬಂಜಾರ ಭಾಷೆಯಲ್ಲಿ ದತ್ತು ಸ್ವೀಕಾರ ಕುರಿತು ಮಾಹಿತಿ ನೀಡಿದರು.

ರೋಬೋಟಿಕ್ ತಂತ್ರಜ್ಞಾನದಿಂದ ನಿಖರವಾದ ಕೀಲು ಶಸ್ತ್ರಚಿಕಿತ್ಸೆ: ಡಾ.ವಿನಯ್‌ಕುಮಾರ

ಬೀದರ್, ನ. 11: ರೋಬೋಟಿಕ್ ತಂತ್ರಜ್ಞಾನದ ಸಹಾಯದಿಂದ ಕೀಲುಗಳ ಶಸ್ತ್ರಚಿಕಿತ್ಸೆ ಹೆಚ್ಚು ನಿಖರ ಹಾಗೂ ಯಶಸ್ವಿಯಾಗಿ ನಡೆಸಲು ಸಾಧ್ಯವಾಗಿದೆ ಎಂದು ಸಿಕಂದರಾಬಾದ್ ಯಶೋದಾ ಆಸ್ಪತ್ರೆಯ ಹಿರಿಯ ಮೂಳೆ ಶಸ್ತ್ರಚಿಕಿತ್ಸ ತಜ್ಞ ಡಾ. ವಿನಯ್‌ಕುಮಾರ ಹಂಪಣ್ಣ ತಿಳಿಸಿದರು.

ಮೊಣಕಾಲು, ಸೊಂಟ ಹಾಗೂ ಭುಜದ ಕೀಲುಗಳ ಸವೆತ ಮತ್ತು ಹಾನಿಗೆ ಒಳಗಾದ ರೋಗಿಗಳಿಗೆ ಆಧುನಿಕ ತಂತ್ರಜ್ಞಾನದ ಮೂಲಕ ಪರಿಣಾಮಕಾರಿ ಚಿಕಿತ್ಸೆ ನೀಡಲಾಗುತ್ತಿದೆ. ರೋಬೋಟಿಕ್ ನೆರವಿನ ಶಸ್ತ್ರಚಿಕಿತ್ಸೆಯಲ್ಲಿ ರೋಗಿಯ ಮೂಳೆಯ ರಚನೆ ಹಾಗೂ ಅಳತೆಗೆ ಅನುಗುಣವಾಗಿ ಕೃತಕ ಕೀಲನ್ನು ನಿಖರವಾಗಿ ಅಳವಡಿಸಲು ಸಾಧ್ಯವಾಗುತ್ತದೆ ಎಂದು ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

ಈ ಶಸ್ತ್ರಚಿಕಿತ್ಸೆಯಿಂದ ರೋಗಿಗಳು ಶೀಘ್ರ ಚೇತರಿಸಿಕೊಳ್ಳಲು ನೆರವಾಗುತ್ತಿದೆ. ಸಾಂಪ್ರದಾಯಿಕ ಶಸ್ತ್ರಚಿಕಿತ್ಸೆಗೆ ಹೋಲಿಸಿದರೆ ರೋಬೋಟಿಕ್ ತಂತ್ರಜ್ಞಾನದ ಶಸ್ತ್ರಚಿಕಿತ್ಸೆ ನಿಖರತೆ ಹೆಚ್ಚಿಸುತ್ತದೆ' ಎಂದು ತಿಳಿಸಿದರು.

ಕ್ರೀಡಾ ಪಟುಗಳು ಹಾಗೂ ಆಟೋಟಗಳಲ್ಲಿ ತೊಡಗಿಸಿಕೊಂಡವರು ಮಂಡಿಯ ಲಿಗಮೆಂಟ್ ಹರಿದು ಹೋಗುವುದು ಹಾಗೂ ಕೀಲುಗಳಿಗೆ ಗಾಯವಾಗುವುದು ಸಾಮಾನ್ಯ. ಇಂತಹ ಸಮಸ್ಯೆಗಳಿಗೆ ಕೀಲು ಬದಲಾವಣೆ ಮಾಡುವ ಅಗತ್ಯವಿಲ್ಲದ ಸಂದರ್ಭಗಳಲ್ಲಿ ಕೀ ಹೋಲ್ (ಆರ್ಥ್ರೋಸ್ಕೊಪಿ) ಶಸ್ತ್ರಚಿಕಿತ್ಸೆ ಮೂಲಕ ಚಿಕಿತ್ಸೆ ನೀಡಬಹುದು. ಸಣ್ಣ ರಂಧ್ರದ ಮೂಲಕ ಕ್ಯಾಮೆರಾ ಅಳವಡಿಸಿ ಹಾನಿಗೊಳಗಾದ ಅಂಗಾಂಶಗಳನ್ನು ದುರಸ್ತಿಗೊಳಿಸಲಾಗುತ್ತದೆ. ಸೂಕ್ತ ಚಿಕಿತ್ಸೆ ಮತ್ತು ಪುನರ್ವಸತಿ ಮೂಲಕ ಕ್ರೀಡಾಪಟುಗಳು ಮತ್ತೆ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಬೀದರ್ ಜಿಲ್ಲೆಯ ರೋಗಿಗಳಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಯಶೋದಾ ಆಸ್ಪತ್ರೆಯ ತಜ್ಞ ವೈದ್ಯರು ಸ್ಥಳೀಯ ವೈದ್ಯರ ಸಹಯೋಗದೊಂದಿಗೆ ಪ್ರತಿ ತಿಂಗಳು ನಗರಕ್ಕೆ ಭೇಟಿ ನೀಡಿ ತಪಾಸಣೆ ನಡೆಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಬೀದರ್‌ನಲ್ಲಿ ಯಶೋದಾ ಆಸ್ಪತ್ರೆಯ



ಹೊರರೋಗಿ ಚಿಕಿತ್ಸಾ ಕೇಂದ್ರ (ಔಟ್‌ರೀಚ್ ಕ್ಲಿನಿಕ್) ಆರಂಭಿಸುವ ಯೋಜನೆಯಿದೆ ಎಂದು ಭವಿಷ್ಯದ ಯೋಜನೆ ಹಂಚಿಕೊಂಡರು.

ಕೇಂದ್ರ ಆರಂಭವಾದರೆ ಜಿಲ್ಲೆಯ ರೋಗಿಗಳು ತಜ್ಞ ವೈದ್ಯರ ಸಲಹೆ ಹಾಗೂ ಪ್ರಾಥಮಿಕ ತಪಾಸಣೆಗಾಗಿ ಹೈದರಾಬಾದ್‌ಗೆ ತೆರಳುವ ಅಗತ್ಯ ಇರುವುದಿಲ್ಲ. ಶಸ್ತ್ರಚಿಕಿತ್ಸೆ ಅಗತ್ಯವಿರುವ ರೋಗಿಗಳು ಹೆಚ್ಚಿನ ಚಿಕಿತ್ಸೆಗಾಗಿ ಯಶೋದಾ ಆಸ್ಪತ್ರೆಗೆ ಹೋಗಬಹುದು. ಆಧುನಿಕ ಚಿಕಿತ್ಸಾ ಸೌಲಭ್ಯಗಳನ್ನು ಬೀದರ್ ಜಿಲ್ಲೆಯ ಜನರಿಗೆ ತಲುಪಿಸುವುದು ನಮ್ಮ ಉದ್ದೇಶ ಎಂದರು.

ಕರಾವಳಿ ಪ್ರದೇಶದಲ್ಲಿ ಕಾಣುವ ವಿಶಿಷ್ಟ ಸಂಪ್ರದಾಯ

ಸಮರ ಕಲೆಯನ್ನು ಪ್ರದರ್ಶಿಸುವ ಕ್ಷತ್ರಿಯ ಕೋಮಾರಪಂಥರ ಹೊಂಡೆ ಹಬ್ಬ

ಅಂಕೋಲಾ, ನ. 11:ಸಮರ ಕಲೆಯನ್ನು ಪ್ರದರ್ಶಿಸುವ ಹೊಂಡೆ ಹಬ್ಬಕ್ಕೆ ನೆರೆದ ಸಹಸ್ರಾರು ಜನರು ಸಾಕ್ಷೀಯಾದರು. ಕ್ಷಾತ್ರ ತೇಜಸ್ಸಿನೊಂದಿಗೆ ಕದನಕ್ಕಿಳಿದಿದ್ದ ಎರಡು ಪಡೆಗಳಿಗೆ ಕವಣೆಯೇ ಯುದ್ಧ ಸಾಧನ. ಕವಣೆಗೆ ಸಿಕ್ಕಿಸುವ ಹಿಂಡ್ಲಿಕಾಯಿಯೇ, ಸೆಣಸಾಡುವ ಶೂರರಿಗೆ ಪ್ರಧಾನ ಅಸ್ತ್ರ. ಹೀಗಾಗಿ ದೀಪಾವಳಿ ಬಂತೆಂದರೆ ಕಾತರದ ಕಣ್ಣುಗಳು ಹಬ್ಬದ ಮೇಲೆ ಕೇಂದ್ರಿಕೃತವಾಗಿರುತ್ತದೆ. ಅನಾದಿಕಾಲದಿಂದಲೂ ಆಚರಿಸಲ್ಪಡುವ ಹೊಂಡೆಯಾಟ ಇಂದಿಗೂ ತನ್ನ ವೈಭವವನ್ನು ಉಳಿಸಿಕೊಂಡಿದೆ.



ಕವಣೆಯಿಂದ ಸೀಳಿ ಬರುವ ಹಿಂಡ್ಲೆಕಾಯಿ: ಕ್ಷತ್ರೀಯತ್ವದ ಸಂಕೇತವಾಗಿರುವ ಹೊಂಡೆಯ ಹಣಾಹಣಿಗಾಗಿ ವಾರಗಟ್ಟಲೆ ಮೊದಲೇ ತಯಾರಿಯಲ್ಲಿ ತೊಡಗಿಕೊಂಡಿರುತ್ತಾರೆ. ಹದಗೊಳಿಸಿದ ಸೆಣಬಿನ ನಾರಿನಿಂದ ಹೆಣೆದ ಕವಣೆಯೇ ಹೊಂಡೆಯಾಟದ ಪ್ರಮುಖ ಯುದ್ಧ ಪರಿಕರ. ಅಂತೆಯೇ ಕವಣೆಯೇ ಸೀಳಿ ಬರುವ ಹಿಂಡ್ಲಿಕಾಯಿಯೇ ಇವರ ಪ್ರಧಾನ ಆಯುಧ. ಹೀಗಾಗಿ ಎರಡೂ ಪಡೆಗಳು ಹೊಂಡೆಯಾಟದ ಯುದ್ಧ ಕೌಶಲ್ಯವನ್ನು ಪ್ರದರ್ಶಿಸಲು ಎರಡೂ ಪಡೆಗಳು ಅಣಿಗೊಂಡಿರುತ್ತದೆ. ಕರಾರುವಕ್ಕಾದ ಎಸುಗೆ ನಿರ್ಧರಿಸುವ ಕವಣೆಯನ್ನು ಅನುಭವಿಗಳಿಂದ ಸಿದ್ಧಗೊಳಿಸಿಕೊಳ್ಳುತ್ತಾರೆ.

ಅಲ್ಲದೇ ಊರೂರು ಅಲೆದು ಹಿಂಡ್ಲಿಕಾಯಿಯನ್ನು ಕೂಡಿಟ್ಟುಕೊಳ್ಳುತ್ತಾರೆ. ಹೊಂಡೆಯಾಟದ ಮುನ್ನೆರಡು ದಿನ ಮುಂಚೆಯೇ ಸಮರಾಭ್ಯಾಸದಲ್ಲಿ ಎರಡೂ ಪಡೆಗಳು ತೊಡಗಿಕೊಳ್ಳುವುದು ನಡೆದು ಬಂದ ಪರಿಪಾಠ. ಅಂತೆಯೇ ಬಲಿಪಾಢ್ಯದಂದು ನಿರ್ಣಾಯಕ ಹಣಾಹಣಿಗೆ ಪಡೆಗಳೆರಡೂ ತುದಿಗಾಲಲ್ಲಿ ನಿಂತಿರುತ್ತವೆ.

ಹೊಂಡೆಯಾಟದಲ್ಲಿ ಕ್ಷತ್ರೀಯ ವಂಶಜರನಿಸಿಕೊಂಡಿರುವ ಕೋಮಾರ ಪಂಥ ಸಮಾಜದವರು ಪಾಲ್ಗೊಳ್ಳುವುದು ವಿಶೇಷ. ರಣವಾದ್ಯದೊಂದಿಗೆ ಸಮರೋಪಾದಿಯಲ್ಲಿ ಸಾಗಿ ಬರುವ ಪಡೆ ವೀರಾವೇಶದೊಂದಿಗೆ ಕಾದಾಡುತ್ತವೆ. ಕುಂಬಾರಕೇರಿ ಕಳಸ ದೇವಸ್ಥಾನದಿಂದ ಎದುರಾಳಿಯನ್ನರಸಿ ಸಾಗಿ ಬರುತ್ತಾರೆ. ಅಂತೆಯೇ ವಿರೋಧಿ ಪಾಳೆಯದ ಬರುವಿಕೆಯನ್ನೆ ನಿರೀಕ್ಷಿಸುತ್ತಾ ಹೂಂಕರಿಸುವ ಹೊನ್ನೆಕೇರಿಯ ದಂಡು ಪಟ್ಟಣದ ಶ್ರೀ ಶಾಂತಾದುರ್ಗಾ ದೇವಸ್ಥಾನದ ಹತ್ತಿರ ಕಾದು ಕುಳಿತಿರುತ್ತದೆ. ಎರಡು ಪಡೆಗಳು ಎದುರುಗೊಳ್ಳುತ್ತಿದ್ದಂತೆ ಸೃಷ್ಟಿಯಾಗುವ ಯುದ್ಧದ ವಾತಾವರಣ ನೆರೆದವರ ಕುತೂಹಲ ಇಮ್ಮಡಿಗೊಳಿಸುತ್ತದೆ.

ಪಟ್ಟಣದ ಪ್ರಮುಖ ಆಯಕಟ್ಟಿನ ಶ್ರೀ ಶಾಂತಾದುರ್ಗಾ ದೇವಸ್ಥಾದ ಹತ್ತಿರ, ಅಂಬಾರಕೊಡ್ಲ ಕ್ರಾಸ್, ಶ್ರೀದುರ್ಗಾದೇವಿ ದೇವಸ್ಥಾನದ ಎದುರು ನಡೆಯುವ ಹೊಂಡೆಯಾಟದ ವಿಶಿಷ್ಟ ವೈಭವಕ್ಕೆ ನೆರದ ಅಸಂಖ್ಯಾತ ಜನರು ಹರ್ಷೋದ್ಗಾರ ವ್ಯಕ್ತಪಡಿಸುತ್ತಾರೆ. ಹೊಂಡೆಯಾಟದಲ್ಲಿ ಸೆಣಸಾಡುವ ಭಟರನ್ನು 'ಹೊಂಡೆ... ಹೊಂಡೆ' ಎಂದು ಇತರರು ಹುರಿದುಂಬಿಸುತ್ತಾರೆ.

ನಿಯಮಾವಳಿ ಪಾಲಿಸುವ ಯುದ್ಧಭಟರು: ಹೊಂಡೆಯಾಟದ ನಿಯಮಾವಳಿಗಳನ್ನು ಎರಡು ಪಡೆಗಳು ಪಾಲಿಸಬೇಕಾಗುತ್ತದೆ. ಯಾವುದೇ ಕಾರಣಕ್ಕೆ ಎದುರಾಳಿಯ ಮಂಡಿಯ ಮೇಲ್ಭಾಗಕ್ಕೆ ಹಿಂಡ್ಲಿಕಾಯಿಯ ಹೊಡೆತ ಪ್ರಯೋಗಿಸುವಂತಿಲ್ಲ. ಸೆಣಸುವ ಧಾವಂತದಲ್ಲಿ ಕವಣೆಯಿಂದ ಗುರಿ ತಪ್ಪಿ ಹಿಂಡ್ಲಿಕಾಯಿ ಎಸೆದ ವ್ಯಕ್ತಿಯು ಹೊಂಡೆಯಾಟದ ನಿಷೇದಕ್ಕೆ ಒಳಗಾಗುತ್ತಾನೆ. ಹಾಗೂ ನಿಯಮ ಉಲ್ಲಂಘಿಸಿದ ದಂಡು ದಂಡನೆಗೆ ಗುರಿಯಾಗುತ್ತದೆ. ಅಂತೆಯೇ ನಿರ್ಣಾಯಕರ ತೀರ್ಮಾನಕ್ಕೆ ಎರಡು ಪಡೆಗಳು ನಮ್ರತೆಯಿಂದ ತಲೆಭಾಗುತ್ತದೆ. ಅದೇ ರೀತಿ ದೊಡ್ಡ ಹಬ್ಬ ದಿನದಂದು ಮಂಗಳವಾರ ಹೊಂಡೆಯಾಟಕ್ಕೆ ಸಾಕ್ಷಿಯಾಯಿತು.

ವಿಭಾಗ ಮಟ್ಟದ ದೇಶಭಕ್ತಿ, ಜನಪದ ಗೀತಗಾಯನ ಸ್ಪರ್ಧೆ

ಕಲಬುರಗಿ, ನ. 11: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಜಿಲ್ಲಾ ಸಂಸ್ಥೆ ಹಾಗೂ ಅಪ್ಪಾ ಪಬ್ಲಿಕ್ ಸ್ಕೂಲ್ ಸಹಭಾಗಿತ್ವದಲ್ಲಿ ನಡೆದ ವಿಭಾಗ ಮಟ್ಟದ ದೇಶಭಕ್ತಿ ಗೀತ 'ಗಾಯನ ಮತ್ತು ಜನಪದ ಗೀತಗಾಯನ ಸ್ಪರ್ಧೆ ಯಶಸ್ವಿಯಾಗಿ ಜರುಗಿತು.



ಕಲಬುರಗಿಯ ಅಪ್ಪಾ ಪಬ್ಲಿಕ್ ಸ್ಕೂಲ್‌ನಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ ಜಿಲ್ಲಾ ಸಂಸ್ಥೆಯ ವತಿಯಿಂದ ದೇಶಭಕ್ತಿ ಮತ್ತು ಗೀತಗಾಯನ, ಜನಪದ ಗೀತಾಯಣಗಳ ವಿಭಾಗ ಮಟ್ಟದ ಸ್ಪರ್ಧೆಗೆ ಪ್ರಾಚಾರ್ಯ ಶಂಕರಗೌಡ ಹೊಸಮನಿ ಅವರು ಚಾಲನೆ ನೀಡಿದರು.

ಅಪ್ಪಾ ಪಬ್ಲಿಕ್ ಸ್ಕೂಲ್ ಪ್ರಾಚಾರ್ಯ ಶಂಕರಗೌಡ ಹೊಸಮನಿ ಮಾತನಾಡಿದರು. ಸ್ಪರ್ಧೆಯ ಮುಕ್ತಾಯ ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಸ್ಕೌಟ್‌ಆಯುಕ್ತ ಎಸ್.ಪಿ. ಸುಳ್ಳದ ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಪಿರಪ್ಪ ಹೂಗೊಂಡ, ಬೀದರ್‌ಜಿಲ್ಲಾ ಕಾರ್ಯದರ್ಶಿ ರಮೇಶ್‌ತಿಪಶೆಟ್ಟಿ, ಸಹ ಕಾರ್ಯದರ್ಶಿ ರಾಚಯ್ಯ ನಾಶಿ ಹಾಗೂ ಜಿಲ್ಲಾ ಜಂಟಿ ಕಾರ್ಯದರ್ಶಿ ರಾಜಕುಮಾರ್ ಮರಾಠೆ ಉಪಸ್ಥಿತರಿದ್ದರು.

ಸ್ಪರ್ಧೆಯಲ್ಲಿ ವಿವಿಧ ವಿಭಾಗಗಳಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ತಂಡಗಳಿಗೆ ನಗದು ಬಹುಮಾನ, ಪ್ರಶಸ್ತಿ ಪತ್ರ ಮತ್ತು ಪಾರಿತೋಷಕಗಳನ್ನು ನೀಡಲಾಯಿತು.

ಕಾರ್ಯಕ್ರಮದಲ್ಲಿ ಮಹಾಗಾಂವ್ ಸರ್ಕಾರಿ ಉರ್ದು ಪ್ರೌಢ ಶಾಲೆಯ ಮುಖ್ಯಗುರು ಶುಕುರಮಿಯಾ, ಕಮಲಾ ಪುರ ಸಹ ಶಿಕ್ಷಕರ ಸಂಘದ ಕಾರ್ಯದರ್ಶಿ ಮಲ್ಲಿಕಾರ್ಜುನ ಶಿರಸಗಿ, ಕಲಬುರಗಿ ಉತ್ತರ ತಾಲೂಕು ಕಾರ್ಯ ದರ್ಶಿ ಜಯಪ್ರಕಾಶ್ ಕಟ್ಟಿಮನಿ, ಕಲಬುರಗಿ ದಕ್ಷಿಣ ತಾಲೂಕು ಕಾರ್ಯದರ್ಶಿ ಗುರು ಲಿಂಗಯ್ಯ ಹಿರೇಮಠ, ಚಿತ್ತಾಪುರ ತಾಲೂಕು ಕಾರ್ಯದರ್ಶಿ ರಾಣಪ್ಪ ಸಂಗನ, ಚಿಂಚೋಳಿ ತಾಲೂಕು ಕಾರ್ಯದರ್ಶಿ ನರಸಿಂಗ್ ರಾಠೋಡ, ಜಿಲ್ಲಾ ಸ್ಕೌಟ್ ತರಬೇತಿ ಆಯುಕ್ತ ಅಮರೇಶ ಕೂರಿ, ಜಿಲ್ಲಾ ಗೈಡ್ಸ್ ತರಬೇತಿ ಆಯುಕ್ತೆ ಸುಮಂಗಲಾ ಎನ್.ಎಂ. ಹಾಗೂ ಸಹಾಯಕ ರಾಜ್ಯ ಸಂಘಟನಾ ಆಯುಕ್ತ ಶರೀಫ್ ಹತ್ತಿಮತ್ತೂರ ಉಪಸ್ಥಿತರಿದ್ದರು.

ಕಬ್ ವಿಭಾಗದಲ್ಲಿ ಕಲಬುರಗಿ ಪ್ರಥಮ, ಬೀದರ್ ದ್ವಿತೀಯ ಹಾಗೂ ಬಳ್ಳಾರಿ ತೃತೀಯ ಸ್ಥಾನ ಪಡೆದವು. ಬುಲ್‌ಬುಲ್ ವಿಭಾಗದಲ್ಲಿ ರಾಯಚೂರು ಪ್ರಥಮ, ಕಲಬುರಗಿ ದ್ವಿತೀಯ ಹಾಗೂ ಬಳ್ಳಾರಿ ತೃತೀಯ ಸ್ಥಾನ ಗಳಿಸಿದವು.

ಸ್ಕೌಟ್ ವಿಭಾಗದಲ್ಲಿ ಕಲಬುರಗಿ ಪ್ರಥಮ, ವಿಜಯನಗರ ದ್ವಿತೀಯ ಹಾಗೂ ಕೊಪ್ಪಳ ತೃತೀಯ ಸ್ಥಾನ ಪಡೆದವು. ಗೈಡ್ ವಿಭಾಗದಲ್ಲಿ ಕೊಪ್ಪಳ ಪ್ರಥಮ, ರಾಯಚೂರು ದ್ವಿತೀಯ ಹಾಗೂ ಕಲಬುರಗಿ ತೃತೀಯ ಸ್ಥಾನ ಗಳಿಸಿದವು. ರೋವರ್ ವಿಭಾಗದಲ್ಲಿ ಬಳ್ಳಾರಿ ಪ್ರಥಮ ಹಾಗೂ ವಿಜಯನಗರ ದ್ವಿತೀಯ ಸ್ಥಾನ ಪಡೆದವು. ರೇಂಜರ್ ವಿಭಾಗದಲ್ಲಿ ಕಲಬುರಗಿ ಪ್ರಥಮ, ಬಳ್ಳಾರಿ ದ್ವಿತೀಯ ಹಾಗೂ ಕೊಪ್ಪಳ ತೃತೀಯ ಸ್ಥಾನ ಗಳಿಸಿದವು. ವಿವಿಧ ವಿಭಾಗಗಳಲ್ಲಿ ವಿಜೇತ ತಂಡಗಳಿಗೆ ಆಯೋಜಕರು ಅಭಿನಂದನೆ ಸಲ್ಲಿಸಿದರು.

ಸಿದ್ಧೇಶ್ವರ ಸಂಸ್ಥೆಯ ಸಿದ್ಧಸಿರಿ ಕಾನೂನು ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ



ವಿಜಯಪುರ, ನ.11– ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಸಂಯೋಜನೆ ಹೊಂದಿರುವ ವಿಜಯಪುರದ ಶ್ರೀ ಸಿದ್ದೇಶ್ವರ ಸಂಸ್ಥೆಯ ಸಿದ್ಧಸಿರಿ ಕಾನೂನು ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆಯನ್ನು ಆಚರಿಸಲಾಯಿತು. ವಿದ್ಯಾರ್ಥಿಗಳಲ್ಲಿ ಉಚಿತ ಕಾನೂನು ನೆರವು, ಸಮಾನ ನ್ಯಾಯದ ಲಭ್ಯತೆ ಹಾಗೂ ಸಮಾಜದ ದುರ್ಬಲ ಮತ್ತು ಅಂಚಿನಲ್ಲಿರುವ ವರ್ಗಗಳಿಗೆ ಕಾನೂನು ಸೇವೆಗಳ ಮಹತ್ವದ ಕುರಿತು ಅರಿವು ಮೂಡಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ವಿಜಯಪುರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶಅರವಿಂದ ಹಗರಗಿ ಅವರು ಮುಖ್ಯ ಅತಿಥಿಗಳಾಗಿ, ವಿಜಯಪುರ ವಕೀಲರ ಸಂಘದ ಅಧ್ಯಕ್ಷ ಡಿ. ಜಿ. ಬಿರಾದಾರ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಸಿದ್ಧಸಿರಿ ಕಾನೂನು ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ಸುಷ್ಮಾ ಎಸ್. ದೇಸಾಯಿ ಹಾಗೂ ಸಹಾಯಕ ಪ್ರಾಧ್ಯಾಪಕಿ ಮತ್ತು ಕಾನೂನು ನೆರವು ಕೋಶದ ಸಂಯೋಜಕಿ ಶ್ರೀಮತಿ ಸಾಯಿಶ್ರೀ ಉಟಗಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ಮುಖ್ಯ ಅತಿಥಿ ಅರವಿಂದ ಹಗರಗಿ, ಕಾನೂನು ಸೇವೆಗಳ ಮಹತ್ವವನ್ನು ವಿವರಿಸಿದರು. ಸಮಾಜದ ದುರ್ಬಲ ಹಾಗೂ ವಂಚಿತ ವರ್ಗಗಳ ಕಲ್ಯಾಣಕ್ಕಾಗಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಜಾರಿಗೆ ತಂದಿರುವ ವಿವಿಧ ಯೋಜನೆಗಳ ಕುರಿತು ಅವರು ಸವಿಸ್ತಾರವಾಗಿ ಬೆಳಕು ಚೆಲ್ಲಿದರು. ಪ್ರತಿಯೊಬ್ಬರಿಗೂ ನ್ಯಾಯ ಸಿಗುವಂತೆ ಮಾಡುವುದು ಮತ್ತು ಲಭ್ಯವಿರುವ ಉಚಿತ ಕಾನೂನು ನೆರವಿನ ಸೇವೆಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಅತ್ಯಂತ ಅಗತ್ಯ ಎಂದು ಅವರು ಒತ್ತಿ ಹೇಳಿದರು.

ಗೌರವ ಅತಿಥಿ ಡಿ. ಜಿ. ಬಿರಾದಾರ ಅವರು ಮಾತನಾಡಿ, ಸಮಾಜಕ್ಕೆ ಸೂಕ್ತ ಕಾನೂನು ಸೇವೆಗಳನ್ನು ತಲುಪಿಸುವಲ್ಲಿ ಕಾನೂನು ವಿದ್ಯಾರ್ಥಿಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ತಿಳಿಸಿದರು. ವಿದ್ಯಾರ್ಥಿಗಳು ಕಾನೂನು ನೆರವು ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಜನ ಸಾಮಾನ್ಯರಲ್ಲಿ ಕಾನೂನು ಸಾಕ್ಷರತೆ ಬೆಳೆಸಲು ಕೊಡುಗೆ ನೀಡಬೇಕು ಎಂದು ಅವರು ಪ್ರೋತ್ಸಾಹಿಸಿದರು.ಅಧ್ಯಕ್ಷೀಯ ಭಾಷಣ ಮಾಡಿದ ಡಾ. ಸುಷ್ಮಾ ಎಸ್. ದೇಸಾಯಿ ಅವರು, ಸಾಮಾಜಿಕ ಹೊಣೆಗಾರಿಕೆ ಯನ್ನು ಬೆಳೆಸುವಲ್ಲಿ ಹಾಗೂ ಸರ್ವರಿಗೂ ನ್ಯಾಯ ದೊರಕಿಸಿ ಕೊಡುವಲ್ಲಿ ಕಾನೂನು ಶಿಕ್ಷಣದ ಪ್ರಾಮುಖ್ಯತೆಯನ್ನು ಪ್ರತಿಪಾದಿಸಿದರು. ಸಹಾಯಕ ಪ್ರಾಧ್ಯಾಪಕಿ ಸಾಯಿಶ್ರೀ ಉಟಗಿ ಅವರು ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆಯ ಮೂಲ ಉದ್ದೇಶಗಳನ್ನು ವಿವರಿಸಿ, ಉಚಿತ ಕಾನೂನು ನೆರವು ಮತ್ತು ಕಾನೂನು ಜಾಗೃತಿಯ ಅಗತ್ಯತೆಯನ್ನು ಹಂಚಿಕೊಂಡರು. ಭಾವಿ ಕಾನೂನು ವೃತ್ತಿಪರರಲ್ಲಿ ಸಮಾಜದ ಬಗೆಗಿನ ಕರ್ತವ್ಯ ಪ್ರಜ್ಞೆಯನ್ನು ಜಾಗೃತಗೊಳಿಸಲು ಹಾಗೂ ನ್ಯಾಯ ವಿತರಣಾ ವ್ಯವಸ್ಥೆ ಯನ್ನು ಬಲ ಪಡಿಸುವಲ್ಲಿ ಕಾನೂನು ಸೇವೆಗಳ ಮಹತ್ವವನ್ನು ಮನವರಿಕೆ ಮಾಡಿ ಕೊಡಲು ಈ ಕಾರ್ಯಕ್ರಮವು ಮಹತ್ವದ ವೇದಿಕೆಯಾಗಿ ಮೂಡಿ ಬಂತು.

ವೀರ ವನಿತೆ ಓಬವ್ವಳ ತ್ಯಾಗ, ಶೌರ್ಯ ಸ್ಮರಣೀಯ: ಲಿಡ್ಕರ್ ಅಧ್ಯಕ್ಷ ಮುಂಡರಗಿ ನಾಗರಾಜ ಶ್ಲಾಘನೆ

ಬಳ್ಳಾರಿ,ನ.11.ಹದಿನೆಂಟನೇ ಶತಮಾನದಲ್ಲಿದ್ದ ಚಿತ್ರದುರ್ಗದ ಪಾಳೆಯಗಾರರ ಇತಿಹಾಸದಲ್ಲಿ, ಒನಕೆ ಓಬವ್ವಳ ಶೌರ್ಯ ಸ್ಮರಣೀಯವಾಗಿದೆ ಎಂದು ಡಾ.ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ ಹೇಳಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ರಾಜಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಚಯ ಆವರಣದ ಹೊಂಗಿರಣ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ 'ವೀರವನಿತೆ ಒನಕೆ ಓಬವ್ವ ಜಯಂತಿ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕೋಟೆಯ ರಕ್ಷಣೆಗಾಗಿ ಒನಕೆಯನ್ನು ಆಯುಧವನ್ನಾಗಿ ಬಳಸಿಕೊಂಡು, ಹೈದರಾಲಿ ಸೈನ್ಯದ ಸೈನಿಕರನ್ನು ಒಬ್ಬೊಬ್ಬರಾಗಿ ಸದೆಬಡಿದು ಕೋಟೆಯನ್ನು ಕಾಪಾಡಿದ ಕಾವಲುಗಾರನ ಹೆಂಡತಿ ಸಾಮಾನ್ಯ ಮಹಿಳೆ ಒನಕೆ ಓಬವ್ವ, ತಮ್ಮ ತವರುಮನೆ ಗುಡೇಕೋಟೆಯಿಂದ ಬಂದವರಾಗಿದ್ದು, ಈ ಐತಿಹಾಸಿಕ ಸಾಹಸದಿಂದಾಗಿ ವೀರ ವನಿತೆ' ಎಂದು ಪ್ರಸಿದ್ಧಿ ಪಡೆದಿದ್ದಾರೆ ಎಂದು ತಿಳಿಸಿದರು.

ಬುದ್ಧ, ಬಸವಣ್ಣ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಯು ಸಮಾಜದಲ್ಲಿ ಸಮಾನತೆ, ಸ್ವಾತಂತ್ರ ?ಯ ಹಾಗೂ ಮಹಿಳಾ ಹಕ್ಕುಗಳಿಗಾಗಿ ಶ್ರಮಿಸಿದೆ. ಜ್ಯೋತಿಬಾ ಫುಲೆ ಹಾಗೂ ಸಾವಿತ್ರಿಬಾ ಫುಲೆ ದಂಪತಿ ಮಹಿಳೆಯರಿಗೆ ಶಿಕ್ಷಣ ದೊರೆಯುವಂತೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಈ ಮಹಾನ್ ವ್ಯಕ್ತಿಗಳು ಮತ್ತು ವೀರ



ವನಿತೆಯರ ಆದರ್ಶಗಳನ್ನು ವಿದ್ಯಾರ್ಥಿಗಳು ಹಾಗೂ ಯುವಜನರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ ಎಂದು ಅಭಿಪ್ರಾಯ ಪಟ್ಟರು.

ಅದೇರೀತಿಯಾಗಿ ಕಿತ್ತೂರು ರಾಣಿ ಚೆನ್ನಮ್ಮ, ರಾಣಿ ಅಬ್ಬಕ್ಕ ಮುಂತಾದವರು ಕನ್ನಡ ನಾಡಿಗಾಗಿ ತಮ್ಮ ಪ್ರಾಣವನ್ನೇ ಮುಪಾಗಿಟ್ಟು ಪೋರ್ಚುಗೀಸರ ಹಾಗೂ ಇತರರ ವಿರುದ್ಧ ಧೀರ ಹೋರಾಟ ನಡೆಸಿದರು ಎಂದು ಸ್ಮರಿಸಿದ ಅವರು, ಯುವಜನತೆ ಮೊಬೈಲ್ ಗೀಳಿನಿಂದ ಹೊರಬಂದು ಶಿಕ್ಷಣದಿಂದ ಉತ್ತಮ ಜೀವನ ರೂಪಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಅವರು ಮಾತನಾಡಿ, ರಾಜ್ಯದ ಮಹಿಳೆಯರ ಆರ್ಥಿಕ ಸ್ವಾವಲಂಬನೆ ಮತ್ತು ಸಾಮಾಜಿಕ ಸಬಲೀಕರಣಕ್ಕಾಗಿ ರಾಜ್ಯ ಸರ್ಕಾರ ಜಾರಿಗೊಳಿಸಿರುವ ಪಂಚ ಗ್ಯಾರಂಟಿ ಯೋಜನೆಗಳು ಇಂದು ಕೋಟ್ಯಂತರ ಮಹಿಳೆಯರ ಬದುಕಿನಲ್ಲಿ ಹೊಸ ಬೆಳಕನ್ನು ಮೂಡಿಸಿವೆ. ಸಂಪ್ರದಾಯದ ಗಡಿಗಳನ್ನು ಮೀರಿ, ತಮ್ಮ ಸ್ವಂತ ಕಾಲ ಮೇಲೆ ನಿಲ್ಲಲು ಈ ಯೋಜನೆಗಳು ಹೆಣ್ಣುಮಕ್ಕಳಿಗೆ ದೊಡ್ಡ ಶಕ್ತಿ ತುಂಬುತ್ತಿವೆ ಎಂದು ಹೇಳಿದರು.

ಕಂಪ್ಲಿಯ ಶಾಮಿಯಾಚಂದ್ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಸಿದ್ದಣ್ಣ ಪರಮೇಶ್ ಅವರು ಉಪನ್ಯಾಸದಲ್ಲಿ ಮಾತನಾಡಿ, ಕಾಲೇಜು ವಿದ್ಯಾರ್ಥಿಗಳಿಗೆ ಭವಿಷ್ಯದ ಹಿತದೃಷ್ಟಿಯಿಂದ ದೇಶದ ಇತಿಹಾಸ ಮತ್ತು ಸಂವಿಧಾನದ ಅರಿವು ಅತ್ಯಾವಶ್ಯಕವಾಗಿದೆ. ಕನ್ನಡ ನಾಡು ಮತ್ತು ದೇಶದ ಇತಿಹಾಸದಲ್ಲಿ ಹಲವು ಸಂಸ್ಥಾನಗಳ ಆಳ್ವಿಕೆಯ ಹಿನ್ನೆಲೆಯಿದ್ದು, ಹಲವು ನಾಯಕರ ಪಾತ್ರ ಮತ್ತು ಆಡಳಿತದ ಕೊಡುಗೆ ದೊಡ್ಡದಿದೆ ಎಂದು ಹೇಳಿದರು.

ಒನಕೆ ಓಬವ್ವ ಅವರು ಹಳೆಯ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಗುಡೇಕೋಟೆಯ ಚಿನ್ನಮ್ಮ ಮತ್ತು ಚಿನ್ನಪ್ಪ ದಂಪತಿಯ ಮಗಳಾಗಿದ್ದರು. ಚಿತ್ರದುರ್ಗದ ಕೋಟೆಯನ್ನು ಕಾಯುವ ಹಾಗೂ ಕಹಳೆ ಊದುವ ವೃತ್ತಿಯಲ್ಲಿದ್ದ ಮುದ್ದ ಹನುಮಪ್ಪ ಅವರಿಗೆ ಒನಕೆ ಓಬವ್ವ ಅವರನ್ನು ಕೊಟ್ಟು ಮದುವೆ ಮಾಡಿಕೊಡಲಾಗಿತ್ತು ಎಂದು ತಿಳಿಸಿದರು.



ಹಾವೇರಿ ಜಿಲ್ಲೆಯ ದೇವಿಹೊಸೂರು ಗ್ರಾಮದಲ್ಲಿ ನಡೆದ ದೀಪಾವಳಿ 'ಕೊಬ್ರಿ ಹೋರಿ' ಹಬ್ಬದಲ್ಲಿ ಗ್ರಾಮಸ್ಥರು ಉತ್ಸಾಹದಿಂದ ಪಾಲ್ಗೊಂಡರು.

ಕಡಿಮೆ ವೇತನಕ್ಕೆ ದುಡಿಯುತ್ತಿರುವ ಶಿಕ್ಷಕರ ಮೇಲೆ ಆರ್ಥಿಕ ಹೊರೆ ಸಲ್ಲ

ಅತಿಥಿ ಉಪನ್ಯಾಸಕರ ಗೌರವಧನಕ್ಕೆ ಟಿಡಿಎಸ್ ಕಡಿತ ಕೈಬಿಡಿ: ಶಶಿಲ್ ನಮೋಶಿ

ಕಲಬುರಗಿ: ನ. 11: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹಲವು ವರ್ಷಗಳಿಂದ ಕಡಿಮೆ ಗೌರವಧನಕ್ಕೆ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರ ಗೌರವಧನದಲ್ಲಿ ಟಿಡಿಎಸ್ (ಮೂಲದಲ್ಲಿಯೇ ತೆರಿಗೆ ಕಡಿತ) ವಿಧಿಸುವ ನಿರ್ಧಾರವನ್ನು ಸರ್ಕಾರ ತಕ್ಷಣ ಮರುಪಯಿರಿಶೀಲಿಸಿ ಕೈಬಿಡಬೇಕು ಎಂದು ವಿಧಾನ ಪರಿಷತ್‌ಸದಸ್ಯ ಶಶಿಲ್ ನಮೋಶಿ ಅವರು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ, ಅತಿಥಿ ಉಪನ್ಯಾಸಕರಿಗೆ ಆರ್ಥಿಕ ಭದ್ರತೆ ಒದಗಿಸಬೇಕಾದ ಸರ್ಕಾರವೇ ಅವರ ಮೇಲೆ ಹೆಚ್ಚುವರಿ ತೆರಿಗೆ ಹೊರೆ ಹೇರುವುದು ಎಷ್ಟು ಸರಿ ಎಂದು ಪ್ರಶ್ನಿಸಿರುವ ಅವರು, ಈಗಾಗಲೇ ಅಲ್ಪ ಗೌರವಧನದಲ್ಲಿ ಕುಟುಂಬ ನಿರ್ವಹಣೆ, ಮಕ್ಕಳ ಶಿಕ್ಷಣ, ಮನೆ ಬಾಡಿಗೆ ಸೇರಿದಂತೆ ದೈನಂದಿನ ಅಗತ್ಯಗಳನ್ನು ಪೂರೈಸಲು ಪರದಾಡುತ್ತಿರುವ ಉಪನ್ಯಾಸಕರಿಗೆ ಟಿಡಿಎಸ್‌ಕಡಿತ ಮತ್ತಷ್ಟು ಸಂಕಷ್ಟ ಉಂಟುಮಾಡಲಿದೆ. ಅತಿಥಿ ಉಪನ್ಯಾಸಕರು ತಮ್ಮ ಜ್ಞಾನ, ಅನುಭವ ಮತ್ತು ಪರಿಶ್ರಮದ ಮೂಲಕ ಸಾವಿ ರಾರು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಮಹ ತ್ವದ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ಆದರೆ ಅವರ ಸೇವೆಗೆ ತಕ್ಕ ಗೌರವ, ಸಮರ್ಪಕ ವೇತನ ಹಾಗೂ ಉದ್ಯೋಗ ಭದ್ರತೆ ಒದಗಿಸುವಲ್ಲಿ ಸರ್ಕಾರಗಳು ನಿರ್ಲಕ್ಷ್ಯ ತೋರಿವೆ. ಇಂತಹ ಸಂದರ್ಭ ದಲ್ಲಿ



ಅವರ ಅಲ್ಪ ಗೌರವಧನದಲ್ಲಿಯೇ ಟಿಡಿಎಸ್‌ಕಡಿತಗೊಳಿಸುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅತಿಥಿ ಉಪನ್ಯಾಸಕರಿಗೆ ಕಾಯಂ ಉದ್ಯೋಗದ ಭದ್ರತೆ, ಸೇವಾ ಭದ್ರತೆ ಹಾಗೂ ನಿವೃತ್ತಿ ಸೌಲಭ್ಯಗಳಿಲ್ಲ. ಪ್ರತಿವರ್ಷ ನೇಮಕಾತಿ ಮತ್ತು ಸೇವೆ ಮುಂದುವರಿಯುವ ಕುರಿತು ಅನಿಶ್ಚಿತತೆಯಲ್ಲಿಯೇ ಅವರು ಬದುಕುತ್ತಿದ್ದಾರೆ. ಸರ್ಕಾರ ಮಾನವೀಯ ದೃಷ್ಟಿಯಿಂದ ಅವರ ಸಮಸ್ಯೆಗಳಿಗೆ ಸ್ಪಂದಿಸಬೇಕು. ಅಲ್ಲದೆ, ಟಿಡಿಎಸ್ ಕಡಿತದಿಂದ ಬಿಪಿಎಲ್‌ಪಡಿತರ ಚೀಟಿಯ ಅರ್ಹತೆಯ ಮೇಲೆ ಪರಿಣಾಮ ಬೀರುತ್ತದೆಯೇ ಎಂಬ ಆತಂಕಕ್ಕೆ ಸರ್ಕಾರ ಅಧಿಕೃತ ಸ್ಪಷ್ಟನೆ ನೀಡಬೇಕು ಎಂದು ಆಗ್ರಹಿಸಿದರು.

ಅತಿಥಿ ಉಪನ್ಯಾಸಕರ ಗೌರವ ಧನದಲ್ಲಿ ಟಿಡಿಎಸ್ ಕಡಿತಗೊಳಿಸುವ ಕ್ರಮವನ್ನು ಮರುಪ–ರಿಶೀಲಿಸಬೇಕು. ಅವರಿಗೆ ಕನಿಷ್ಠ ಗೌರವಯುತ ವೇತನ, ಸೇವಾ ಭದ್ರತೆ ಹಾಗೂ ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕು. ಉಪನ್ಯಾಸಕರ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು ಎಂದು ಒತ್ತಾಯಿಸಿದರು. ಅತಿಥಿ ಉಪನ್ಯಾಸಕರು ಸರ್ಕಾರದ ಮೇಲಿನ ಹೊರೆ ಅಲ್ಲ: ರಾಜ್ಯದ ಉನ್ನತ ಶಿಕ್ಷಣ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿದ್ದಾರೆ. ಅವರ ಪರಿಶ್ರಮದಿಂದ ಸಾವಿರಾರು ವಿದ್ಯಾರ್ಥಿಗಳ ಬದುಕು ರೂಪುಗೊಳ್ಳುತ್ತಿದೆ. ಅಂತಹ ಶಿಕ್ಷಕರ ಬದುಕಿಗೆ ಮತ್ತಷ್ಟು ಸಂಕಷ್ಟ ತಂದೊಡ್ಡುವ ಕ್ರಮವನ್ನು ಸಹಿಸಲು ಸಾಧ್ಯವಿಲ್ಲ. ಸರ್ಕಾರ ಕೂಡಲೇ ಮಧ್ಯಪ್ರವೇಶಿಸಿ ಅವರ ಹಿತ ಕಾಪಾಡಬೇಕು. ಇಲ್ಲ ವಾದಲ್ಲಿ ಶಿಕ್ಷಕ ಸಮುದಾಯದ ಪರವಾಗಿ ಸದನದ ಒಳಗೂ ಹೊರಗೂ ಧ್ವನಿ ಎತ್ತಲಾಗುವುದು ಎಂದು ಎಚ್ಚರಿಸಿದರು.

ಎಐಡಿವೈಓ ಯುವಜನ ಸಮ್ಮೇಳನ ಯಶಸ್ವಿಗೊಳಿಸಿ: ಶರಣಪ್ಪ ಉದ್ಬಾಳ್

ರಾಯಚೂರು, ನ. 11: ನಿರುದ್ಯೋಗ, ಪ್ರಶ್ನೆಪತ್ರಿಕೆ ಸೋರಿಕೆ, ಅಕ್ರಮ ನೇಮಕಾತಿ, ಮಹಿಳೆಯರು ಮತ್ತು ಬಾಲಕಿಯರ ಮೇಲಿನ ದೌರ್ಜನ್ಯ ಹಾಗೂ ಆನ್‌ಲೈನ್ ಬೆಟ್ಟಿಂಗ್ ಹಾವಳಿ ವಿರುದ್ಧ ಯುವಜನರು ಸಂಘಟಿತರಾಗಿ ಹೋರಾಟ ನಡೆಸಬೇಕು ಎಂದು ಎಐಡಿವೈಒ ರಾಜ್ಯ ಘಟಕದ ಅಧ್ಯಕ್ಷ ಶರಣಪ್ಪ ಉದ್ಬಾಳ್ ಹೇಳಿದರು.

ನಗರದ ಎಐಡಿವೈಒ ಕಚೇರಿಯಲ್ಲಿ ಸಂಘಟನೆಯ 4ನೇ ಅಖಿಲ ಭಾರತ ಯುವಜನ ಸಮ್ಮೇಳನದ ಪೋಸ್ಟರ್ ಬಿಡುಗಡೆ ಮಾಡಿ ಅವರು ಮಾತನಾಡಿದರು.

ರಾಜಸ್ಥಾನದ ಜೈಪುರದಲ್ಲಿ ನ. 27ರಿಂದ 29ರವರೆಗೆ ನಡೆಯಲಿರುವ ಸಮ್ಮೇಳನಕ್ಕೆ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಇಲಾಖೆಗಳಲ್ಲಿರುವ ಲಕ್ಷಾಂತರ ಖಾಲಿಹುದ್ದೆ ಭರ್ತಿಮಾಡದೆ



ನಿರುದ್ಯೋಗ ಸಮಸ್ಯೆಯನ್ನು ಗಂಭೀರಗೊಳಿಸಲಾಗಿದೆ. ನಡೆಯುತ್ತಿರುವ ನೇಮಕಾತಿ ಪ್ರಕ್ರಿಯೆಗಳಲ್ಲೂ ಪರೀಕ್ಷಾ ಅಕ್ರಮ, ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಭ್ರಷ್ಟಾಚಾರದ ಆರೋಪಗಳಿಂದ ಸ್ಪರ್ಧಾತ್ಮಕ ಪರೀಕ್ಷೆಗಳು ರದ್ದಾಗುತ್ತಿವೆ ಎಂದರು.

ಮಾದಕ ವ್ಯಸನ, ಮಹಿಳೆಯರು ಮತ್ತು ಬಾಲಕಿಯರ ಮೇಲಿನ ದೌರ್ಜನ್ಯ ಹೆಚ್ಚುತ್ತಿದ್ದು, ಆನ್‌ಲೈನ್ ಗೇಮ್ ಮತ್ತು ಬೆಟ್ಟಿಂಗ್ ಹಾವಳಿಯಿಂದ ಯುವಜನರ ಬದುಕು ಸಂಕಷ್ಟಕ್ಕೆ ಸಿಲುಕಿದೆ. ಇದರಿಂದ ಆತ್ಮಹತ್ಯೆಯಂತಹ ಘಟನೆಗಳೂ ಹೆಚ್ಚುತ್ತಿವೆ. ಇಂತಹ ಸಮಸ್ಯೆಗಳ ವಿರುದ್ಧ ಯುವಜನರು ಸಂಘಟಿತರಾಗಿ ಹೋರಾಟ ನಡೆಸಬೇಕಿದೆ ಎಂದರು.

ಸಮ್ಮೇಳನವನ್ನು ಖ್ಯಾತ ಆರ್ಥಿಕ ತಜ್ಞ, ಹಾಗೂ ಜೆಎನ್‌ಯು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಅರುಣ್ ಕುಮಾರ್ ಉದ್ಘಾಟಿಸಲಿದ್ದಾರೆ. ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ಕೇಂದ್ರ ಸಮಿತಿ ಸದಸ್ಯ ಅರುಣ್ ಸಿಂಗ್ ಮುಖ್ಯ ಭಾಷಣಕಾರರಾಗಿದ್ದಾರೆ. ಎಐಡಿವೈಒ ಪ್ರಧಾನ ಕಾರ್ಯದರ್ಶಿ ಅಮರ್ಜಿತ್ ಕುಮಾರ್ ಮಾತನಾಡಲಿದ್ದಾರೆ. ಅಖಿಲ ಭಾರತ ಅಧ್ಯಕ್ಷ ನಿರಂಜನ್ ನಮಸ್ಕಾರ್ ಅಧ್ಯಕ್ಷತೆ ವಹಿಸಲಿದ್ದು, ಸಮಾರೋಪ ಭಾಷಣವನ್ನು ಎಸ್‌ಯು ಸಿಐ (ಕಮ್ಯುನಿಸ್ಟ್) ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಪ್ರವಾಷ್ ಘೋಷ್ ಮಾಡಲಿದ್ದಾರೆ ಎಂದರು.

ಎಐಡಿವೈಒ ಜಿಲ್ಲಾ ಘಟಕದ ಅಧ್ಯಕ್ಷ ಚನ್ನಬಸವ ಜಾನೇಕಲ್ ಮಾತನಾಡಿ, ಸಮ್ಮೇಳನದ ಪೂರ್ವಭಾವಿಯಾಗಿ ಜಿಲ್ಲಾದ್ಯಂತ ಯುವಜನರೊಂದಿಗೆ ಗುಂಪು ಚರ್ಚೆ, ಸದಸ್ಯತ್ವ ಅಭಿಯಾನ, ಘಟಕ ರಚನೆ ಸೇರಿದಂತೆ ವಿವಿಧ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಹೇಳಿದರು.

ಜನಗಣತಿಯಿಂದ ಯಾರೂ ಬಿಟ್ಟು ಹೋಗದಿರಲಿ: ಎಡಿಸಿ ಸುರೇಖಾ ಸೂಚನೆ



ಬೀದರ್, ನ. 11: ಮುಂಬರುವ 2027ರ ಜನವರಿಯಲ್ಲಿ ನಡೆಯಲಿರುವ ಜನಗಣತಿಯಿಂದ ಯಾರೂ ಕೂಡ ಬಿಟ್ಟು ಹೋಗದಂತೆ ಎಚ್ಚರ ವಹಿಸಿ ಎಲ್ಲರ ಹೆಸರುಗಳನ್ನು ದಾಖಲಿಸಬೇಕು ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಸುರೇಖಾ ಅವರು ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಕಚೇರಿಯ ಸಭಾಂಗಣದಲ್ಲಿ ಜನಗಣತಿಯಲ್ಲಿ ಕೆಲಸ ನಿರ್ವಹಿಸಲಿರುವ ಅಧಿಕಾರಿ ಮತ್ತು ಸಿಬ್ಬಂದಿಗೆ ಆಯೋಜಿಸಿದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಜನಗಣತಿಯಲ್ಲಿ ಯಾವುದೇ ಮನೆ ಅಥವಾ ವ್ಯಕ್ತಿ ಬಿಟ್ಟು ಹೋಗದಂತೆ ಎಚ್ಚರಿಕೆ ವಹಿಸಬೇಕು. ಈಗಾಗಲೇ ಜನಗಣತಿ ಪ್ರಕ್ರಿಯೆಯ ಎರಡನೇ ಹಂತದ ಸಿದ್ಧತೆ ಮತ್ತು ಮೇಲ್ವಿಚಾರಣಾ ಮಾರ್ಗಸೂಚಿಗಳ ಕುರಿತು ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಗೆ ನಿರ್ದೇಶನ ನೀಡಲಾಗಿದೆ ಎಂದರು.

ಜನಗಣತಿಯ ಮೊದಲ ಹಂತದಲ್ಲಿ ಯಶಸ್ವಿಯಾಗಿ ಮನೆಗಳ ಮ್ಯಾಪಿಂಗ್ ಮಾಡಲಾಗಿದೆ. ಮೊದಲ ಹಂತದಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಿದ ಎನ್ಯುಮ ರೇಟರ್‌ಗಳು ಮತ್ತು ಮೇಲ್ವಿಚಾರಕರು ತಮ್ಮ ಜವಾಬ್ದಾರಿಗಳನ್ನು ಮುಂದುವರಿಸಿಕೊಂಡು ಹೋಗಬೇಕು ಎಂದು ತಿಳಿಸಿದರು.

ಪ್ರತಿ ಕುಟುಂಬದ ಪ್ರತಿಯೊಬ್ಬ ಸದಸ್ಯರ ಮಾಹಿತಿಯನ್ನು ಸಂಗ್ರಹಿಸುವುದು ಮಾಡುವುದು ಈ ಹಂತದ ಮುಖ್ಯ ಉದ್ದೇಶವಾಗಿದೆ. ಈ ಬಾರಿಯ ಜನಗಣತಿ ಸಂಪೂರ್ಣವಾಗಿ ಡಿಜಿಟಲ್ ರೂಪದಲ್ಲಿ ನಡೆಯಲಿದೆ. ಮೊಬೈಲ್ ಆಯಪ್ ಮತ್ತು ಸಿಎಂಎಸ್ ಪೋರ್ಟಲ್ ಮೂಲಕ ಮೇಲ್ವಿಚಾರಣೆ ಹಾಗೂ ಸ್ವಯಂ ಜನಗಣತಿ ಸೌಲಭ್ಯ ಕಲ್ಪಿಸಲಾಗಿದೆ. ಜನಗಣತಿ ಉಸ್ತುವಾರಿ ಅಧಿಕಾರಿ ಹಾಗೂ ಮೇಲ್ವಿಚಾರಕರು ಕ್ಷೇತ್ರ ಮಟ್ಟದಲ್ಲಿ ನಿರಂತರವಾಗಿ ಪರಿಶೀಲನೆ ನಡೆಸಬೇಕು ಎಂದು ಹೇಳಿದರು.

ಬೀದರ್ ಜಿಲ್ಲಾ ನೋಡಲ್ ಅಧಿಕಾರಿ ಸತ್ಯೇಂದ್ರಕುಮಾರ ಜನಗಣತಿ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ತರಬೇತಿ ನೀಡಿದರು.

ನ.16ರಂದು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ 14ನೇ ವಾರ್ಷಿಕ ಘಟಿಕೋತ್ಸವ

ಬಳ್ಳಾರಿ,ನ.11.ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ 14ನೇ ವಾರ್ಷಿಕ ಘಟಿಕೋತ್ಸವವು ನವೆಂಬರ್ 16 ರಂದು ಬೆಳಿಗ್ಗೆ 11.30 ಗಂಟೆಗೆ ವಿಶ್ವವಿದ್ಯಾಲಯದ ಬಯಲು ರಂಗಮಂದಿರದಲ್ಲಿ ಜರುಗಲಿದೆ. ರಾಜ್ಯದ ರಾಜ್ಯಪಾಲೆ ಹಾಗೂ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ. ಸುಧಾ ಯಾದವ್ ಘಟಿಕೋತ್ಸವದ ಅಧ್ಯಕ್ಷತೆ ವಹಿಸಲಿದ್ದಾರೆ.

ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರು ಹಾಗೂ ವಿಶ್ವ ವಿದ್ಯಾಲಯದ ಉಪ–ಕುಲಾಧಿ



ಪತಿಗಳಾದ ಬಸವರಾಜ ರಾಯರೆಡ್ಡಿ ಅವರು ಉಪಸ್ಥಿತರಿರುವರು.

ಕರ್ನಾಟಕ ಮತ್ತು ಒಡಿಶಾ ಉಚ್ಚ ನ್ಯಾಯಾಲಯಗಳ ನಿವೃತ್ತ ನ್ಯಾಯಾಧೀಶ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಘಟಿಕೋತ್ಸವ ಭಾಷಣವನ್ನು ನೆರವೇರಿಸಲಿದ್ದಾರೆ.

ವಿಜಯನಗರ ಶ್ರೀಕೃಷ್ಣ ದೇವರಾಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಂ. ಮುನಿರಾಜು, ಕುಲಸಚಿವರಾದ ಪ್ರೊ. ಪಿ. ಕಣ್ಣನ್ (ಮೌಲ್ಯಮಾಪನ), ಪ್ರೊ. ಲೋಕೇಶ ವಿ. (ಪ್ರಭಾರ) ಸೇರಿದಂತೆ ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ ಸದಸ್ಯರು, ವಿಶ್ವ ವಿದ್ಯಾಲಯದ ಬೋಧಕ– ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಇತರರು ಉಪಸ್ಥಿತರಿರುವರು ಎಂದು ವಿವಿ ಪ್ರಕಟಣೆ ತಿಳಿಸಿದೆ.

ವಿಜಯಪುರ ಕೃಷಿ ಮಹಾವಿದ್ಯಾಲಯ: ತಾತ್ಕಾಲಿಕ ಅರೆಕಾಲಿಕ ಹುದ್ದೆಗಳ ನೇಮಕಾತಿಗೆ ನೇರ ಸಂದರ್ಶನ

ವಿಜಯಪುರ,ನ.11: ಧಾರವಾಡದ ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ವಿಜಯಪುರ ಕೃಷಿ ಮಹಾವಿದ್ಯಾಲಯದಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ತಾತ್ಕಾಲಿಕ ಹಾಗೂ ಅರೆಕಾಲಿಕ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ನೇರ ಸಂದರ್ಶನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಅಗ್ರಿಕಲ್ಚರಲ್ ಎಂಟಮಾಲಜಿ, ಜೆನೆಟಿಕ್ಸ್ ಆ್ಯಂಡ್ ಪ್ಲಾಂಟ್ ಬ್ರೀಡಿಂಗ್, ಪ್ಲಾಂಟ್ ಪ್ಯಾಥಾಲಜಿ, ಸಾಯಿಲ್ ಸೈನ್ಸ್, ಅಗ್ರಿಕಲ್ಚರಲ್ ಎಕ್ಸ್‌ಟೆನ್ಷನ್, ಬಯೋಟೆಕ್ನಾಲಜಿ ಹಾಗೂ ಸೈಕಾಲಜಿ–ರೂರಲ್ ಸೋಷಿಯಾಲಜಿ ವಿಷಯಗಳಲ್ಲಿ ತಲಾ ಒಂದು ಹುದ್ದೆಗೆ, ಆಯಾ ವರ್ಗೀಕರಣದನ್ವಯ ನೇಮಕಾತಿ ಪ್ರಕ್ರಿಯೆ ನಡೆಯಲಿದೆ.

ಆಸಕ್ತ ಮತ್ತು ಅರ್ಹ ಅಭ್ಯರ್ಥಿಗಳು ನವೆಂಬರ್ 25 ರಂದು ಬೆಳಗ್ಗೆ 9 ರಿಂದ ಸಂಜೆ 4 ಗಂಟೆವರೆಗೆ ವಿವಿಧ ಹುದ್ದೆಗಳಿಗನುಗುಣಾವಾಗಿ ನಡೆಯುವ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು.

ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯನ್ನು ಭರ್ತಿಮಾಡಿ, ಎಲ್ಲ ಮೂಲ ದಾಖಲಾತಿಗಳು, ಅವುಗಳ ದೃಢೀಕೃತ ಎರಡು ಸೆಟ್ ನಕಲು ಪ್ರತಿಗಳು ಹಾಗೂ ಇತ್ತೀಚಿನ ಭಾವಚಿತ್ರದೊಂದಿಗೆ ಸಂದರ್ಶನಕ್ಕೆ ನೇರವಾಗಿ ಹಾಜರಾಗಬೇಕು. ಮುಂಚಿತವಾಗಿ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

ನಿಗದಿತ ಅರ್ಜಿ ನಮೂನೆ ಹಾಗೂ ನೇಮಕಾತಿಗೆ ಅಧಿಕೃತ ಅಂತರ್ಜಾಲ ತಾಣ https://uasd.eduಗೆ ಭೇಟಿ ನೀಡಬಹುದಾಗಿದೆ ಎಂದು ಡೀನ್ ತಿಳಿಸಿದ್ದಾರೆ.

ಸರ್ಕಾರಿ ನೌಕರರ ವೇತನ ಪ್ಯಾಕೇಜ್ ಯೋಜನೆ

ಮೃತ ನೌಕರರ ಕುಟುಂಬಕ್ಕೆ ಬ್ಯಾಂಕ್‌ನಿಂದ 1 ಕೋಟಿ ಚೆಕ್ ವಿತರಣೆ



ರಾಯಚೂರು, ನ. 11: ಸರ್ಕಾರಿ ನೌಕರರ ವೇತನ ಪ್ಯಾಕೇಜ್ ಯೋಜನೆಯಡಿ ಅಪಘಾತದಲ್ಲಿ ಮೃತಪಟ್ಟ ಶರಣಪ್ಪ, ಸಮಾಜ ಕಲ್ಯಾಣ ಇಲಾಖೆ ದೇವದುರ್ಗ, ರವರ ಕುಟುಂಬಕ್ಕೆ 1 ಕೋಟಿ ಮೊತ್ತದ ಪರಿಹಾರ ಚೆಕ್ ಜಿಲ್ಲಾ ಉಸ್ತುವಾರಿ ಸಚಿವ ಡಾ. ಅಜಯ ಧರ್ಮಸಿಂಗ್ ಅವರು ನೀಡಿದರು.

ನಗರದ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕದ ಪದಾಧಿಕಾರಿಗಳ ನೇತೃತ್ವದಲ್ಲಿ ಚೆಕ್ ವಿತರಿಸಿ, ಮೃತ ನೌಕರರ ಕುಟುಂಬದ ಸದಸ್ಯರಿಗೆ ಸಾಂತ್ವನ ಸೂಚಿಸಿ, ಸರ್ಕಾರದ ಯೋಜನೆಗಳು ಸಂಕಷ್ಟದ ಸಂದರ್ಭದಲ್ಲಿ ಕುಟುಂಬಗಳಿಗೆ ಆರ್ಥಿಕ ಭದ್ರತೆ ನೀಡುತ್ತವೆ ಎಂದು ಸಚಿವರು ತಿಳಿಸಿದರು.

ಮೃತ ನೌಕರರ ಸೇವೆಯನ್ನು ಸ್ಮರಿಸಿ, ಅವರ ಕುಟುಂಬದೊಂದಿಗೆ ಸದಾ ಸರ್ಕಾರ ಹಾಗೂ ಸಂಘ ಇರುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸರ್ಕಾರಿ ನೌಕರರ ಸಂಘದ *ಜಿಲ್ಲಾ ಅಧ್ಯಕ್ಷರಾದ ಶ್ರೀ ಕೃಷ್ಣ ಶಾವಂತಗೇರಿ* ಮಾತನಾಡಿ, ಸರ್ಕಾರದ ಈ ಪ್ಯಾಕೇಜ್ ಯೋಜನೆಯಿಂದ ಬಂದ ಹಣವನ್ನು ಸಂತ್ರಸ್ತ ಕುಟುಂಬ ಒಳ್ಳೆಯದಕ್ಕೆ ಬಳಸಿಕೊಂಡು, ಮಕ್ಕಳಿಗೆ ಶಿಕ್ಷಣ, ಕುಟುಂಬಕ್ಕೆ ಭದ್ರತೆ ನೀಡಲಿ ಎಂದು ಕರೆ ನೀಡಿದ ಅವರು, ಸಂಘದ ಪದಾಧಿಕಾರಿಗಳು ಮೃತ ನೌಕರರ ಕುಟುಂಬಕ್ಕೆ ಧೈರ್ಯ ತುಂಬಿ, ಅಗತ್ಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಜಿಲ್ಲಾಧಿಕಾರಿ ಪೂವಿತಾ ಎಸ್, ಜಿಲ್ಲಾ ಪಂಚಾಯತ್ ಸಿಇಓ ಈಶ್ವರ ಕುಮಾರ ಕಾಂದೂ, ಪೋಲಿಸ್ ವರಿಷ್ಠಾಧಿಕಾರಿಗಳು, ಪಾಲಿಕೆಯ ಆಯುಕ್ತರು, ಬ್ಯಾಂಕ್ ಪ್ರಾದೇಶಿಕ ವಲಯ ವ್ಯವಸ್ಥಾಪಕಿ ಸೀತಾಬಾಯಿ , ಯಂಕಪ್ಪ ಫಿರಂಗಿ, ರಾಜಶೇಖರ ಸೇರಿದಂತೆ ಸಂಘದ ಪದಾಧಿಕಾರಿಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು, ಸಂಘದ ಪದಾಧಿಕಾರಿಗಳು, ನೌಕರರು ಹಾಗೂ ಕುಟುಂಬ ಸದಸ್ಯರು ಉಪಸ್ಥಿತರಿದ್ದರು.

ಆಂಧ್ರದ ಪಾಲಿನ ನೀರು ಪಡೆಯಲು ರಾಯದುರ್ಗ ಶಾಸಕ ಶ್ರೀನಿವಾಸ್‌ಗೆ ತುಂಗಭದ್ರಾ ರೈತಸಂಘದ ಮನವಿ

ಬಳ್ಳಾರಿ, ನ.11. ಬಳ್ಳಾರಿ ನಗರದ ಇನ್ಫೆಂಟ್ರಿ ರಸ್ತೆಯ ಲ್ಯಾಬ್ ಉದ್ಘಾಟನಾ ಖಾಸಗಿ ಕಾರ್ಯಕ್ರಮಕ್ಕೆ ಆಗಮಿಸಿದ್ದ ಆಂಧ್ರಪ್ರದೇಶದ ರಾಯದುರ್ಗ ತಾಲೂಕಿನ ಶಾಸಕ ಕಾಲುವ ಶ್ರೀನಿವಾಸ್ ಅವರನ್ನು ಭೇಟಿ ಮಾಡಿ, ತುಂಗಭದ್ರಾ ಜಲಾಶಯದ ಬಲದಂಡೆಯ ಮೇಲ್ಮಟ್ಟದ ಕಾಲುವೆ (ಎಚ್ ಎಲ್ ಸಿ) ಗೆ ನವಂಬರ್ 30ರವರೆಗೂ ಮತ್ತು ಡಿಸೆಂಬರ್ ತಿಂಗಳಿನಲ್ಲಿ ಸಹ ಆಂಧ್ರಪ್ರದೇಶದ ಪಾಲಿನ ನೀರು ಪಡೆಯಬೇಕೆಂದು ಹಸಿರು ಶಾಲು ಹಾಕಿ ಗೌರವಿಸಿ ವಿನಂತಿಸಲಾಯಿತು.



ಈ ಕುರಿತು ನಿಮ್ಮ ಬಳ್ಳಾರಿ ಜಿಲ್ಲೆಯ ಶಾಸಕರೊಂದಿಗೂ ಮತ್ತು ಅಧಿಕಾರಿಗಳೊಂದಿಗೆ ಚರ್ಚಿಸಿ ಎರಡು ರಾಜ್ಯಗಳ ಪಾಲಿನ ನೀರು ಪಡೆಯಲು ಪ್ರಯತ್ನಿಸೋಣ ಎಂದು ಶಾಸಕರು ಭರವಸೆ ನೀಡಿದ್ದಾರೆ. ಡಾ. ಪುರುಷೋತ್ತಮ ಗೌಡ, ತಿಮ್ಮರಾಜು ಬಳ್ಳಾರಿ, ಕೃಷ್ಣ ನಗರ ಕ್ಯಾಂಪ್ ಶಿವಯ್ಯ , ಗಂಗಾವತಿ ವೀರೇಶ್, ಕೃಷ್ಣನಗರ ಕ್ಯಾಂಪ್ ಬಲರಾಮ , ಕಂಪ್ಲಿ ಸತ್ಯನಾರಾಯಣ , ಕೃಷ್ಣ ನಗರ್ ಕ್ಯಾಂಪ್ ರಾಮಕೃಷ್ಣ , ಜಾಲಿಹಾಳ್ ಶ್ರೀಧರ್‌ಗೌಡ .11.11.2026:– " ತುಂಗಭದ್ರ ರೈತ ಸಂಘದಿಂದ ರೈತರ ಮಾಹಿತಿಗಾಗಿ " ಗೌರಿಶಂಕರಸ್ವಾಮಿ , ಕೃಷ್ಣ ನಗರ್ ಕ್ಯಾಂಪ್ ಶಿವಯ್ಯ, ಗಂಗಾವತಿ ವೀರೇಶ್, ಕಂಪ್ಲಿ ಸತ್ಯನಾರಾಯಣ, ಶಿವಶಂಕರಯ್ಯ ಸ್ವಾಮಿ , ಕೊಳೂರು ಚಂದ್ರಶೇಖರ್ ಗೌಡ , ಚಾಲಿಹಾಳ ಶ್ರೀಧರ್ ಗೌಡ, ಬಂದ್ರಾಳು ಮೃತ್ಯುಂಜಯ ಸ್ವಾಮಿ, ಡಾ.ಪುರುಷೋತ್ತಮ್ ಗೌಡ, ತುಂಗಭದ್ರಾ ರೈತಸಂಘ

ತುಂಗಭದ್ರಾ ರೈತ ಸಂಘ ಸದಸ್ಯರು ಮತ್ತಿತರರು ಉಪಸ್ಥಿತರಿದ್ದರು.

ಒನಕೆ ಓಬವ್ವ ಅವರ ಧೈರ್ಯ, ಸಾಹಸ, ತ್ಯಾಗ ಇಂದಿನ ಮಹಿಳೆಯರಿಗೆ ಸ್ಫೂರ್ತಿಯಾಗಲಿ: ಡಾ.ಔದ್ರಾಮ ಕರೆ

ವಿಜಯಪುರ,ನ.11: ಕನ್ನಡ ನಾಡಿನ ಇತಿಹಾಸದಲ್ಲಿ ವೀರವನಿತೆ ಒನಕೆ ಓಬವ್ವ ಅವರ ಧೈರ್ಯ, ಸಾಹಸ, ಸ್ವಾಭಿಮಾನ ಹಾಗೂ ದೇಶಪ್ರೇಮಕ್ಕೆ ವಿಶಿಷ್ಟ ಸ್ಥಾನವಿದೆ. ಅಸಾಧಾರಣ ಸಮಯಪ್ರಜ್ಞೆ ಮತ್ತು ಸಾಹಸದಿಂದ ಚಿತ್ರದುರ್ಗದ ಕೋಟೆಯನ್ನು ರಕ್ಷಿಸಲು ಹೋರಾಡಿದ ಓಬವ್ವ ಅವರ ಜೀವನ ಎಲ್ಲರಿಗೂ ಪ್ರೇರಣಾದಾಯಕವಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ ಹೇಳಿದರು.

ಕನ್ನಡನಾಡಿನ ಇತಿಹಾಸದಲ್ಲಿ ಮಹಿಳಾ ಶೌರ್ಯ ಮತ್ತು ಸ್ವಾಭಿಮಾನದ ಪ್ರತೀಕವಾಗಿ ಒನಕೆ ಓಬವ್ವ ಅಜರಾಮರವಾಗಿದ್ದಾರೆ. ಸಂಕಷ್ಟದ ಸಂದರ್ಭದಲ್ಲಿ ಸಮಯಪ್ರಜ್ಞೆ, ಧೈರ್ಯ ಮತ್ತು ಅಪಾರ ಸಾಹಸ ಪ್ರದರ್ಶಿಸಿ ಕೋಟೆಯ ರಕ್ಷಣೆಗೆ ನಿಂತ ಅವರ ವೀರೋಚಿತ ಕಾರ್ಯ ಇಂದಿಗೂ ಸ್ಮರಣೀಯವಾಗಿದೆ ಎಂದರು.

ಪತಿ ಊಟ ಮಾಡುತ್ತಿದ್ದ ಸಂದರ್ಭದಲ್ಲಿ ಅವರಿಗೆ ತೊಂದರೆಯಾಗಬಾರದೆಂಬ ಕಾಳಜಿಯಿಂದ, ಕೋಟೆಯ ರಕ್ಷಣೆಯ ಹೊಣೆ ತಾವೇ ವಹಿಸಿಕೊಂಡು ಶತ್ರು ಸೈನಿಕರನ್ನು ಎದುರಿಸಿದ ಓಬವ್ವ ಅವರ ಕಾರ್ಯ ಅವರ ಕರ್ತವ್ಯನಿಷ್ಠೆ ಮತ್ತು ಅಸಾಧಾರಣ ಧೈರ್ಯಕ್ಕೆ ಸಾಕ್ಷಿಯಾಗಿದೆ. ನಾಡಿನ ರಕ್ಷಣೆಗೆ ಆದ್ಯತೆ ನೀಡಿದ ಅವರ ಶೌರ್ಯ,



ತ್ಯಾಗ ಮತ್ತು ದೇಶಪ್ರೇಮ ಇಂದಿನ ಯುವಜನತೆಗೆ, ವಿಶೇಷವಾಗಿ ಮಹಿಳೆಯರಿಗೆ ಸ್ಫೂರ್ತಿಯಾಗಬೇಕು ಎಂದರು.

ಉಪನ್ಯಾಸ ನೀಡಿದ, ಚಿತ್ರದುರ್ಗದ ಯಶೋಧರಮ್ಮ ಬೋರಪ್ಪ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಅರ್ಥಶಸ್ತ್ರದ ಸಹಾಯಕ ಪ್ರಾಧ್ಯಾಪಕ ರಾದ ಸಂಜೀವಕುಮಾರ ಪೋತೆ, ಚಿತ್ರದುರ್ಗದ ಪಾಳೆಗಾರರ ಆಡಳಿತದ ಅವಧಿಯಲ್ಲಿ ಹೈದರಾಲಿ ಕೋಟೆಯನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ ಸಂದರ್ಭದಲ್ಲಿ, ಕೋಟೆಯೊಳಗೆ ಶತ್ರು ಸೈನಿಕರು ಒಳನುಸುಳಲು ಯತ್ನಿಸಿದರು. ಇದನ್ನು ಗಮನಿಸಿದ ಒನಕೆ ಓಬವ್ವ ಕೈಗೆ ಸಿಕ್ಕ ಒನಕೆಯನ್ನೇ ಆಯುಧವನ್ನಾಗಿ ಮಾಡಿಕೊಂಡು ಶತ್ರು ಸೈನಿಕರನ್ನು ಧೈರ್ಯದಿಂದ ಎದುರಿಸಿದರು.

ತಮ್ಮ ಸಮಯಪ್ರಜ್ಞೆ, ಸಾಹಸ ಮತ್ತು ಸ್ವಾಭಿಮಾನದಿಂದ ಕೋಟೆಯ ರಕ್ಷಣೆಗೆ ನಿಂತ ಅವರ ವೀರಗಾಥೆ ಕರ್ನಾಟಕದ ಇತಿಹಾಸದಲ್ಲಿ ಅಚ್ಚಳಿಯದೆ ಉಳಿದಿದೆ. ವೀರ ಮದಕರಿ ನಾಯಕನ ಆಡಳಿತದ ಕಾಲಘಟ್ಟದ ಚಿತ್ರದುರ್ಗದ ಇತಿಹಾಸ ದಲ್ಲಿ ಒನಕೆ ಓಬವ್ವ ಅವರ ಸಾಹಸಕ್ಕೆ ವಿಶೇಷ ಸ್ಥಾನವಿದೆಂದು ವಿಸ್ತ್ರತವಾಗಿ ಅವರು ವಿವರಿಸಿದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ವಸಂತ ಹೊನಮೊಡೆ, ಮಹೇಶ ಪೋತದಾರ, ಅಶೋಕ ಕಲಘಟಗಿ, ಸಂತೋಷ ಭೋವಿ, ರಾಜಶೇಖರ ದೈವಾಡಿ, ರಾಜಶೇಖರ ಕುದರಿ, ಚೆನ್ನು ಕಟ್ಟಿಮನಿ, ಅಡಿವೆಪ್ಪ ಸಾಲಗಲ, ಶೇಖ್ ಮಾಸ್ತರ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿ,ಸಿಬ್ಬಂದಿ ಹಾಗೂ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಮೋಹನ್ ಕಟ್ಟಿಮನಿ ನಿರೂಪಿಸಿ ವಂದಿಸಿದರು.

ಕಲಬುರಗಿಯ ಕೇಂದ್ರೀಯ ವಿವಿಯಲ್ಲಿ ಕಲಿಕೆಯೊಂದಿಗೆ ಗಳಿಕೆ

64 ವಿದ್ಯಾರ್ಥಿಗಳ ಆಯ್ಕೆಗೆ ಕುಲಪತಿ ಪ್ರೊ.ಬಿ.ಸತ್ಯನಾರಾಯಣ ಚಾಲನೆ

ಕಲಬುರಗಿ, ನ. 11: ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯವು ಎನ್‌ಬಿಸಿಸಿ ಪ್ರಾಯೋಜಿತ 'ಸಾಮಾಜಿಕ ನಾವೀನ್ಯತೆ ಮತ್ತು ಸುಸ್ಥಿರ ಅಭಿವೃದ್ಧಿಗಾಗಿ ಸಾಮಾಜಿಕ ಮೌಲ್ಯ ಸೃಷ್ಟಿ ಹಾಗೂ ಆತ್ಮನಿರ್ಭರ ಗ್ರಾಮಗಳ ನಿರ್ಮಾಣದ ಉದ್ದೇಶದ ಸ್ವಾವಲಂಬಿ ವಿದ್ಯಾರ್ಥಿವೇತನ ಕಾರ್ಯಕ್ರಮ' ಆರಂಭಿಸಿದೆ. ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಅವರು ಕಾರ್ಯಕ್ರಮಕ್ಕೆ ಅಧಿಕೃತವಾಗಿ ಚಾಲನೆ ನೀಡಿದರು.

ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಅವರು ಮಾತನಾಡಿ, ಗ್ರಾಮೀಣ ಸಮುದಾಯಗಳ ನೈಜ ಸಮಸ್ಯೆಗಳಿಗೆ ಪರಿಹಾರ ಕಂಡು ಕೊಳ್ಳಲು ವಿದ್ಯಾರ್ಥಿಗಳು ತಮ್ಮ ಶೈಕ್ಷ ಣಿಕ ಜ್ಞಾನ ಮತ್ತು ಕೌಶಲ್ಯಗಳನ್ನು ಪ್ರಾಯೋಗಿಕವಾಗಿ ಬಳಸಿಕೊಳ್ಳುವಂತೆ ಪ್ರೇರೇಪಿಸುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದ. ಈ ಮೂಲಕ ಶೈಕ್ಷಣಿಕ ಕಲಿಕೆ ಮತ್ತು ಸಾಮಾಜಿಕ ಅಗತ್ಯಗಳ ನಡುವಿನ ಅಂತರ ಕಡಿಮೆ ಮಾಡಲು ಸಾಧ್ಯವಾಗಲಿದೆ. ವಿಶ್ವವಿದ್ಯಾಲಯ ಮತ್ತು ಗ್ರಾಮಗಳ ನಡುವಿನ ಸಹಭಾಗಿತ್ವವು ಸಾಮಾಕ ನಾವೀನ್ಯತೆಗೆ ಉತ್ತೇಜನ ನೀಡುವುದರ ಜೊತೆಗೆ, ಸುತ್ತಮುತ್ತಲಿನ ಗ್ರಾಮಗಳ ಸ್ವಾವಲಂಬಿ ಹಾಗೂ ಸುಸ್ಥಿರ ಸಮುದಾಯಗಳನ್ನಾಗಿ ರೂಪಿಸಲು ಸಹಕಾರಿಯಾಗಲಿದೆ ಎಂದರು.

ಕಲಿಯುತ್ತಲೇ ಗಳಿಸಿ ಯೋಜನೆ ಯಡಿ ವಿಶ್ವವಿದ್ಯಾಯದ ವಿವಿಧ ಅಧ್ಯಯನ ವಿಭಾಗಗಳಿಂದ



64 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಈ ಯೋಜನೆಯಡಿ ಆಯ್ಕೆಯಾದ ಪ್ರತಿ ವಿದ್ಯಾರ್ಥಿಯು ಪ್ರತಿದಿನ ಒಂದೂವರೆ ಗಂಟೆಗಳ ಕಾಲ ಕಾರ್ಯಕ್ರಮದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲಿದ್ದು, ಅವರಿಗೆ ಮಾಸಿಕ 3,000ರೂ. ಗೌರವಧನ ನೀಡಲಾಗುತ್ತದೆ. ವಿದ್ಯಾರ್ಥಿಗಳು ಸಮುದಾಯ ಸೇವೆ, ಪರಿಸರ ಸಂರಕ್ಷಣೆ ಮತ್ತು ನಿರ್ವಹಣೆ, ಉದ್ಯಮಶೀಲತೆ ಅಭಿವೃದ್ಧಿ ಹಾಗೂ ತಂತ್ರಜ್ಞಾನ ಆಧಾರಿತ ಉಪಕ್ರಮಗಳ ಮೂಲಕ ಗ್ರಾಮೀಣ ಸಮುದಾಯಗಳ ಅಭಿವೃದ್ಧಿಗೆ ಕೊಡುಗೆ ನೀಡಲಿದ್ದಾರೆ. ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಣದ ಮಹತ್ವ ಒತ್ತಿಹೇಳಿದ ಕುಲಪತಿ, ಆತ್ಮನಿರ್ಭರ ಭಾರತದ ಆಶಯ ಸಾಕಾರಗೊಳಿಸಲು ಗುಣಮಟ್ಟದ ಶಿಕ್ಷಣ, ಕೌಶಲ್ಯಾಭಿವೃದ್ಧಿ, ವೃತ್ತಿಪರ ತರಬೇತಿ ಹಾಗೂ ಸಮುದಾಯದ ಸಕ್ರಿಯ ಭಾಗವಹಿಸುವಿಕೆ ಅತ್ಯಗತ್ಯ ಎಂದರು.

ಯೋಜನೆಯ ಪ್ರಧಾನ ಸಂಶೋಧಕ ಪ್ರೊ. ಚನ್ನವೀರ ಆರ್. ಎಂ. ಅವರು, ಈ ಕಾರ್ಯಕ್ರಮವು ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರ 'ಏಕಾತ್ಮ ಮಾನವತಾವಾದ' ತತ್ವಚಿಂತನೆಯ ಪ್ರೇರಣೆ ಪಡೆದಿದೆ. ಈ ತತ್ವವು ವ್ಯಕ್ತಿ, ಸಮಾಜ ಮತ್ತು ಪ್ರಕೃತಿಯ ನಡುವಿನ ಪರಸ್ಪರ ಸಂಬಂಧ ಹಾಗೂ ಸಮನ್ವಯವನ್ನು ಪ್ರತಿಪಾದಿಸುತ್ತದೆ. ಆರ್ಥಿಕ ಹಿಂದುಳಿದ ಕುಟುಂಬಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಮುಂದುವರಿಸಲು ನೆರವಾಗುವುದರ ಜೊತೆಗೆ, ಪ್ರಾಯೋಗಿಕ ಕೌಶಲ್ಯಗಳನ್ನು ಬೆಳೆಸಿಕೊಂಡು ಸಮಾಜ ಮತ್ತು ಗ್ರಾಮೀಣ ಅಭಿವೃದ್ಧಿಗೆ ಅರ್ಥಪೂರ್ಣ ಕೊಡುಗೆ ನೀಡಲು ಅವಕಾಶ ಕಲ್ಪಿಸುವುದಾಗಿದೆ ಎಂದು ವಿವರಿಸಿದರು.

ಶಿಕ್ಷಣ, ನಿರ್ವಹಣೆ, ಕಾನೂನು, ಸಾರ್ವಜನಿಕ ಆಡಳಿತ, ಭೂಗೋಳಶಾಸ್ತ್ರ, ಭೂವಿಜ್ಞಾನ, ಗ್ರಂಥಾಲಯ ವಿಜ್ಞಾನ, ಭೌತಶಾಸ್ತ್ರ ಕಂಪ್ಯೂಟರ್ ವಿಜ್ಞಾನ, ಗಣಿತಶಾಸ್ತ್ರ ಹಾಗೂ ಎಂಜಿನಿಯರಿಂಗ್ ವಿಭಾಗಗಳ ವಿದ್ಯಾರ್ಥಿಗಳು ವಿವಿಧ ಸಮುದಾಯ ಆಧಾರಿತ ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲಿದ್ದಾರೆ. ಶಾಲಾ ಮಕ್ಕಳಿಗೆ ಇಂಗ್ಲಿಷ್, ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಪೂರಕ ಬೋಧನೆ ನೀಡುವುದು, ಗ್ರಾಮೀಣ ಯುವಕರು ಮತ್ತು ಮಹಿಳೆಯರಲ್ಲಿ ಉದ್ಯಮ ಶೀಲತೆಯ ಮನೋಭಾವ ಬೆಳೆಸುವುದು, ಗ್ರಾಮಗಳ ಅಭಿವೃದ್ಧಿಗಾಗಿ ಡಿಜಿಟಲ್ ಸೂಕ್ಷ್ಮ ಯೋಜನೆಗಳನ್ನು ರೂಪಿಸುವುದು ಹಾಗೂ ಜಲಾನಯನ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವುದು ಈ ಕಾರ್ಯಕ್ರಮದ ಪ್ರಮುಖ ಚಟುವಟಿಕೆಗಳಾಗಿವೆ.

ಅಧ್ಯಾಪಕರಾದ ಪ್ರೊ. ಬಸವರಾಜ್ ಕುಬಕಡ್ಡಿ, ಡಾ. ಓಯಿನಮ್ ಬೆಡಾಜಿತ್, ಡಾ. ಸುರೇಶ್ ಅನುಗಂಟಿ, ಡಾ. ಗುರುರಾಜ್ ಮುಕರಂಬಿ ಮತ್ತು ಡಾ. ಜಯಂತ ಬೊರುವಾ ಅವರ ಮಾರ್ಗದರ್ಶನದಲ್ಲಿ ಅನುಷ್ಠಾನಗೊಳ್ಳಲಿದೆ. ಅಧ್ಯಾಪಕ ಮಾರ್ಗದರ್ಶಕರು ವಿದ್ಯಾರ್ಥಿ ತಂಡಗಳೊಂದಿಗೆ ಗ್ರಾಮೀಣ ಸಮುದಾಯಗಳಲ್ಲಿ ನೇರವಾಗಿ ತೊಡಗಿಸಿಕೊಂಡು, ಸ್ಥಳೀಯ ಸಮಸ್ಯೆಗಳನ್ನು ಗುರುತಿಸುವುದು, ಅಭಿವೃದ್ಧಿಯ ಅಗತ್ಯಗಳನ್ನು ಅರಿಯುವುದು ಹಾಗೂ ಸುಸ್ಥಿರ ಗ್ರಾಮೀಣ ಅಭಿವೃದ್ಧಿಗೆ ಸೂಕ್ತ ಮತ್ತು ಕಾರ್ಯಸಾಧ್ಯವಾದ ಪರಿಹಾರಗಳನ್ನು ರೂಪಿಸುವ ಕಾರ್ಯದಲ್ಲಿ ಸಹಕರಿಸಲಿದ್ದಾರೆ.

ಇರಾನ್ ತನ್ನ ಸಂವರ್ಧಿತ ಪರಮಾಣುವಿನ ಒಂದೇ ಒಂದು ಕಣವನ್ನೂ ಹೊರಗೆ ಬಿಟ್ಟುಕೊಡದು: ಭದ್ರತಾ ಮುಖ್ಯಸ್ಥ ಮೊಹ್ಸೆನ್ ರೆಝಾಯಿ ಎಚ್ಚರಿಕೆ



ತೆಹ್ರಾನ್, ನವೆಂಬರ್ 11: ಇರಾನ್ ತನ್ನ ದೇಶದಿಂದ ಸಂವರ್ಧಿತ ಪರಮಾಣು ವಸ್ತುವಿನ ಒಂದೇ ಒಂದು ಕಣವನ್ನೂ ಹೊರಗೆ ಹೋಗಲು ಬಿಡುವುದಿಲ್ಲ ಮತ್ತು ಇಸ್ಲಾಮಿಕ್ ರಿಪಬ್ಲಿಕ್ ಮೇಲೆ ಅಮೆರಿಕದ ಯಾವುದೇ ಹೊಸ ದಾಳಿಗಳು ನಡೆದರೆ ಅದಕ್ಕೆ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಇರಾನ್ ಭದ್ರತಾ ಮುಖ್ಯಸ್ಥ ಮೊಹ್ಸೆನ್ ರೆಝಾಯಿ ದೂರದರ್ಶನ ಸಂವಾದದಲ್ಲಿ ತಿಳಿಸಿದ್ದಾರೆ. ಗ.ಖ. ದೀರ್ಘಕಾಲದಿಂದ ಇರಾನ್ ತನ್ನ ಸಂವರ್ಧಿತ ಯುರೇನಿಯಂ ಅನ್ನು ಬಿಟ್ಟುಕೊಡುವ ರೀತಿಯ ಶಾಂತಿ ಒಪ್ಪಂದಕ್ಕೆ ಯತ್ನಿಸುತ್ತಿದ್ದು, ತೆಹ್ರಾನ್ ದೇಶದಿಂದ "ಸಂವರ್ಧಿತ ಪರಮಾಣು ವಸ್ತುವಿನ ಒಂದೇ ಒಂದು ಕಣವನ್ನೂ" ತೆಗೆದುಹಾಕಲು ಬಿಡುವುದಿಲ್ಲ ಎಂದು ಹೇಳುವ ಮೂಲಕ ರಾಜತಾಂತ್ರಿಕ ಪ್ರಯತ್ನಗಳ ಮೇಲೆ ಅನುಮಾನ ವ್ಯಕ್ತಪಡಿಸಿದೆ. "ಪರಮಾಣು ಶಕ್ತಿಯಿಂದ ಚಲಿಸುವ ಹಡಗುಗಳು ಮತ್ತು ಜಲಮಾರ್ಗ (ಸಬ್‌ಮರೀನ್) ನೌಕೆಗಳನ್ನು ವಿನ್ಯಾಸಗೊಳಿಸಲು ನಮಗೆ ಸಂವರ್ಧಿತ ವಸ್ತುಗಳ ಅಗತ್ಯವಿದೆ" ಎಂದು ರೆಝಾಯಿ ಹೇಳಿದರು. ಅಲ್ಲದೆ, ತಮ್ಮ ಸಂವರ್ಧಿತ ಪರಮಾಣು ವಸ್ತುವು ದೇಶದಲ್ಲೇ ಉಳಿಯುತ್ತದೆ ಮತ್ತು "ನಾವು ಅದನ್ನು ನಾವೇ ಬಳಸಿಕೊಳ್ಳುತ್ತೇವೆ" ಎಂದು ತೆಹ್ರಾನ್ ಮಾಸ್ಕೋಗೆ ತಿಳಿಸಿದೆ ಎಂದು ಸೇರಿಸಿದರು. ದೇಶದ ಶಸ್ತ್ರಾಸ್ತ್ರ ದರ್ಜೆಗೆ ಹತ್ತಿರವಿರುವ ಯುರೇನಿಯಂ ವಿದೇಶಕ್ಕೆ ಕಳುಹಿಸಬಾರದು ಎಂದು ಇರಾನ್‌ನ ನಾಯಕ ಮೇ ತಿಂಗಳಲ್ಲಿ ನಿರ್ದೇಶನ ನೀಡಿದ್ದಾರೆ ಎಂದು ಇರಾನ್‌ನ ಇಬ್ಬರು ಹಿರಿಯ ಮೂಲಗಳು ತಿಳಿಸಿವೆ. ಗ.ಖ. ನ ಕಳವಳಗಳನ್ನು ಶಮನಗೊಳಿಸುವ ಒಪ್ಪಂದದ ಭಾಗವಾಗಿ ರಷ್ಯಾ ಇರಾನ್‌ನಿಂದ ಯುರೇನಿಯಂ ತೆಗೆದುಹಾಕುವುದಾಗಿ ಈ ಹಿಂದೆ ತೀಳಿಸಿತ್ತು, ಆದರೆ ಅದನ್ನು ತೆಗೆದುಹಾಕಬೇಕೇ ಅಥವಾ ಬೇಡವೇ ಎಂಬುದನ್ನು ನಿರ್ಧರಿಸುವುದು ತೆಹ್ರಾನ್‌ಗೆ ಬಿಟ್ಟದ್ದು ಎಂದು ಹೇಳಿತ್ತು.

ದಾಳಿಗಳಿಗೆ ಬಳಸಿದರೆ ಯುರೋಪ್‌ನಲ್ಲಿರುವ ಅಮೆರಿಕ ನೆಲೆಗಳ ಮೇಲೆಯೂ ದಾಳಿ ಮಾಡುವುದಾಗಿ ಇರಾನ್ ಭದ್ರತಾ ಮುಖ್ಯಸ್ಥರ ಬೆದರಿಕೆ:

ಇಸ್ಲಾಮಿಕ್ ರಿಪಬ್ಲಿಕ್ ವಿರುದ್ಧದ ದಾಳಿಗಳಿಗೆ ಬಳಸಿದರೆ ಮಧ್ಯಪ್ರಾಚ್ಯದ ಆಚೆಗೆ, ಅಂದರೆ ಯುರೋಪ್‌ನಲ್ಲಿರುವ ಅಮೆರಿಕ ನೆಲೆಗಳ ಮೇಲೆಯೂ ದಾಳಿ ಮಾಡುವುದಾಗಿ ಇರಾನ್ ಭದ್ರತಾ ಮುಖ್ಯಸ್ಥ ಮೊಹ್ಸೆನ್ ರೆಝಾಯಿ ಬೆದರಿಕೆ ಹಾಕಿದ್ದಾರೆ. "ಇರಾನ್ ಮೇಲೆ ಬಾಂಬ್ ದಾಳಿ ಮಾಡಲು ಅಮೆರಿಕದ ವಿಮಾನಗಳು ಯುರೋಪಿಯನ್ ದೇಶದಲ್ಲಿರುವ ಅಥವಾ ಯಾವುದೋ ದೂರದ ಪ್ರದೇಶದಲ್ಲಿರುವ ಅಮೆರಿಕದ ಮಿಲಿಟರಿ ನೆಲೆಯಿಂದ ಹಾರಿದರೆ, ನಾವು ಆ ನೆಲೆಗಳ ಮೇಲೆಯೂ ದಾಳಿ ಮಾಡುತ್ತೇವೆ" ಎಂದು ತಿಳಿಸಿದರು. "ಯಾವುದೇ ಹೊಸಅಮೆರಿಕ ದಾಳಿಗಳಿಗೆ ದೂರದಲ್ಲಿರುವ ಅಮೆರಿಕ ನೆಲೆಗಳನ್ನು ಗುರಿಯಾಗಿಸುವ ಮೂಲಕವೇ ಉತ್ತರಿಸಲಾಗುವುದು" ಎಂದು ಅವರು ಎಚ್ಚರಿಕೆ ಕೊಟ್ಟರು.

ಅಮೆರಿಕದ ಹೊಸ ದಾಳಿಗೆ ಇರಾನ್ ನೀಡುವ ಪ್ರತಿಕ್ರಿಯೆಯು "ನಾವು ವರೆಗೆ ದಾಳಿ ಮಾಡದಿರುವ ಅಮೆರಿಕದ ದೂರದ ಮಿಲಿಟರಿ ಸ್ಥಾಪನೆಗಳನ್ನು ಗುರಿಯಾಗಿಸುತ್ತದೆ" ಎಂದು ರೆಝಾಯಿ ಸಂದರ್ಶನದಲ್ಲಿ ಹೇಳಿದ್ದಾರೆ. "ನಮ್ಮ ಕ್ಷಿಪಣಿಗಳ ವ್ಯಾಪ್ತಿಯಿಂದ ದೂರದಲ್ಲಿವೆ ಎಂದು ಅವರು ಭಾವಿಸುವ ಕೆಲವು ದ್ವೀಪಗಳ ಮೇಲೆಯೂ ನಾವು ದಾಳಿ ಮಾಡಬಹುದು" ಎಂದು ಅವರು ತೆಹ್ರಾನ್‌ನಲ್ಲಿ ನಡೆದ ಸಂದರ್ಶನದಲ್ಲಿ ಸೇರಿಸಿದರು.

ಯುದ್ಧವನ್ನು ಕೊನೆಗೊಳಿಸುವ ಮಾತುಕತೆ ವಿಷಯದಲ್ಲಿ ಚೆಂಡು ಅಮೆರಿಕದ ಅಂಗಳದಲ್ಲಿದೆ: ಇರಾನ್ ಸಂಸತ್ತಿನ ಸ್ಪೀಕರ್ ಗಹಲಿಬಾಫ್ ಹೇಳಿಕೆ

ತೆಹ್ರಾನ್, ನವೆಂಬರ್ 11: ಇರಾನ್ ಸಂಸತ್ತಿನ ಸ್ಪೀಕರ್ ಮತ್ತು ಇರಾನ್‌ನ ಮಾತುಕತೆ ತಂಡದ ಮುಖ್ಯಸ್ಥರಾದ ಮೊಹಮ್ಮದ್ ಬಘೇರ್ ಗಹಲಿಬಾಫ್, ಯುದ್ಧವನ್ನು ಕೊನೆಗೊಳಿಸುವ ಮಾತುಕತೆಗಳ ವಿಷಯದಲ್ಲಿ ಚೆಂಡು ಅಮೆರಿಕದ ಅಂಗಳದಲ್ಲಿದೆ ಎಂದು ಹೇಳಿದ್ದಾರೆ. "ನಾವು ಅಮೆರಿಕಕ್ಕೆ ನಮ್ಮ ಬೇಡಿಕೆಗಳನ್ನು ಸ್ಪಷ್ಟವಾಗಿ ಮತ್ತು ಪಾರದರ್ಶಕವಾಗಿ ತಿಳಿಸಿದ್ದೇವೆ. ನಾವು 'ಯುದ್ಧವೂ ಇಲ್ಲ, ಶಾಂತಿಯೂ ಇಲ್ಲ' ಎನ್ನುವ ಸ್ಥಿತಿಯಿಂದ ಹೊರಬರಲು ದೃಢನಿಶ್ಚಯ ಮಾಡಿದ್ದೇವೆ – ಇದು ಕೇವಲ ಮಾತುಕತೆಗಳ ಮೂಲಕವಲ್ಲ, ಬದಲಿಗೆ ಸುಸ್ಥಿರ ಪ್ರತಿರೋಧದ (ಸಸ್ಟೈನಬಲ್ ಡಿಟರೆನ್ಸ್) ಮೂಲಕ" ಎಂದು ಅವರು ತಿಳಿಸಿದ್ದಾರೆ. ವಾಷಿಂಗ್ಟನ್ ನಮ್ಮ ಮೇಲೆ ದಿಗ್ಬಂಧನ ವಿಧಿಸಿದ್ದು, ಆಹಾರ ಲಭ್ಯತೆಗೆ ತಡೆ ಒಡ್ಡಿದೆ ಹಾಗೂ ವ್ಯಾಪಾರ ಮತ್ತು ಆರೋಗ್ಯ ಸೇವೆಗಳಿಗೆ ಅಡ್ಡಿಪಡಿಸುತ್ತಿದೆ. ಹಿಂದೆ ಒಪ್ಪಿಕೊಂಡಿರುವ ವಿಚಾರಗಳಿಗೆ ಬದ್ಧರಾಗಿರುವುದು ಮತ್ತು ನಂಬಿಕೆಯನ್ನು ಕುಂದಿಸುವ ಕ್ರಮಗಳಿಂದ ದೂರವಿರುವುದಾದರೆ ವಾಷಿಂಗ್ಟನ್ ಜೊತೆ ಒಪ್ಪಂದ ಸಾಧ್ಯವಿದೆ. ಪ್ರಸ್ತುತ ಚೆಂಡು ಅಮೆರಿಕದ ಅಂಗಳದಲ್ಲಿದೆ; ಅವರು ನಿರ್ಧಾರ ಕೈಗೊಂಡು ಅದನ್ನು ಘೋಷಿಸಬೇಕು. ಇಲ್ಲಿಯವರೆಗೆ ವಾಷಿಂಗ್ಟನ್ ನಮ್ಮ ಸಂದೇಶಕ್ಕೆ ಯಾವುದೇ ಔಪಚಾರಿಕ ಅಥವಾ ನಿರ್ದಿಷ್ಟ ಪ್ರತಿಕ್ರಿಯೆ ನೀಡಿಲ್ಲ. ನಮ್ಮ ಮಾತುಕತೆ ತಂಡದಲ್ಲಿ ಯಾವುದೇ ಬದಲಾವಣೆಗಳಾಗಿಲ್ಲ; ನಾನೇ ಮಾತುಕತೆಯ ಉಸ್ತುವಾರಿಯನ್ನು ಮುಂದುವರಿಸುತ್ತಿದ್ದೇನೆ. ಹಾರ್ಮುಜ್ ಜಲಸಂಧಿಯನ್ನು ತೆರೆಯಲು ಮತ್ತು ಮಾತುಕತೆಗಳನ್ನು ಪುನರಾರಂಭಿಸಲು ವಾಷಿಂಗ್ಟನ್ ನಮ್ಮ ಏಳು ನಿಬಂಧನೆಗಳನ್ನು ಪೂರೈಸಲೇಬೇಕು. ಒಪ್ಪಂದಕ್ಕೆ ತಡೆಯಾಗಿರುವುದು ವಾಷಿಂಗ್ಟನ್ ಮೇಲಿನ ನಮ್ಮ ಅಪನಂಬಿಕೆ ಹಾಗೂ ಅದು ಹೇರಲು ಯತ್ನಿಸುತ್ತಿರುವ ಅತಿಯಾದ ಬೇಡಿಕೆಗಳೇ ಆಗಿದೆ.

ಹಾರ್ಮುಜ್ ಜಲಸಂಧಿಯು ಯುದ್ಧಪೂರ್ವದ ಸ್ಥಿತಿಗೆ ಮರಳುವುದಿಲ್ಲ ಎಂದು ತೆಹ್ರಾನ್ ಹೇಳಿಕೆ ಹಾರ್ಮುಜ್ ಜಲಸಂಧಿಯು ತನ್ನ ಯುದ್ಧಪೂರ್ವದ ಸ್ಥಿತಿಗೆ ಮರಳುವುದಿಲ್ಲ ಎಂದು ಇರಾನ್ ಸಂಸತ್ತಿನ ಸ್ಪೀಕರ್ ತಿಳಿಸಿದ್ದು, ಅದರ ಭವಿಷ್ಯವನ್ನು ತೆಹ್ರಾನ್ ಪ್ರಸ್ತಾಪಿಸಿರುವ ಏಳು ಅಂಶಗಳ ಚೌಕಟ್ಟಿನೊಳಗೆ ನಿರ್ಧರಿಸಲಾಗುವುದು ಎಂದು ಬುಧವಾರ ವರದಿಗಳು ತಿಳಿಸಿವೆ.

ಇರಾನ್ ಬೆದರಿಕೆ ಹಿನ್ನೆಲೆಯಲ್ಲಿ ಅಮೆರಿಕ ಖಜಾನೆ ಮುಖ್ಯಸ್ಥ ಬೆಸೆಂಟ್ ಮಿಲಿಟರಿ ನೆಲೆಗೆ ಸ್ಥಳಾಂತರ: ಮೂಲಗಳ ಮಾಹಿತಿ

ವಾಷಿಂಗ್ಟನ್, ನವೆಂಬರ್ 11: ಇರಾನ್‌ನಿಂದ ಜೀವ ಬೆದರಿಕೆಗಳು ಎದುರಾದ ಹಿನ್ನೆಲೆಯಲ್ಲಿ, ಯುಎಸ್ ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಇತ್ತೀಚೆಗೆ ತಮ್ಮ ವಾಷಿಂಗ್ಟನ್ ಡಿಸಿ ನಿವಾಸದಿಂದ ಅಮೆರಿಕದ ಮಿಲಿಟರಿ ನೆಲೆಗೆ ಸ್ಥಳಾಂತರಗೊಂಡಿದ್ದಾರೆ ಎಂದು ಈ ವಿಷಯದ ಬಗ್ಗೆ ತಿಳಿದಿರುವ ಇಬ್ಬರು ವ್ಯಕ್ತಿಗಳು ಮಂಗಳವಾರ ತಿಳಿಸಿದ್ದಾರೆ. ಇರಾನ್‌ನಿಂದ ಯುಎಸ್ ಸಿಬ್ಬಂದಿ ಮತ್ತು ಅಮೆರಿಕದ ನಾಗರಿಕರ ಮೇಲೆ ನಡೆಯುತ್ತಿರುವ ಸಂಚುಗಳು ಮುಂದುವರಿದ ಹಂತವನ್ನು ತಲುಪಿವೆ ಎಂದು ಟ್ರಂಪ್ ಆಡಳಿತದ ಹಿರಿಯ ಗುಪ್ತಚರ ಅಧಿಕಾರಿಯೊಬ್ಬರು ಕಳೆದ ತಿಂಗಳು ರಾಯ್ ನೀಡಿದ ಜ್ಞಾಪಕ ಪತ್ರದಲ್ಲಿ (ಮೆಮೋ) ಎಚ್ಚರಿಸಿದ್ದರು. ಇರಾನ್‌ನ ಹಡಗುಗಳ ಮೇಲಿನ ದಾಳಿಯನ್ನು ಅಂತ್ಯಗೊಳಿಸಲು ಮತ್ತು ಹಾರ್ಮುಜ್ ಜಲಸಂಧಿಯನ್ನು



ಮರುತೆರೆಯುವಂತೆ ತೆಹ್ರಾನ್ ಮೇಲೆ ಒತ್ತಡ ಹೇರಲು, ಬೆಸೆಂಟ್ ಅವರು ಕಳೆದ ಆಗಸ್ಟ್‌ನಿಂದ ಇರಾನ್ ವಿರುದ್ಧದ ಯುಎಸ್ ನಿರ್ಬಂಧಗಳು ಮತ್ತು ಆರ್ಥಿಕ ಒತ್ತಡದ ಅಭಿಯಾನವಾದ 'ಆಪರೇಷನ್ ಎಕನಾಮಿಕ್ ಔಟ್‌ಕಾಸ್ಟ್' ಅನ್ನು ಮುನ್ನಡೆಸುತ್ತಿದ್ದಾರೆ. ಇರಾನ್ ಬಂದರುಗಳ ಮೇಲಿನ ಯುಎಸ್ ನೌಕಾ ದಿಗ್ಬಂಧನದೊಂದಿಗೆ ಏಕಕಾಲದಲ್ಲಿ ನಡೆಯುತ್ತಿರುವ ಈ ಆರ್ಥಿಕ ಒತ್ತಡದ ಅಭಿಯಾನವು, ಮಧ್ಯಪ್ರಾಚ್ಯದ ಬ್ಯಾಂಕ್ ಶಾಖೆಗಳು ಮತ್ತು ಇರಾನ್‌ನೊಂದಿಗೆ ವಹಿವಾಟು ನಡೆಸುವ ಇತರ ಹಣಕಾಸು ಸೇವಾ ಸಂಸ್ಥೆಗಳ ಮೇಲಿನ ನಿರ್ಬಂಧಗಳನ್ನು ಒಳಗೊಂಡಿದೆ. "ಇರಾನಿಯನ್ ಆಡಳಿತದ ಬೆದರಿಕೆಗಳಿಂದ ಕಾರ್ಯದರ್ಶಿಯವರು ಹಿಂದೆ ಸರಿಯುವುದಿಲ್ಲ ಮತ್ತು 'ಆಪರೇಷನ್ ಎಕನಾಮಿಕ್ ಔಟ್‌ಕಾಸ್ಟ್' ಅನ್ನು ಮುಂದುವರಿಸಲು ಹಾಗೂ ದಿಗ್ಬಂಧನವನ್ನು ಕಾಯ್ದುಕೊಳ್ಳಲು ಬದ್ಧರಾಗಿದ್ದಾರೆ. ಇವೆರಡೂ ಒಟ್ಟಾಗಿ ಇರಾನ್‌ನ ಆರ್ಥಿಕತೆಯನ್ನು ಕುಸಿಯುವಂತೆ ಮಾಡುತ್ತಿವೆ" ಎಂದು ಯುಎಸ್ ಖಜಾನೆಯ ವಕ್ತಾರರು ಇಮೇಲ್ ಮೂಲಕ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಉಕ್ರೇನ್ ಯುದ್ಧದ ಕುರಿತು ಪುಟಿನ್ ಜೊತೆ ಮಾತುಕತೆಗಾಗಿ ರಷ್ಯಾಗೆ ಭೇಟಿ: ಖಚಿತಪಡಿಸಿದ ಅಮೆರಿಕದ ದೂತ ಜೇರೆಡ್ ಕುಶ್ನರ್

ಅಬುಧಾಬಿ, ನವೆಂಬರ್ 11: ಅಬುಧಾಬಿಯಲ್ಲಿ ರಷ್ಯಾ, ಉಕ್ರೇನ್ ಮತ್ತು ಅಮೆರಿಕ ಒಳಗೊಂಡ ಎರಡು ದಿನಗಳ ತ್ರಿಪಕ್ಷೀಯ ಮಾತುಕತೆಗಳು ಮುಕ್ತಾಯಗೊಂಡ ಬೆನ್ನಲ್ಲೇ, ಉಕ್ರೇನ್‌ನಲ್ಲಿನ ಸಂಘರ್ಷವನ್ನು ಅಂತ್ಯಗೊಳಿಸುವ ಕುರಿತು ಹೆಚ್ಚಿನ ಚರ್ಚೆಗಾಗಿ ತಾವೂ ಮತ್ತು ಸಹ ದೂತ ಸ್ಟೀವ್ ವಿಟ್ಕಾಫ್ ಮಾಸ್ಕೋಗೆ ಪ್ರಯಾಣಿಸುವುದಾಗಿ ಯುಎಸ್ ದೂತ ಜೇರೆಡ್ ಕುಶ್ನರ್ ಖಚಿತಪಡಿಸಿದ್ದಾರೆ. ಫೆಬ್ರವರಿ ನಂತರ ನಡೆದ ಮೊದಲ ಔಪಚಾರಿಕ ಮೂರು ಗಂಟೆಗಳ ಈ ಸಭೆಯು ಇಂದು ಮುಕ್ತಾಯಗೊಂಡಿತು. ಕಳೆದ ತಿಂಗಳು ವಿಟ್ಕಾಫ್ ಮತ್ತು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ನಡುವಿನ ಸಭೆ ಸೇರಿದಂತೆ, ನವೀಕೃತ ಯುಎಸ್ ಮಧ್ಯಸ್ಥಿಕೆ ಪ್ರಯತ್ನಗಳ ನಂತರ ಈ ಮಾತುಕತೆಗಳು ನಡೆದಿವೆ. ಯುಎಇ ರಾಜಧಾನಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕುಶ್ನರ್, "ನಾವು ಇಂದು ಚರ್ಚಿಸಿದ ವಿಷಯಗಳ ಬಗ್ಗೆ ಪುನರಾವಲೋಕನ ಮಾಡಲು ಮತ್ತು ಅಲ್ಲಿ ಕೆಲವು ಅವಕಾಶಗಳು ಕಂಡುಬರುತ್ತಿರುವುದರಿಂದ ನಾವು ಚರ್ಚಿಸಿದ ಕೆಲವು ವಿಷಯಗಳಲ್ಲಿ ಹೆಚ್ಚಿನ ಪ್ರಗತಿ ಸಾಧಿಸಲು ನಾಳೆ ಸ್ಟೀವ್ ಮತ್ತು ನಾನು ಅಧ್ಯಕ್ಷ ಪುಟಿನ್ ಅವರನ್ನು ಭೇಟಿಯಾಗಲು ಮಾಸ್ಕೋಗೆ ಪ್ರಯಾಣಿಸುತ್ತಿದ್ದೇವೆ" ಎಂದು ಹೇಳಿದರು.

ಸುಮಾರು ಐದು ವರ್ಷಗಳ ಕಾಲ ನಡೆಯುತ್ತಿರುವ ಸಂಘರ್ಷವನ್ನು ಕೊನೆಗೊಳಿಸಲು ಟ್ರಂಪ್ ಆಡಳಿತವು ತನ್ನ ಪ್ರಯತ್ನಗಳನ್ನು ತೀವ್ರಗೊಳಿಸುತ್ತಿರುವಂತೆಯೇ, ರಷ್ಯನ್, ಉಕ್ರೇನಿಯನ್ ಮತ್ತು ಅಮೆರಿಕದ ಮಾತುಕತೆಗಾರರ ನಡುವೆ ಫೆಬ್ರವರಿ ನಂತರದ ಮೊಟ್ಟಮೊದಲ ಎರಡು ದಿನಗಳ ಮಾತುಕತೆಗಳ ನಂತರ ಈ ಘೋಷಣೆ ಹೊರಬಿದ್ದಿದೆ. ಇತ್ತೀಚಿನ ವಾರಗಳಲ್ಲಿ, ಯುಎಸ್ ಆಡಳಿತವು



ರಷ್ಯಾಕ್ಕೆ ಅನುಕೂಲಕರವಾದ ಶರತ್ತುಗಳ ಮೇಲೆ ಯುದ್ಧವನ್ನು ಕೊನೆಗೊಳಿಸಲು ಒತ್ತಡ ಹೇರಬಹುದು ಎಂಬ ಕಳವಳವನ್ನು ಯುರೋಪಿಯನ್ ರಾಜಧಾನಿಗಳಲ್ಲಿ ಹುಟ್ಟುಹಾಕುತ್ತಾ, ಟ್ರಂಪ್ ಮಾಸ್ಕೋಗೆ ಗಣನೀಯ ರಿಯಾಯಿತಿಗಳನ್ನು ಘೋಷಿಸಿದ್ದಾರೆ.

ಬ್ಲಿಟ್ಜ್ ಚೆಸ್ ನೀಮನ್, ಸೋ ಅವರನ್ನು ಮಣಿಸಿದ ವೈಶಾಲಿ



ಬ್ಯುಡಾಪೆಸ್ಟ್, ನವೆಂಬರ್ 11: ಬ್ಯುಡಾಪೆಸ್ಟ್‌ನಲ್ಲಿ ನಡೆಯುತ್ತಿರುವ 'Total Chess' ಪೈಲಟ್ ಟೂರ್ನಿಯಲ್ಲಿ ಪಾಲ್ಗೊಂಡಿರುವ ಇಬ್ಬರು ಮಹಿಳಾ ಆಟಗಾರರಲ್ಲಿ ಒಬ್ಬರಾದ ವೈಶಾಲಿ, ಮಂಗಳವಾರ ನಡೆದ ಬ್ಲಿಟ್ಜ್ ಪಂದ್ಯಗಳಲ್ಲಿ ಹ್ಯಾನ್ಸ್ ನೀಮನ್ ಮತ್ತು ವೆಸ್ಲಿ ಸೋ ಅವರನ್ನು ಸೋಲಿಸುವ ಮೂಲಕ ಮೊದಲ ದಿನವೇ ಗಮನಾರ್ಹ ಪ್ರದರ್ಶನ ನೀಡಿದರು. ಈ ಪಂದ್ಯಾವಳಿಯು ಬ್ಲಿಟ್ಜ್, ರಾಪಿಡ್ ಮತ್ತು ಫಾಸ್ಟ್ ಕ್ಲಾಸಿಕ್ ಎಂಬ ಮೂರು ಕಾಲಮಿತಿಗಳಲ್ಲಿ ನಡೆಯಲಿದೆ. ಪಂದ್ಯಾವಳಿಯಲ್ಲಿ ಅತ್ಯಂತ ಕಡಿಮೆ ರೇಟಿಂಗ್ ಹೊಂದಿರುವ ಭಾರತೀಯ ಗ್ರ್ಯಾಂಡ್‌ಮಾಸ್ಟರ್ (GM) ವೈಶಾಲಿ, ಇಬ್ಬರೂ ಅಮೆರಿಕನ್ ಜಿಎಂಗಳನ್ನು ಮಣಿಸುವುದರ ಜೊತೆಗೆ ರಿಚರ್ಡ್ ರಾಪೋರ್ಟ್, ಜಾನ್–ಕ್ರಿಸ್ಟೋಫ್ ದುಡಾ ಮತ್ತು ಅನಿಶ್ ಗಿರಿ ಅವರ ವಿರುದ್ಧದ ಪಂದ್ಯಗಳನ್ನು ಡ್ರಾ ಮಾಡಿಕೊಂಡರು. ವೈಶಾಲಿ ಅವರ ಈ ಅತ್ಯುತ್ತಮ ಪ್ರದರ್ಶನಕ್ಕೆ ವ್ಯತಿರಿಕ್ತವಾಗಿ, ಹಾಲಿ ಮಹಿಳಾ ಬ್ಲಿಟ್ಜ್ ವಿಶ್ವ ಚಾಂಪಿಯನ್ ಬಿಬಿಸಾರ ಅಸ್ಸೌಬಾಯೆವಾ ಅವರಿಗೆ ಬ್ಲಿಟ್ಜ್ ಟೂರ್ನಿಯಲ್ಲಿ ಅತ್ಯಂತ ಕಳಪೆ ಆರಂಭ ಸಿಕ್ಕಿತು. ಅವರು ಸತತ ಎಂಟು ಪಂದ್ಯಗಳಲ್ಲಿ ಸೋತು, ಒಂಬತ್ತು ಸುತ್ತುಗಳಿಂದ ಕೇವಲ ಅರ್ಧ ಅಂಕವನ್ನು ಮಾತ್ರ ಗಳಿಸಿದರು. ಬುಧವಾರದಿಂದ ಆರಂಭವಾದ 'ಫಾಸ್ಟ್ ಕ್ಲಾಸಿಕ್' ವಿಭಾಗದಲ್ಲಿ (ಪ್ರತಿ ನಡೆಗೆ 30 ಸೆಕೆಂಡುಗಳ ಹೆಚ್ಚಳದೊಂದಿಗೆ 45 ನಿಮಿಷಗಳು) ಕಾರ್ಲ್‌ಸೆನ್ ಮತ್ತು ಅನಿಶ್ ಗಿರಿ ನಡುವಿನ ಪಂದ್ಯವು ರೋಚಕ ಡ್ರಾದಲ್ಲಿ ಮುಕ್ತಾಯಗೊಂಡಿತು. ಎರಿಗೈಸಿ ಮತ್ತು ನೀಮನ್ ತಮ್ಮ ಮೊದಲ ಪಂದ್ಯವನ್ನು ಡ್ರಾ ಮಾಡಿಕೊಂಡರೆ, ಲೆವನ್ ಅರೋನಿಯನ್ ಅವರು ಜೋರ್ಡನ್ ವಾನ್ ಫಾರೆಸ್ಟ್ ಅವರನ್ನು ಸೋಲಿಸಿದರು. ನವೆಂಬರ್ 15 ರವರೆಗೆ ಪ್ರತಿದಿನ ಆಟಗಾರರು ತಲಾ ಎರಡು ಫಾಸ್ಟ್ ಕ್ಲಾಸಿಕ್ ಪಂದ್ಯಗಳನ್ನು (ಎರಡು ಗಂಟೆಗಳಿಗೆ ಇಳಿಸಲಾದ ಕ್ಲಾಸಿಕಲ್ ಚೆಸ್) ಆಡಲಿದ್ದು, ಬಳಿಕ ಪಂದ್ಯಾವಳಿಯು ನಾಕೌಟ್ ಹಂತಕ್ಕೆ ಪ್ರವೇಶಿಸಲಿದೆ.

ಚೀನಾ ಚಿಪ್ ಸಂಬಂಧ, ಸಿಇಓ ಪ್ರಕರಣದ ವಿವಾದದಿಂದ ಎನ್‌ವಿಡಿಯಾ ವಿರುದ್ಧ ತನಿಖೆ ಮುಂದುವರಿಕೆ

ಎನ್‌ವಿಡಿಯಾ ಕೇವಲ ಎರಡು ಅವಧಿಯಲ್ಲಿ 430 ಶತಕೋಟಿ ಡಾಲರ್ ಮಾರುಕಟ್ಟೆ ಮೌಲ್ಯ ನಷ್ಟ

ನ್ಯೂಯಾರ್ಕ್, ನವೆಂಬರ್ 11: ಬೀಜಿಂಗ್‌ನ ಗೂಢಚಾರಿ ಎಂದು ಆರೋಪಿಸಲಾದ ಚೀನಾದ ವ್ಯಾಪಾರ ಮಹಿಳೆಯೊಬ್ಬರೊಂದಿಗೆ ಸಿಇಓ ಜೆನ್ಸೆನ್ ಹುವಾಂಗ್ ಅವರ ಸಂಬಂಧದ ಬಗ್ಗೆ ಹೊಸ ವರದಿಗಳು ಪ್ರಶ್ನೆಗಳನ್ನು ಹುಟ್ಟುಹಾಕಿರುವ ಕಾರಣ, ಎನ್‌ವಿಡಿಯಾ ಸಂಸ್ಥೆಯು ಕೇವಲ ಎರಡು ಸೆಷನ್‌ಗಳಲ್ಲಿ ಸುಮಾರು 430 ಶತಕೋಟಿ ಮಾರುಕಟ್ಟೆ ಮೌಲ್ಯವನ್ನು ಕಳೆದುಕೊಂಡಿದೆ. ಹುವಾಂಗ್‌ಗೆ ಆಲಿಸ್ ಹುವಾಂಗ್ ಅವರೊಂದಿಗಿರುವ ಸಂಬಂಧವು ಚೀನಾಕ್ಕೆ ಕನಿಷ್ಠ 7.5 ಶತಕೋಟಿ ಮೌಲ್ಯದ ಎನ್‌ವಿಡಿಯಾ ಚಿಪ್‌ಗಳ ಸಾಗಣೆಗೆ ಸಹಾಯ ಮಾಡಿದೆ ಎಂಬ ಆರೋಪಗಳು ಮಂಗಳವಾರ ಹಲವು ಮುಖಗಳಲ್ಲಿ ತೀವ್ರಗೊಂಡಿವೆ. ಈ ಆರೋಪಗಳು ಹುವಾಂಗ್ ಅವರ ವೈಯಕ್ತಿಕ ನಡವಳಿಕೆಯನ್ನು ಎನ್‌ವಿಡಿಯಾಕ್ಕೆ ದೊಡ್ಡ ಅಪಾಯವನ್ನಾಗಿ ಪರಿವರ್ತಿಸಿದೆ. ಇದು ಕಂಪನಿಯ ಆಡಳಿತದ ಬಗ್ಗೆ ಮತ್ತು ಮೂರು ದಶಕಗಳಿಗೂ ಹೆಚ್ಚು ಕಾಲ ಅದನ್ನು ಮುನ್ನಡೆಸಿ, ಎಐ ಚಿಪ್‌ಗಳ ಪ್ರಬಲ ಪೂರೈಕೆದಾರರನ್ನಾಗಿ ರೂಪಿಸಿರುವ ಸಿಇಓ ಮೇಲಿನ ಅವಲಂಬನೆಯ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಅವರು ಕಂಪನಿಯಲ್ಲಿ 3.6% ರಷ್ಟು ಷೇರುಗಳನ್ನು ಹೊಂದಿದ್ದಾರೆ



(ಆದರೆ ಬಹುಮತದ ಮತದಾನದ ನಿಯಂತ್ರಣವನ್ನು ಹೊಂದಿಲ್ಲ) ಮತ್ತು ಅಸಾಮಾನ್ಯವಾಗಿ ಸರಳವಾದ ಸಾಂಸ್ಥಿಕ ರಚನೆಯನ್ನು ಮುನ್ನಡೆಸುತ್ತಿದ್ದಾರೆ. ಇಲ್ಲಿ ಡಜನ್‌ಗಟ್ಟಲೆ ಕಾರ್ಯನಿರ್ವಾಹಕರು ನೇರವಾಗಿ ಅವರಿಗೆ ವರದಿ ಮಾಡುತ್ತಾರೆ.

ಆಲಿಸ್ ಹುವಾಂಗ್ ಅವರನ್ನು ಚೀನಾದ ರಾಜ್ಯ ಭದ್ರತಾ ಸಚಿವಾಲಯವು ನೇಮಕ ಮಾಡಿಕೊಂಡಿತು, ಮತ್ತು ಅವರು 240,000 ನಿಷೇಧಿತ ಎನ್‌ವಿಡಿಯಾ ಚಿಪ್‌ಗಳನ್ನು, ಮುಖ್ಯವಾಗಿ H100 ಮತ್ತು H200 GPU ಗಳನ್ನು ಚೀನಾಕ್ಕೆ ಸಾಗಿಸಲು ಸಹಾಯ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಜೆನ್ಸೆನ್ ಅವರ ವಲಯದಲ್ಲಿದ್ದ ಆ ಮೂರು ವರ್ಷಗಳಲ್ಲಿ, ಆಕೆಗೆ ಸಂಬಂಧಿಸಿದ ಕಂಪನಿಗಳ ಜಾಲವು 7.5 ಶತಕೋಟಿ ಮೌಲ್ಯದ ಎನ್‌ವಿಡಿಯಾ AI ಹಾರ್ಡ್‌ವೇರ್ ಪಡೆದುಕೊಂಡಿದೆ ಎಂದು ಆಗಿದೆ.


ಅಮೆರಿಕದ ಕಪ್ಪುಪಟ್ಟಿಯಲ್ಲಿದ್ದರೂ ಎನ್‌ವಿಡಿಯಾ H200 ಚಿಪ್ ಖರೀದಿಸಿದ ಚೀನಾದ ವಿಶ್ವವಿದ್ಯಾಲಯ

ಬೀಜಿಂಗ್, ನವೆಂಬರ್ 11 : ಚೀನಾದ ಪೀಪಲ್ಸ್ ಲಿಬರೇಶನ್ ಆರ್ಮಿ (ಸೇನೆ) ಜೊತೆ ನಿಕಟ ಸಂಬಂಧ ಹೊಂದಿರುವ ಚೀನಾದ ವಿಶ್ವವಿದ್ಯಾಲಯವೊಂದು, ಅಮೆರಿಕದ ರಫ್ತು ಕಪ್ಪು ಪಟ್ಟಿಯಲ್ಲಿದ್ದರೂ ಕಳೆದ ತಿಂಗಳು ಎನ್‌ವಿಡಿಯಾದ ಅತ್ಯಂತ ಶಕ್ತಿಶಾಲಿ H200 AI ಚಿಪ್‌ಗಳನ್ನು ಖರೀದಿಸಿದೆ ಎಂದು ಖರೀದಿ ದಾಖಲೆಗಳು ತೋರಿಸುತ್ತವೆ. ಇದು ಚೀನಾಕ್ಕೆ ಸುಧಾರಿತ ತಂತ್ರಜ್ಞಾನ ಸಿಗದಂತೆ ತಡೆಯಲು ವಾಷಿಂಗ್ಟನ್ ಮಾಡುತ್ತಿರುವ ಪ್ರಯತ್ನಗಳಲ್ಲಿನ ಲೋಪಗಳನ್ನು ಎತ್ತಿ ತೋರಿಸುತ್ತದೆ. ಚೀನಾಕ್ಕೆ ಸೇರಿದ ಗೂಢಚಾರಿ ಕಾರ್ಯಾಚರಣೆಯೊಂದು ತ ತಮ್ಮನ್ನು ಗುರಿಯಾಗಿಸಿಕೊಂಡಿದೆ ಎಂಬ ವರದಿಗಳ ನಂತರ, ಚೀನಾಕ್ಕೆ AI ಚಿಪ್‌ಗಳ ಮಾರಾಟದ ಮೇಲಿನ ನಿಯಮಗಳನ್ನು ಸಡಿಲಗೊಳಿಸುವಂತೆ ಲಾಬಿ ಮಾಡುತ್ತಿರುವ ಎನ್‌ವಿಡಿಯಾ ಸಿಇಓ ಜೆನ್ಸನ್ ಹುವಾಂಗ್ ಅವರು ವಾಷಿಂಗ್ಟನ್‌ನಲ್ಲಿ ತೀವ್ರ ಪರಿಶೀಲನೆಗೆ ಒಳಗಾಗಿದ್ದಾರೆ. ಅಮೆರಿಕವು ಚೀನಾಕ್ಕೆ ತಂತ್ರಜ್ಞಾನ ಮಾರಾಟ ಮಾಡುವುದನ್ನು ಮುಂದುವರಿಸಿದರೆ ಮಾತ್ರ ಅಮೆರಿಕದ ತಾಂತ್ರಿಕ ನಾಯಕತ್ವವನ್ನು ಉಳಿಸಿಕೊಳ್ಳಲು ಮತ್ತು ಚೀನಾದ ಗ್ರಾಹಕರು ಅಮೆರಿಕನ್ ತಂತ್ರಜ್ಞಾನದ ಮೇಲೆ ಅವಲಂಬಿತರಾಗಿರುವಂತೆ ಮಾಡಲು ಸಾಧ್ಯ ಎಂದು ಹುವಾಂಗ್ ವಾದಿಸಿದ್ದಾರೆ.

ಆದರೆ, ಎನ್‌ವಿಡಿಯಾದ ಅತ್ಯಂತ ಶಕ್ತಿಶಾಲಿ AI ಚಿಪ್‌ಗಳು ಸಿಕ್ಕರೆ, ಅದು ಚೀನಾಕ್ಕೆ ಶಸ್ತ್ರಾಸ್ತ್ರ ವಿನ್ಯಾಸ, ಗೂಢಚಾರಿಕೆ ವಿಶ್ಲೇಷಣೆ ಮತ್ತು ಮಿಲಿಟರಿ ಆಧುನೀಕರಣಕ್ಕಾಗಿ ಂಖ ವ್ಯವಸ್ಥೆಗಳನ್ನು ವೇಗವಾಗಿ ಅಭಿವೃದ್ಧಿಪಡಿಸಲು ನೆರವಾಗುತ್ತದೆ ಎಂದು ಕೆಲವು ಅಮೆರಿಕನ್ ಸಂಸದರು ಹೇಳುತ್ತಾರೆ. ಕಾಂಗ್ರೆಸ್‌ನಲ್ಲಿರುವ ಡೆಮಾಕ್ರಟ್‌ಗಳು ಮತ್ತು ರಿಪಬ್ಲಿಕನ್ನರು ಇಬ್ಬರೂ, ಚಿಪ್–ಟ್ರ್ಯಾಕಿಂಗ್ ನಿಯಮಗಳು ಮತ್ತು ರಫ್ತುಗಳ ಮೇಲೆ ಹೆಚ್ಚಿನ ಕಾಂಗ್ರೆಸ್ ಉಸ್ತುವಾರಿ ಸೇರಿದಂತೆ ಸುಧಾರಿತ ಂಖ ಚಿಪ್‌ಗಳಿಗೆ ಚೀನಾದ ಪ್ರವೇಶದ ಮೇಲೆ ಕಟ್ಟುನಿಟ್ಟಿನ ನಿಯಂತ್ರಣ ಹೇರಲು ಒತ್ತಾಯಿಸಿದ್ದಾರೆ. ಆರೋಪಿತ ಚೀನೀ ಗೂಢಚಾರಿ ಏಜೆಂಟ್‌ನೊಂದಿಗೆ ಸಂಪರ್ಕ ಹೊಂದಿದ್ದಾರೆ ಎಂಬ ವರದಿಗಳ ಕುರಿತು ನವೆಂಬರ್ 18 ರಂದು ವಿವರಣೆ ನೀಡುವಂತೆ ಮೂವರು ರಿಪಬ್ಲಿಕನ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು ಹುವಾಂಗ್ ಅವರನ್ನು ಕೋರಿದ್ದಾರೆ.

ಅಮೆರಿಕ–ಚೀನಾ ಮಹಾ ಒಪ್ಪಂದ ಭಾರತದ ಮೇಲೆ ಪರಿಣಾಮ ಬೀರುವ ಸಾಧ್ಯತೆ: ತಜ್ಞರು

ದೆಹಲಿ, ನವೆಂಬರ್ 11: ಅಮೆರಿಕ ಮತ್ತು ಚೀನಾ ನಡುವಿನ ಸಂಭಾವ್ಯ 'ಮಹಾ ಒಪ್ಪಂದ'ವು, ವಿಶೇಷವಾಗಿ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಅಡಿಯಲ್ಲಿ, ಭಾರತದ ಮೇಲೆ, ಅದರಲ್ಲೂ ನಿರ್ದಿಷ್ಟವಾಗಿ ಇಂಡೋ–ಪೆಸಿಫಿಕ್ ಪ್ರದೇಶಕ್ಕೆ ಸಂಬಂಧಿಸಿದಂತೆ ಮಹತ್ವದ ಪರಿಣಾಮಗಳನ್ನು ಬೀರಬಹುದು. ವಿದೇಶಾಂಗ ವ್ಯವಹಾರಗಳ ತಜ್ಞ ರೋಬಿಂದರ್ ಸಚ್‌ದೇವ್ ಈ ಸಾಧ್ಯತೆಯನ್ನು ಎತ್ತಿ ತೋರಿಸಿದ್ದು, ಯುಎಸ್ ಮಧ್ಯಂತರ ಚುನಾವಣೆಯ ಫಲಿತಾಂಶಗಳು ಟ್ರಂಪ್ ಅವರನ್ನು ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಇನ್ನಷ್ಟು ಸಕ್ರಿಯರನ್ನಾಗಿ ಮಾಡಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ. ವಾಷಿಂಗ್ಟನ್ ಮತ್ತು ಬೀಜಿಂಗ್ ನಡುವಿನ ವ್ಯಾಪಾರ ಮತ್ತು ಸಹ–ಅಸ್ತಿತ್ವದ ಕುರಿತಾದ ವಿಶಾಲವಾದ ಒಪ್ಪಂದವಾದ 'G2 ಸೂತ್ರ'ವನ್ನು ಟ್ರಂಪ್ ಬೆಂಬಲಿಸುವಂತೆ ತೋರುತ್ತಿದೆ ಎಂದು ಸಚ್‌ದೇವ್ ಗಮನಸೆಳೆದಿದ್ದಾರೆ. ಈ ವ್ಯವಸ್ಥೆಯು ಜಾಗತಿಕ ಪ್ರಭಾವವನ್ನು ಯುಎಸ್‌ಗೆ ಪಶ್ಚಿಮ ಗೋಳಾರ್ಧ ಹಾಗೂ ಚೀನಾಕ್ಕೆ ಇಂಡೋ–ಪೆಸಿಫಿಕ್ ಎಂದು ವಿಭಜಿಸುವ ಸಾಧ್ಯತೆಯಿದ್ದು, ಇದು ಭಾರತದ ಕಾರ್ಯತಂತ್ರದ ಹಿತಾಸಕ್ತಿಗಳ ಮೇಲೆ ಪರಿಣಾಮ ಬೀರಬಹುದು. ಆದಾಗ್ಯೂ, ಇಂತಹ ಯಾವುದೇ ಒಪ್ಪಂದವು ಅಮೆರಿಕ ಕಾಂಗ್ರೆಸ್‌ನಿಂದ, ವಿಶೇಷವಾಗಿ ಚೀನಾ ಕುರಿತು ಕಠಿಣ ನಿಲುವು ಹೊಂದಿರುವ ಡೆಮಾಕ್ರಟ್‌ಗಳಿಂದ ಪ್ರತಿರೋಧವನ್ನು ಎದುರಿಸಬಹುದು ಎಂದು ಅವರು ಎಚ್ಚರಿಕೆ ನೀಡಿದ್ದಾರೆ. ದೇಶೀಯ



ಅಡಚಣೆಗಳನ್ನು ಎದುರಿಸುತ್ತಿರುವ ಅಮೆರಿಕ ಅಧ್ಯಕ್ಷರು, ರಾಷ್ಟ್ರೀಯ ಭದ್ರತೆಯಲ್ಲಿ ಕಾರ್ಯನಿರ್ವಾಹಕ ಅಧಿಕಾರವು ವಿಶಾಲವಾಗಿರುವುದರಿಂದ, ಸಾಮಾನ್ಯವಾಗಿ ವಿದೇಶಿ ವ್ಯವಹಾರಗಳಲ್ಲಿ ಹೆಚ್ಚಿನ ಪ್ರಭಾವ ಬೀರಲು ಬಯಸುತ್ತಾರೆ ಎಂದೂ ಅವರು Observ ಮಾಡಿದರು. ಮಧ್ಯಂತರ ಚುನಾವಣೆಯ ಫಲಿತಾಂಶಗಳಿಂದ ಟ್ರಂಪ್ ಅವರ ದೇಶೀಯ ಕಾರ್ಯಸೂಚಿಯು ತೊಂದರೆಗೊಳಗಾಗುವ ಸಾಧ್ಯತೆಯಿರುವುದರಿಂದ, ಅವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಇನ್ನಷ್ಟು ತೊಡಗಿಸಿಕೊಳ್ಳುತ್ತಾರೆ ಎಂದು ಸಚ್‌ದೇವ್ ನಿರೀಕ್ಷಿಸಿದ್ದಾರೆ. ಅಮೆರಿಕ ಮತ್ತು ಚೀನಾ ಇತ್ತೀಚೆಗೆ 30 ಶತಕೋಟಿ ಡಾಲರ್ ಮೌಲ್ಯದ ಸಂವೇದನಾಶೀಲವಲ್ಲದ ಸರಕುಗಳಿಗೆ ಅನುಕೂಲಕರ ಸುಂಕದ ಚಿಕಿತ್ಸೆಯ ಬಗ್ಗೆ ಒಪ್ಪಂದಕ್ಕೆ ಬಂದಿವೆ, ಇದು ಅವರ ವ್ಯಾಪಾರ ಮಾತುಕತೆಗಳಲ್ಲಿ ಪ್ರಗತಿಯನ್ನು ಸೂಚಿಸುತ್ತದೆ. ಈ ಬೆಳವಣಿಗೆಯು ಜಾಗತಿಕ ಶಕ್ತಿ ಸಮತೋಲನದಲ್ಲಿ ನಡೆಯುತ್ತಿರುವ ಬದಲಾವಣೆಗಳನ್ನು ಮತ್ತು ಭಾರತದಂತಹ ದೇಶಗಳ ಮೇಲೆ ಅವು ಉಂಟುಮಾಡುವ ಸಂಭಾವ್ಯ ಅಲೆಗಳ ಪರಿಣಾಮಗಳನ್ನು ಒತ್ತಿಹೇಳುತ್ತದೆ.

ಐಪಿಎಲ್‌ನಲ್ಲಿ ಅರ್ಶದೀಪ್ ಬದಲಿಗೆ ಮುಂಬೈ ತಂಡದ ನಾಯಕ ಪಾಂಡ್ಯ ಪಂಜಾಬ್‌ಗೆ ವರ್ಗಾವಣೆ

ನವದೆಹಲಿ, ನವೆಂಬರ್ 11: ಮುಂದಿನ ವರ್ಷದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಗೂ ಮುನ್ನ ಎಡಗೈ ಸೀಮರ್ ಅರ್ಶದೀಪ್ ಸಿಂಗ್ ಬದಲಿಗೆ ಮುಂಬೈ ಇಂಡಿಯನ್ಸ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಅವರನ್ನು ಪಂಜಾಬ್ ಕಿಂಗ್ಸ್‌ಗೆ ವಿನಿಮಯ ಮಾಡಿಕೊಂಡಿದೆ ಎಂದು ಟ್ವೆಂಟಿ20 ಸ್ಪರ್ಧೆಯ ಆಯೋಜಕರು ಬುಧವಾರ ತಿಳಿಸಿದ್ದಾರೆ. ಫ್ರಾಂಚೈಸಿಗಳು ತಮ್ಮ ಉಳಿಸಿಕೊಳ್ಳುವಿಕೆ ಮತ್ತು ಬಿಡುಗಡೆ ಪಟ್ಟಿಗಳನ್ನು ಸಲ್ಲಿಸಲು ನವೆಂಬರ್ 17 ಕೊನೆಯ ದಿನಾಂಕವಾಗಿದ್ದು, ಐಪಿಎಲ್ ಮಿನಿ–ಹರಾಜು ಡಿಸೆಂಬರ್ 16 ರಂದು ಗೋವಾದಲ್ಲಿ ನಡೆಯಲಿದೆ. ಆಲ್–ರೌಂಡರ್ ಪಾಂಡ್ಯ 2024ರಿಂದ ಮುಂಬೈ ತಂಡದ ನಾಯಕರಾಗಿದ್ದಾರೆ. ಐದು ಬಾರಿ ಚಾಂಪಿಯನ್ ಆಗಿರುವ ಈ ತಂಡದೊಂದಿಗೆ ಎರಡು ಅವಧಿಯಲ್ಲಿ ಅವರು ನಾಲ್ಕು ಐಪಿಎಲ್ ಪ್ರಶಸ್ತಿಗಳನ್ನು ಗೆದ್ದಿದ್ದಾರೆ.

